ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, the 5th July 1972/Ashadha 14, 1894 (S. E.)

The House met in the Assembly Chamber, Vidhana Soudha, at Twelve of the Clock.

MADAM SPEAKER (SMT. K. S. NAGARATHAMMA) in the Chair.

Revised Budget Estimates for 1972-73—Demand Nos. 10, 12, 13, 29, 30, 45, 46 and 23.

(Debate Continued)

ಶ್ರೀ ಎಸ್. ಬಂಗಾರಪ್ಪ (ಸೊರಬ).—ನಾನೊಂದು ನಿಲುವಳಿ ಸೂಚನೆಯನ್ನು ಕಳಿಸಿದ್ದೆ. ಇಂದು ಪ್ರಶ್ನೋತ್ತರ ಕಾಲವಿಲ್ಲ:

ಅಧ್ಯಕ್ಷರು.—ಈ ದಿವಸ ಅದನ್ನು ತೆಗೆದುಕೊಳ್ಳುವುದಿಲ್ಲ, ಇಂದು ಮಂತ್ರಿಗಳ ರಿಪ್ಲೈ ಇದೆ. ನಾಳೆ ತೆಗೆದುಕೊಳ್ಳೋಣ.

†ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾನು ಈ ಸಭೆಯಲ್ಲಿ ಮಂಡಿಸಿದ ಬೇಡಿಕೆಗಳ ಮೇಲೆ ಸಾಕಷ್ಟು ಜನರು ಮಾತನಾಡಿದ್ದಾರೆ ಮತ್ತು ಅನೇಕ ಪ್ರಮುಖ ವಿಷಯಗಳನ್ನು ಮಾನ್ಯ ಸದಸ್ಯರುಗಳು ಚರ್ಚೆಮಾಡಿದ್ದಾರೆ. ಕೆಲವು ಸದಸ್ಯರು ಸರಕಾರ ಪರಿಶೀಲನೆ ಮಾಡುವುದಕ್ಕೆ ಯೋಗ್ಯವಾದ ಸಲಹೆಗಳನ್ನು ಕೊಡ ಕೊಟ್ಟಿದ್ದಾರೆ. ನಮ್ಮ ಎದುರು ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ದೀರ್ಘವಾದ ಭಾಷಣ ಮಾಡಿದರು. ಅವರು ಈ ಸಭೆಯಲ್ಲಿ ಒಂದು ಪಕ್ಷವನ್ನು ಪ್ರತಿಬಿಂಬಿಸುತ್ತಾರೆ. ಜೊತೆಗೆ ಇಡೀ ಎದುರು ಪಕ್ಷದವರು ಒಂದಾಗಿ ಕೆಲಸಮಾಡುತ್ತಿದ್ದಾರೆ. ಎದುರು ಪಕ್ಷದಲ್ಲಿ ಸಮಾಜವಾದಿ ಪಕ್ಷಕ್ಕೆ ಸೇರಿದ ಸದಸ್ಯರಿದ್ದಾರೆ ಮತ್ತು ನಮ್ಮ ಕಮ್ಯೂನಿಸ್ಟ್ ಸ್ನೇಹಿತರುಗಳೂ ಇದ್ದಾರೆ, ಕೆಲವರು ಸ್ವತಂತ್ರ ಸದಸ್ಯರೂ ಇದ್ದಾರೆ. ಈ ಎದುರು ಪಕ್ಷದಲ್ಲಿ ಮಾತನಾಡಿದ ಎಲ್ಲರ ಭಾಷಣವನ್ನೂ ನಾನು ಕುತೂಹಲದಿಂದ ಕೇಳಿದ್ದೇನೆ. ಇದರಿಂದ ನನಗೆ ಭಾಸವಾದದ್ದು ಏನೆಂದರೆ, ನಮ್ಮ ಶ್ರೀಮಾನ್ ದೇವೇಗೌಡರು ಮತ್ತು ಅವರ ಪಕ್ಷದವರು ಹೇಳತಕ್ಕ ವಿಚಾರಗಳು ಅವರ ಸರಣಿ ನೋಡಿದರೆ ಸರಕಾರದ ಲೋಪದೋಷಗಳನ್ನು ಎತ್ತಿ ತೋರಿಸಬೇಕು ಎಂಬ ಮನೋಭಾವ ಹಿನ್ನೆಲೆಯಾಗಿಟ್ಟುಕೊಂಡು ಅವರು ಮಾತನಾಡಿದ್ದಾರೆಂದು ಕಾಣುತ್ತದೆ. ಸಮಾಜವಾದಿ ಪಕ್ಷ ಮತ್ತು ಕಮ್ಯೂನಿಸ್ಟ್ ಪಕ್ಷ ಮತ್ತು ಇತರ ಪಕ್ಷಗಳ ಸ್ನೇಹಿತರು ಮಾತನಾಡಿದ ಸರಣಿ ನೋಡಿದರೆ ಅವರ ಮನೋಭಾವನೆ ಮತ್ತು ಹಿನ್ನೆಲೆ ನೋಡಿದರೆ ಎರಡು ಪಕ್ಷಗಳವರೂ ಹೇಳುವುದಕ್ಕೆ ಸ್ವಲ್ಪ ವ್ಯತ್ಯಾಸ ಎದ್ದು ಕಾಣುವುದು. ನಮ್ಮ ಎದುರು ಪಕ್ಷದ ನಾಯಕರು ಮತ್ತು ಕೆಲವು ಸ್ನೇಹಿತರು ಸಂದರ್ಭ ಬಂದಾಗಲೆಲ್ಲಾ ಹಿಂದೆ ನಡೆದ ವಿಚಾರಗಳನ್ನು

---

† Indicates that the remarks or speeches have not been revised by the member concened.

(ಶ್ರೀ ಡಿ. ದೇವರಾಜ ಅರಸ್)

ಪ್ರಸ್ತಾಪಮಾಡುವುದು, ನಾವು ಆ ಕಡೆ ಇದ್ದಾಗ ಏನು ಹೇಳುತ್ತಿದ್ದೆವು, ಈಗೇನು ಹೇಳುತ್ತಿದ್ದೇವೆ, ಹಿಂದೆ ಸರಕಾರವೇನು ಮಾಡುತ್ತಿತ್ತು ಎಂಬುದನ್ನು ಹೇಳಿ ಹೋಲಿಕೆ ಮಾಡಿ ಟೀಕೆ ಮಾಡುತ್ತಿದ್ದಾರೆ. ಹಿಂದೆ ನಾವು ಹಿಂದಿನ ಸರಕಾರ ಮಾಡಿದ್ದನ್ನು ಪ್ರತಿಯೊಂದು ಸಂದರ್ಭದಲ್ಲೂ ತಪ್ಪು ಎಂದು ಹೇಳುತ್ತಿದ್ದೆವು ಎಂದು ಊಹೆಮಾಡಿಕೊಂಡು ಅದಕ್ಕೆ ಈಗ ಪ್ರತಿಭಟಿಸಬೇಕು ಎಂಬ ಮನೋಭಾವನೆ ಪಡೆದಿರುವಂತೆ ಮಾತನಾಡುವುದು ಎದ್ದು ಕಾಣುತ್ತದೆ. ಆ ಧಾಟಿಯಲ್ಲಿ ಅವರು ಇಲ್ಲಿ ಮಾತನಾಡುತ್ತಿರುವುದೂ ಕಂಡುಬರುತ್ತದೆ. ಡಾ ಲೋಹಿಯಾ ಪಕ್ಷಕ್ಕೆ ಸೇರಿರುವ ಒಂದು ಪಕ್ಷದವರು ಇಲ್ಲಿದ್ದಾರೆ. ಕಮ್ಯೂನಿಸ್ಟ್ ಮಿತ್ರರು ಮಾರ್ಕ್ಸ್‌ವಾದಿಗಳು. ಈ ಉಭಯಮಿತ್ರರಲ್ಲೂ ಒಂದು ವಿಚಾರದಲ್ಲಿ ಏಕರೀತಿಯ ಭಾವನೆಯಿದೆ ಎಂಬುದು ನನ್ನ ಭಾವನೆ. ಈ ದೇಶದಲ್ಲಿ ಜಾಗ್ರತೆ ಜಾಗ್ರತೆಯಾಗಿ ಕೆಲಸಗಳು ನಡೆಯಬೇಕು, ಸಾಮಾನ್ಯ ಜನರ ಹಿತರಕ್ಷಣೆಯಾಗಬೇಕು, ಅವರ ಜೀವನ ಉತ್ತಮವಾಗಬೇಕು ಎಂಬ ವಿಚಾರಗಳಲ್ಲಿ ಅವರಿಗೆ ತುಂಬ ಕಾತುರತೆಯಿದೆ. ಆದರೆ ಅವರಿಬ್ಬರಿಗೂ ನಾವು ಹೋಗುತ್ತಿರುವ ಮಾರ್ಗ ಅಷ್ಟಾಗಿ ಹಿಡಿಯುತ್ತಿಲ್ಲ. ಏಕೆಂದರೆ ನಾವು ಬೇಗ ಬೇಗ ಈ ವಿಷಯದಲ್ಲಿ ಮುಂದುವರಿಯುತ್ತಿಲ್ಲ ಎಂಬುದು ಅವರ ಮನೋಭಾವನೆ ಇದ್ದಹಾಗಿದೆ. ಮತ್ತು ನಾವು ಹಳೇ ದಾರಿಯಲ್ಲಿ ಹೋಗುತ್ತಿದ್ದೇವೆ ಎಂಬ ಭಾವನೆ ಅವರಿಗೆ ಇರುವಂತೆ ಭಾಸವಾಗುತ್ತದೆ. ಈ ಬಗ್ಗೆ ನಾನು ಚಿಂತನೆ ಮಾಡಿದ್ದೇನೆ. ಈ ನಮ್ಮ ಇಂಡಿಯಾ ದೇಶದಲ್ಲಿ ಕಮ್ಯೂನಿಸ್ಟರು ಮತ್ತು ಸೋಷಿಯಲಿಸ್ಟರು ಒಂದೇ ಸಮನೆ ಈ ಮಾತನ್ನು ಹೇಳುತ್ತಾ ಬಂದಿದ್ದಾರೆ. ಜನತೆ ಇದನ್ನೆಲ್ಲಾ ಕೇಳಿದೆ, ನಾವು ಹೇಳುವುದನ್ನೂ ಕೇಳಿದೆ, ನಮ್ಮ ದಾರಿಯನ್ನೂ ನೋಡಿದೆ.

ಇದನ್ನೆಲ್ಲಾ ನೋಡಿ ಅವರು ಚುನಾವಣೆಯಲ್ಲಿ ತೀರ್ಮಾನಕ್ಕೆ ಬರುತ್ತಿದ್ದಾರೆ. ಮೊದಲಿನಿಂದ ಇದ್ದ ಸೋಷಿಯಲಿಸ್ಟ್ ದಾರಿಯನ್ನು ಜನ ನೋಡಿದ್ದಾರೆ. ಡಾ. ಲೋಹಿಯಾರವರನ್ನು ನೋಡಿದ್ದಾರೆ. ಅವರ ಪಂಥ ಏನು ಎಂದು ನೋಡಿದ್ದಾರೆ. ಪ್ರತಿಯೊಂದು ಚುನಾವಣೆಯಲ್ಲೂ ನೋಡುತ್ತಾ ಬಂದಿದ್ದಾರೆ. ನಾವು ಯಾವ ದಾರಿಯಲ್ಲಿ ಹೋಗಬೇಕೆಂದು ನಾವು ಜನತೆಗೆ ಹೇಳಿದ್ದೇವೆ. ಜನತೆಗೆ ಗೊತ್ತಿದೆ. ನಮ್ಮ ಸ್ನೇಹಿತರಲ್ಲಿ ಮನವಿ ಮಾಡುವುದು ಇಷ್ಟೇ. ಗುರಿ ಮುಟ್ಟತಕ್ಕಂಥ ಧ್ಯೇಯ ಏನಿದೆ Objective before us ಅದರ ಬಗ್ಗೆ ನಮಗೆ ನಿಮಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಇಷ್ಟು ದೂರ ಹೋಗಿ ಹೇಳುತ್ತೇನೆ ನಮ್ಮ ಬಲ ಪಂಥ ಕಮ್ಯೂನಿಸ್ಟ್ಸ್ ಮತ್ತು ಸೋಷ್ಯಲಿಸ್ಟ್ಸ್ ಏನು ಇದ್ದಾರೆ ಅವರ ಜೊತೆಯಲ್ಲಿ ನನಗಂತೂ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಒಂದು ಮಾತು, Politics is an art of the possibility.

ಶ್ರೀ ಎಂ. ಎಸ್. ಕೃಷ್ಣನ್.—ಅಪರ್ಚುನಿಸ್ಟಿಕ್ ಆರ್ಟ್.

ಶ್ರೀ ಡಿ. ದೇವರಾಜ ಅರಸ್.—ಅಪರ್ಚುನಿಸ್ಟಿಕ್ ಸನ್ನಿವೇಶ ನೋಡಿಕೊಂಡು ಮಾಡಬೇಕಾಗುತ್ತದೆ. ಎಲ್ಲಾ ಸನ್ನಿವೇಶವನ್ನೂ ದಾಟಿ ಒತ್ತರಿಸಿ ಹಾಕಿದ್ದಾರೆ. ಅದನ್ನು ನೋಡಿದ್ದೇವೆ. ಕೇರಳದಲ್ಲಿ ಮಾಡಿದ್ದಾರೆ. ಆ ದಾರಿಯನ್ನು ಹಿಡಿದು ವೆಸ್ಟ್ ಬೆಂಗಾಲ್‌ನಲ್ಲಿ ಮಾಡಿದ್ದಾರೆ. ಆದರೆ ಜನ ಏನು ಕಾರಣದಿಂದಲೋ ಅದಕ್ಕೆ ಅಷ್ಟು ಮಾನ್ಯತೆ ಕೊಡುವುದಿಲ್ಲ. ನಾನು ತಪ್ಪು ಸರಿ ಎನ್ನುವ ಮಾತಿಗೆ ಹೋಗುವುದಿಲ್ಲ. ನಿಮ್ಮದು ಸರಿ ಇರಬಹುದು. ದೇಶ ಜನತೆಯನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗಬೇಕಾಗಿದೆ. ಸಾವಿರಾರು ವರ್ಷಗಳಿಂದ ಬಂದಿರತಕ್ಕ ನಾನಾ ರೀತಿಯ ಅಭಿಪ್ರಾಯಗಳು ಒಳ್ಳೆಯದು ಕೆಟ್ಟದ್ದು ಎಲ್ಲಾ ಇದೆ. ಹಠಾತ್ತನೆ ಬದಲಾವಣೆ ಆಗಬೇಕು ಎಂದು ಹೇಳಿದರೆ ಅದಕ್ಕೆ ಡೆಮಾಕ್ರೆಟಿಕ್ ಸಿಸ್ಟಂನಿಂದ ಬಹುಶಃ ಸಾಧ್ಯವಾಗುವುದಿಲ್ಲ, ಸಾಧ್ಯವೂ ಇಲ್ಲ. ಇದು ಸ್ವಲ್ಪ ಇವಲ್ಯೂಷನರಿ ಮೆಥೆಡ್. ರೆವಲ್ಯೂಷನರಿ ಆಗಬೇಕಾದರೆ ನಿಮ್ಮ ಮಾತಿನಲ್ಲಿ ಆಗಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮದು ಒಪ್ಪಿಕೊಳ್ಳುತ್ತೀರಾ !

ಶ್ರೀ ಡಿ. ದೇವರಾಜ ಅರಸ್.—ರಷ್ಯಾದಲ್ಲಿ ನಡೆದಿದೆ. ಚೈನಾದಲ್ಲಿ ನಡೆದಿದೆ. ಆ ಮೆಥೆಡ್‌ನಲ್ಲಿ ನಡೆದಿರತಕ್ಕ ಕ್ರಾಂತಿಕಾರಕ ಬದಲಾವಣೆಗಳು ಪ್ರಪಂಚದಲ್ಲಿ ನೋಡಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ.—ಆ ಮೆಥಡ್ ಅಡಾಪ್ಟ್ ಮಾಡಬೇಕೆಂದು ತಾವು ಹೇಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ನಾನು ಹೇಳುವುದನ್ನು ಸ್ವಲ್ಪ ಸಾವಧಾನವಾಗಿ ಕೇಳಿ. ಅನುಮಾನ ಬಂದರೆ ಉತ್ತರ ಕೊಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ಶಾಮಣ್ಣನವರಿಗೆ ಹೆದರಿಕೆ ಹುಟ್ಟಿಕೊಂಡುಬಿಟ್ಟಿದೆ. ಎಲ್ಲಿ ರೆವಲ್ಯೂಷನರಿ ಮೆಥೆಡ್ ಉಪಯೋಗಿಸುತ್ತಾರೋ ಎಂದು.

ಶ್ರೀ ಡಿ. ದೇವರಾಜ ಅರಸ್.—ಈ ಒಂದು ಧಾಟಿಯಲ್ಲಿ ಬದಲಾವಣೆ ಮಾಡಬೇಕಾದರೆ ಪೊಲಿಟಿಕಲ್ ಸಿಸ್ಟಂ ಸ್ವಲ್ಪ ಬದಲಾವಣೆ ಆಗಬೇಕು. ಬಹುಶಃ ಅದನ್ನು ಒಪ್ಪುತ್ತಾರೆ. ಆ ಒಂದು ಪೊಲಿಟಿಕಲ್ ಸಿಸ್ಟಂ ಬದಲಾವಣೆ ಆದಾಗ ತಾವು ಯಾವ ವೇಗದಲ್ಲಿ ಹೋಗಬೇಕು ಎಂದು ಅಪೇಕ್ಷೆ ಪಡುತ್ತೀರೋ ಆ ವೇಗದಲ್ಲಿ ಹೋಗುವುದಕ್ಕೆ ಸಾಧ್ಯ ಆದೀತು. ಈಗ ನಮ್ಮ ದೇಶದ ಜನ ನಾವು ಡೆಮಾಕ್ರೆಟಿಕ್ ಸಿಸ್ಟಂ ಒಪ್ಪಿಕೊಂಡಿದ್ದೇವೆ. ಅಲ್ಲೂ ಡೆಮಾಕ್ರೆಟಿಕ್ ಸಿಸ್ಟಂ ಇರಬಹುದು ಎಂದು ನೀವು ವಾದ ಮಾಡಬಹುದು. ಅದರ ಬಗ್ಗೆ ಚರ್ಚೆಗೆ ಹೋಗುವುದಿಲ್ಲ. Democracy itself is described in so many ways. ಒಂದು ಕಡೆ ಇಂಡೋನೇಷಿಯಾದ ಸುಕಾರ್ನೋ ಹೇಳಿದರು "It is a guided democracy—controlled democracy." ಎಂದು. Perhaps in Russia and China they still call it a democratic system—a controlled democratic system.

Sri M. S. KRISHNAN.—Socialism is also one form of democracy.

ಶ್ರೀ ಡಿ. ದೇವರಾಜ ಅರಸ್.—ಇದರ ಬಗ್ಗೆ ಜಗಳ ಇಲ್ಲ. ನಾವು ವೆಸ್ಟ್‌ರ್ನ್ ಸಿಸ್ಟಂ ಆಫ್ ಡೆಮಾಕ್ರಸಿ ಅಡಾಪ್ಟ್ ಮಾಡಿದ್ದೇವೆ. ಪಾರ್ಲಿಮೆಂಟರಿ ಸಿಸ್ಟಂ ಆಫ್ ಡೆಮಾಕ್ರಸಿಯಲ್ಲಿ ಚರ್ಚೆಯಾಗಿ, ಜನತೆ ಒಂದು ಭಾಗ ಒಪ್ಪಿ, ಮನಸ್ಸು ಪರಿವರ್ತನೆಯಾಗಿ, ಕಾನೂನಾಗಿ ಆ ಕಾನೂನು ಜಾರಿ ಮಾಡಿ ಅಲ್ಲಿ ಬದಲಾವಣೆ ಆಗಬೇಕು. ಈಗ ಇರತಕ್ಕ ಪಾರ್ಲಿಮೆಂಟರಿ ಸಿಸ್ಟಂ ಆಫ್ ಡೆಮಾಕ್ರಸಿಯಲ್ಲಿ ನಾವು ಇಷ್ಟು ಬೇಗ ಹೋಗುವುದಕ್ಕೆ ಸಾಧ್ಯ ಎನ್ನುವುದು ನಮ್ಮ ಪ್ರಯತ್ನ. ನಾವು ಸ್ವತಂತ್ರರಾದಮೇಲೆ 24–25 ವರ್ಷಗಳಲ್ಲಿ ಈ ಕಾಂಗ್ರೆಸ್ ಸರಕಾರ ಸೂತ್ರವನ್ನು ಹಿಡಿದು ಕೆಲಸ ಮಾಡಿ ಬಂದಿದೆ. ಈಗ ನಮ್ಮ ಕಾಂಗ್ರೆಸ್ ಸಂಸ್ಥೆಯಲ್ಲಿ ಒಡಕು ಆದಮೇಲೆ, ಕೆಲವು ಬದಲಾವಣೆಗಳು ಆದಮೇಲೆ, ನಾವು ಯಾರು ಈ ಸಂಸ್ಥೆ ಧಾಟಿಯಲ್ಲಿ ಹೋಗುವುದು ದೇಶದ ಹಿತದೃಷ್ಟಿಯಿಂದ ಸರಿಯಲ್ಲ ಎಂದು ಅಭಿಪ್ರಾಯ ಪಡೆದಿದ್ದೆವೋ ಅವರೆಲ್ಲರೂ ಒಂದು ಕಡೆ ಆದಾಗ, ನಾವು ಕೆಲವು ಆರ್ಥಿಕ ಮತ್ತು ಸಾಮಾಜಿಕ ರಂಗದಲ್ಲಿ ಬದಲಾವಣೆಗಳನ್ನು ಮಾಡಬೇಕು ಎಂದು ಹೇಳಿ ಆ ಬದಲಾವಣೆಗಳನ್ನು ಮಾಡುವಾಗ ಅದು ಕುಂಠಿತವಾಗಿ, ನಿಧಾನವಾಗಿ ಕಾಲು ಹಾಕಿ ನಡೆದರೆ ಜನ ಬೇಸರಗೊಂಡಾರು. ಅವರು ಹೆಚ್ಚು ಕಾಲ ನೋಡಿ ಸುಮ್ಮನೆ ಇರುವುದಕ್ಕೆ ಆಗುವುದಿಲ್ಲ. ನಾವು ಅವರನ್ನು ಹಸಿವು, ತೃಷೆಯಿಂದ ಬಹಳ ಕಾಲದಿಂದ ಕಾಯಿಸುತ್ತಿದ್ದೇವೆ. ಇದು ಸರಿಯಲ್ಲ. ಬೇಗ ಬೇಗ ಕೆಲವು ಬದಲಾವಣೆಗಳನ್ನು ಮಾಡಬೇಕಾಗುತ್ತದೆ ಎಂದು ಹೇಳಿ ಆ ಅಭಿಪ್ರಾಯವನ್ನು ದೇಶದ ಮುಂದೆ ಇಟ್ಟೆವು. ಈಗ ನಮ್ಮ ಹಾದಿ ತಾವು ಹೇಳಿದ ಹಾಗೆ ಹೊಸದು ಅಲ್ಲ ಹಳೆಯದು ಎಂದು ಹೇಳಿದರೆ ಒಂದು ರೀತಿಯಲ್ಲಿ ಇದು ಹೊಸದೂ ಹೌದು, ಹಳೆಯದೂ ಹೌದು. ಪೂರ್ಣವಾಗಿ ಹಳೆಯದನ್ನೆಲ್ಲಾ ಬಿಡುತ್ತೇವೆ ಎಂದು ನಾನು ಹೇಳುವುದಕ್ಕೆ ಸಾಧ್ಯವಿಲ್ಲ. ಹಾಗೆ ಬಿಡುವುದಕ್ಕೆ ಈಗಿನ ಸೆಟಪ್ ಅಂಡ್ ಸಿಸ್ಟಂನಲ್ಲಿ ಸಾಧ್ಯವಿಲ್ಲ. ಅಥವಾ ಪೂರ್ಣವಾಗಿ ಅದನ್ನು ಬಿಡುವುದಿಲ್ಲ, ಎಲ್ಲವನ್ನೂ ಪೂರ್ಣವಾಗಿ ಇಟ್ಟುಕೊಳ್ಳಬೇಕು ಎಂದು ಏನೂ ಇಲ್ಲ. ಈಗ ಹಳೆಯದಕ್ಕೆ ಎಷ್ಟು ಮಾನ್ಯತೆ ಕೊಡಬೇಕೋ ಅಷ್ಟು ಮಾನ್ಯತೆ ಕೊಟ್ಟು ಮತ್ತೆ ಹೊಸ ಮಾರ್ಗವನ್ನು ಹುಡುಕತಕ್ಕಂಥ ಒಂದು ಮಹಾ ಪ್ರಯತ್ನ ನಮ್ಮದು ಇದೆ. ನನ್ನ ದೃಷ್ಟಿಯಲ್ಲಿ ಮಾನ್ಯ ಅಧ್ಯಕ್ಷರೇ, ಈ ದೇಶದಲ್ಲಿ ನಡೆಯುತಕ್ಕದ್ದು ಒಂದು ದೊಡ್ಡ ಎಕ್ಸ್‌ಪರಿಮೆಂಟ್ ನಡೆದಹಾಗೆ ನಡೆಯುತ್ತಿದೆ. ಎಲ್ಲಾ ಸಿಸ್ಟಂಗಳು ಕೂಡ ಯಾವುದೇ ದೇಶದಲ್ಲಿ ಸಾವಿರಾರು ವರ್ಷಗಳಿಂದ ಬಂದಿದೆ ಎಂದು ಯಾರೂ ಹೇಳುವುದಕ್ಕೆ ಆಗುವುದಿಲ್ಲ. ಮಾರ್ಕ್ಸಿಸ್ಟ್ ಹೇಳತಕ್ಕ ಥಿಯರಿ ಮಾರ್ಪಾಟು ಆಗಿದೆ. ರಷ್ಯಾ ಹೋಗುವುದು ರೆವಲ್ಯೂಷನರಿ ಮೆಥಡ್ ಎಂದು ಚೈನಾ ಹೇಳುತ್ತದೆ. ಅವರ ಇಂಟರ್‌ಪ್ರಿಟೇಷನ್ ಬೇರೆ ಆಗಿದೆ. ಈಸ್ಟರ್ನ್ ಯುರೋಪಿಯನ್ ಕಂಟ್ರೀಸ್‌ನಲ್ಲಿ ಇರತಕ್ಕ ಸೋಷಿಯಲಿಸ್ಟ್ ಕಂಟ್ರೀಸ್ ಸ್ವಲ್ಪ ಕೆಲವು ಮಾರ್ಪಾಟುಗಳನ್ನು ಮಾಡಿಕೊಂಡಿದ್ದಾರೆ. ನಾವು ಕೂಡ ಈ ಡೆಮಾಕ್ರೆಟಿಕ್ ಮೆಥಡ್, ಡೆಮಾಕ್ರೆಟಿಕ್ ಸ್ಟ್ರಕ್ಚರ್‌ನಲ್ಲಿ ನಮ್ಮ ಇಂಡಿಯಾ ದೇಶಕ್ಕೆ ಯಾವ ರೀತಿ ಅನ್ವಯಿಸಬೇಕು ; ಡೆಮಾಕ್ರಸಿ, ಸೆಕ್ಯುಲರಿಸಂ, ಸೋಷಿಯಲಿಸಂ ಈ ಮೂರು ತತ್ವಗಳನ್ನು ಒಂದುಗೂಡಿಸಿ ತೆಗೆದುಕೊಂಡು ಹೋಗತಕ್ಕ ಮಾರ್ಗ ಯಾವುದು ಎಂದು ಹೇಳುವುದರಲ್ಲಿ ನಾವು ಎಕ್ಸ್‌ಪೆರಿಮೆಂಟನ್ನು ಮಾಡಿಕೊಂಡು ಹೋಗುತ್ತಿದ್ದೇವೆ. ಇದುವರೆಗೆ ಫಲಕಾರಿಯಾಗುತ್ತಿದೆ ಎನ್ನತಕ್ಕ ನಂಬಿಕೆ ನಮ್ಮ ಪಕ್ಷಕ್ಕೆ ಇದೆ. ಇದನ್ನು ಜನತೆಯ ಮುಂದೆ ಇಟ್ಟಿದ್ದೇವೆ. ಜನತೆ ಬಹುಪಾಲು ಇದನ್ನು ಒಪ್ಪಿದ್ದಾರೆ ಎಂದು ಹೇಳಿ ನಾನು ಇಲ್ಲಿ ಇದ್ದೇನೆ.

(ಶ್ರೀ ಡಿ. ದೇವರಾಜ ಅರಸ್)

ಈಗ ನಾವು ಒಂದು ಸೆಟ್ ಅಪ್‌ನಲ್ಲಿ ಹೋಗುತ್ತಾ ಇರುವುದರಲ್ಲಿ ತಾವು ಕೆಲವು ಲೋಪ ದೋಷಗಳನ್ನು ನೋಡಬಹುದು. ಆದರೆ ನಾವು ಹೋಗುತ್ತಾ ಇರತಕ್ಕ ಮಾರ್ಗ ಹಳೆಯದೇ ಹೊರತು ಹೊಸದಲ್ಲ ಎಂದು ಹೇಳಿ ಬಹಳ ನಮ್ರತೆಯಿಂದ ವಿನಂತಿಸುತ್ತೇನೆ. ಹೊಸದು ಯಾವುದು ಎಂದು ಹೇಳಿ ನೋಡೋಣ. ಈಗ ಅರ್ಥಿಕ ರಂಗದಲ್ಲಿ ಕೆಲವು ಬದಲಾವಣೆಗಳನ್ನು ಮಾಡುವುದಕ್ಕೆ ಹೊರಟಿದ್ದೇವೆ, ಮಾಡಿದ್ದೇವೆ. ಅದು ಬ್ಯಾಂಕ್ ನ್ಯಾಷನಲೈಸೇಷನ್‌ನಿಂದ ಪ್ರಾರಂಭವಾಯಿತು. ಮತ್ತೆ ಎಕ್ಸ್‌ಪೋರ್ಟ್ಸ್ ಇಂಪೋರ್ಟ್ಸ್ ರಾಷ್ಟ್ರೀಕರಣ ಮಾಡಬೇಕೆಂದು ಆ ತತ್ವವನ್ನು ಒಪ್ಪಿ ಒಂದೊಂದಾಗಿ ಸರ್ಕಾರ ತನ್ನ ಹತೋಟಿಗೆ ತೆಗೆದುಕೊಳ್ಳುತ್ತಿದೆ. ಇಂಡಸ್ಟ್ರಿಯಲ್ ಪಾಲಿಸಿ ಬಗ್ಗೆ ವಿವರವಾಗಿ ಹೇಳಬೇಕಾದ ಅಗತ್ಯವಿಲ್ಲ. ಕೆಲವು ಮುಖ್ಯವಾದ ವಿಚಾರಗಳನ್ನು ಹೇಳಿದ್ದೇನೆ. ಅದೇ ರೀತಿ ಭೂಮಿ ಹಿಡುವಳಿ ವಿಚಾರ, ಸುಧಾರಣೆ ಮತ್ತು ಆಸ್ತಿಪಾಸ್ತಿಗಳ ಮಿತಿ ಇದರ ಬಗ್ಗೆ ತೀವ್ರವಾಗಿ ಚಿಂತನೆ ನಡೆಯುತ್ತಾ ಇದ್ದು ಕಾರ್ಯಗತವಾಗುವ ಹಂತದಲ್ಲಿದ್ದೇವೆ.

ಇನ್ನು ಅರ್ಥಿಕ ರಂಗದ ಬದಲಾವಣೆಗಳನ್ನು ತತ್ವಶಃ ಒಪ್ಪಿ ಆದನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನದಲ್ಲಿ ನಾವು ಇದ್ದೇವೆ. ನಾವು ಮಾಡತಕ್ಕ ಕಾರ್ಯದಲ್ಲಿ ನಾವು ಇನ್ನೂ ಬಹಳ ವೇಗದಿಂದ ಹೋಗಬೇಕು ಎಂದು ಮಾನ್ಯ ಸ್ನೇಹಿತರಿಗೆ ಆಸೆ ಇರಬಹುದು. ಅದನ್ನು ನಾನು ಒಪ್ಪಿದರೂ ಅವರ ಗಮನಕ್ಕೆ ತರತಕ್ಕದ್ದು ಏನೆಂದರೆ ನನಗೂ ಅಷ್ಟೇ ಆಸೆ ಇದೆ. ನಮ್ಮ ಪಕ್ಷಕ್ಕೂ ಇದೆ. ಆದರೆ ವಾಸ್ತವಿಕತೆಯು ಅನೇಕ ರೀತಿಯಲ್ಲಿ ಅಡಚಣೆಯನ್ನು ತರುತ್ತದೆ. ಅಡಚಣೆಗಳನ್ನು ತಂದಾಗ ಸ್ವಲ್ಪ ನಿಧಾನವಾಗುತ್ತದೆ. ಈಗ ಲ್ಯಾಂಡ್ ರೀಫಾರಂಸ್ ಬಗ್ಗೆ ಒಂದು ಮಾತು ಹೇಳುವುದಾದರೆ ನಾವು ಏನೇನು ಮಾಡಬೇಕಾಗಿ ಇದೆಯೋ ಅದನ್ನೆಲ್ಲಾ ಬೇರೆ ರಾಜಕೀಯ ಸೆಟ್‌ಅಪ್ ಇದ್ದಿದ್ದರೆ 4 ದಿವಸದಲ್ಲೇ ಮುಗಿಸಿಬಿಡಬಹುದಾಗಿತ್ತು. ಹೀಗೆ ಮಾಡಬೇಕೆಂದು ಹೇಳಿ ಫರ್ಮಾನ್ ಹೊರಡಿಸಬಹುದಾಗಿತ್ತು. ಕಾನೂನು ಆಗಬೇಕು. ಲೆಜಿಸ್ಲೇಚರ್ ಮುಂದೆ ಬರಬೇಕು. ಈ ವಿಚಾರಗಳು ಚರ್ವಿತಚರ್ವಣವಾಗಬೇಕು. ಹೀಗೆ ಸ್ವಲ್ಪ ಮಟ್ಟಿಗಾದರೂ ಪ್ರಜಾಸತ್ತೆಯಲ್ಲಿ ಕೆಲವು ನಿಧಾನವಾಗುವ ಅಂಶ ಅಂದರೆ ವೀಕ್‌ನೆಸ್ ಇದ್ದೇ ಇದೆ. ಅದನ್ನು ಏನೂ ಮಾಡುವುದಕ್ಕೆ ಬರುವುದಿಲ್ಲ. ಲೆಜಿಸ್ಲೇಚರ್ ಮುಂದೆ ಬರಲೇಬೇಕು. ಒಂದು ದಿವಸ ಇಲ್ಲದಿದ್ದರೆ ಒಂದು ತಿಂಗಳು ಇರಲೇ ಬೇಕು.

Sri H. S. SIDDAPPA.—Does that weakness prevail in your Party also ?

Sri D. DEVARAJ URS.—That prevails in my Party, in yourself, that cannot be helped.

ಹೀಗೆ ವಾಸ್ತವಾಂಶವನ್ನು ಗಮನದಲ್ಲಿಟ್ಟುಕೊಂಡು ಹೋಗೋಣ. ಮತ್ತು ಈ ಒಂದು ಹಿನ್ನಲೆಯಿಂದ ಈಗ ನಮ್ಮ ಅಡ್ಮಿನಿಸ್ಟ್ರೇಟಿವ್ ಸೆಟ್ ಅಪ್ ಏನು ಇದೆ ಅದನ್ನೆಲ್ಲಾ ಅಮೇರಿಕಾದಲ್ಲಿರುವ ರೀತಿಯಲ್ಲಿ ಏತಕ್ಕೆ ಮಾಡಬಾರದು ? ಪ್ರೆಸಿಡೆನ್ಸಿಯಲ್ ಸಿಸ್ಟಂ ಆಫ್ ಡೆಮಾಕ್ರಸಿಯಲ್ಲಿ ಯಾರು ಅಧಿಕಾರಕ್ಕೆ ಬರುತ್ತಾರೋ ಅವರು ಅಧಿಕಾರಿಗಳನ್ನು ನೇಮಿಸಿಕೊಂಡು ಅವರು ಇರುವವರೆಗೆ ಇರುತ್ತಾರೆ. ಅವರ ಜೊತೆಯಲ್ಲಿ ಅವರೂ ಹೋಗುತ್ತಾರೆ. ಅದರ ಸಾಧಕಬಾಧಕಗಳ ವಿಷಯ ಬೇರೆ ಮಾತು. ಈಗ ನಮ್ಮಲ್ಲಿ ಆ ಸಿಸ್ಟಂ ಇಲ್ಲ. ನಾನೇ ಇರಲಿ, ನಮ್ಮ ಪಕ್ಷವೇ ಇರಲಿ ಬೇರೆ ಪಕ್ಷದವರು ಯಾರು ಬಂದು ಆ ಸ್ಥಾನದಲ್ಲಿ ಕೂತರೂ ಕೂಡ ಈಗ ಇರತಕ್ಕಂಥ ಮೆಷಿನರಿಯನ್ನು ಉಪಯೋಗಿಸಬೇಕಾಗುತ್ತದೆ. ಹೊಸದಾಗಿ ತರುತ್ತೇವೆ ಎಂದು ಹೇಳುವುದು ಇದ್ದರೆ ಅಂಥಾ ಸಾಮರ್ಥ್ಯ ಯಾರಿಗೆ ಇದೆಯೋ ನನಗೆ ಗೊತ್ತಿಲ್ಲ. ನಾನು ತಿಳಿದುಕೊಂಡ ಹಾಗೆ ಅಂಥಾದ್ದು ಮಾಡುವುದಕ್ಕೆ ಬರುವುದಿಲ್ಲ. ಇರುವ ಮೆಷಿನರಿಯನ್ನೇ ಉಪಯೋಗಿಸಬೇಕಾಗುತ್ತದೆ. ಎಲ್ಲಿ ಕೀಲು ಮುರಿದಿದೆ ಅಲ್ಲಿ ನಟ್ಸ್, ಬೋಲ್ಟ್ಸ್ ಹಾಕಿ ರಿಪೇರಿ ಮಾಡಿ ತೆಗೆದುಕೊಂಡು ಹೋಗಬೇಕು. ಅದು ನಮ್ಮ ಕೌಶಲ್ಯ ಮತ್ತು ಬುದ್ಧಿವಂತಿಕೆ ಮೇಲೆ ನಿಂತಿದೆ. ಈ ಒಂದು ದೃಷ್ಟಿಯಿಂದ ಅನೇಕ ಮಾನ್ಯ ಸದಸ್ಯರು ಈಗ ನಮ್ಮ ಅಡ್ಮಿನಿಸ್ಟ್ರೇಷನ್ ಬಗ್ಗೆ ಕೆಲವು ಟೀಕೆ ಮಾಡಿದ್ದಾರೆ. ಮುಖ್ಯವಾಗಿ ಎಲ್ಲಾ ಮಾನ್ಯ ಸದಸ್ಯರೂ ಹೇಳಿರತಕ್ಕದರಲ್ಲಿ ಎದ್ದು ಕಾಣುತ್ತಾ ಇರತಕ್ಕ ವಿಚಾರ ಏನೆಂದರೆ ಬಹುಶಃ ನಮ್ಮ ಕಮ್ಯೂನಿಸ್ಟ್ ಸದಸ್ಯರಾದ ಶ್ರೀ ಕೃಷ್ಣನ್‌ರವರು ನಾವು ಹಳೆಯ ದಾರಿಯಲ್ಲಿ ಹೋಗುತ್ತಾ ಇದ್ದೇವೆ, ನಮ್ಮ ಮನೋಭಾವ ಬದಲಾವಣೆಯಾಗಿಲ್ಲ, ಅದನ್ನು ಹೊಸಮಾರ್ಗ ಎಂದು ಹೇಳುತ್ತೇವೆ ಎಂದು ಕೇಳಬಹುದು. ಅವರು ನಮ್ಮ ತತ್ವಗಳನ್ನು ಅನುಸರಿಸಿ ಕೆಲಸ ಮಾಡುತ್ತಾ ಇಲ್ಲ. ಬಂಡವಾಳಶಾಹಿಗಳ ಪರವಾಗಿ ಕಾರ್ಯ ಮಾಡುತ್ತಾರೆ, ಗೇಣಿದಾರರ ಮತ್ತು

ಬಡವರ ಬಗ್ಗೆ ಅನುಕಂಪ ಅವರಿಗೆ ಇಲ್ಲ ಎಂದು ಅವರು ಹೇಳಬಹುದು. ತಾವು ಹೇಳುವುದರಲ್ಲಿ ಅರ್ಥ ಇದೆ. ಬಹುಭಾಗ ವಾಸ್ತವಿಕತೆ ನೋಡುವಾಗ ಅದು ಆರೀತಿ ಇದೆ ಎನ್ನುವುದು ಈಗ ಆಗುತ್ತಾ ಇರುವ ನಡವಳಿಕೆಗಳಿಂದ ಗೊತ್ತಾಗುತ್ತದೆ. ಒಂದು ಕಡೆ ಸರ್ಕಾರದ ಧ್ಯೇಯ ಧೋರಣೆಗಳಿಗೆ ಮನ್ನಣೆ ದೊರೆಯದ ಹಾಗೆ ಮಾಡುತ್ತಾರೆ. ಆದ್ದರಿಂದ ತಮ್ಮಲ್ಲಿ ಈ ಒಂದು ವ್ಯಾಕುಲ ಅಥವಾ ಮನಸ್ಸಿನ ದುಗುಡು ಇರುವುದು ಸ್ವಾಭಾವಿಕ ಏನೂ ಇಲ್ಲ ಎಂದು ಹೇಳತಕ್ಕಂಥ ಗೋಜಿಗೆ ನಾನು ಹೋಗುವುದಿಲ್ಲ. ಅದು ನನಗೂ ಅರ್ಥವಾಗುತ್ತದೆ. ಆದರೆ ಅವರ ಮನೋಭಾವವನ್ನು ಒಂದೇ ಮಾತಿನಿಂದ ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ತಾವು ಗಮನಿಸಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅವರನ್ನು ಏತಕ್ಕೆ ಪನಿಷ್ ಮಾಡಬಾರದು ? ಹೀಗೆ ನಡೆಯುತ್ತಾ ಇದ್ದರೆ ಅವರನ್ನು ಸಸ್ಪೆನ್‌ಷನ್ ಮಾಡಿ, ಡಿಸ್ಮಿಸ್ ಮಾಡಿ ಅಥವಾ ಫೈನ್ ಹಾಕಿ ಅಥವಾ ಏನಾದರೂ ಪನಿಷ್ ಮಾಡಬೇಕೆಂದು ಕೆಲವು ಸ್ನೇಹಿತರು ಹೇಳಿದರು. ಯಾವ ಯಾವ ಕೆಟ್ಟ ಅಧಿಕಾರಿಗಳು ಇದ್ದಾರೆ ಅವರನ್ನೆಲ್ಲಾ ಒಂದು ಪಟ್ಟಿ ಮಾಡಿ ಅವರನ್ನು ತೆಗೆದು ಹಾಕಿಬಿಡಿ ಎಂದು ಶ್ರೀ ವಾಟಾಳ್ ನಾಗರಾಜ್ ಮತ್ತು ಇನ್ನೂ ಕೆಲವರು ಹೇಳಿದ್ದು ಜ್ಞಾಪಕ ಇದೆ. ಆದರೆ ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತೇನೆ, ಯಾರಾದರೂ ಮಹಾನುಭಾವರು ಕೆಟ್ಟವರು ಇದ್ದಾರೆಂದು ಹೇಳಿದರೆ ಖಂಡಿತ ಅದರ ಮೇಲೆ ಆಕ್ಷನ್ ತೆಗೆದುಕೊಳ್ಳಬಹುದು. ಆದರೆ ಅದು ಅಷ್ಟು ಸುಲಭವಾದ ಕಾರ್ಯವಲ್ಲ.

ಶ್ರೀ ಎಸ್. ಬಂಗಾರಪ್ಪ.—ತಾವು ಪಟ್ಟಿ ಮಾಡಬೇಕು. ಯಾರಾದರೂ ಮಹನುಭಾವರು ಮಾಡುವುದಲ್ಲ.

ಶ್ರೀ ಡಿ. ದೇವರಾಜ ಅರಸ್.—ನಾವೆಲ್ಲಾ ಮಹಾನುಭಾವರೇ ಇಡೀ ಸ್ಟೇಟ್‌ನದು ಕೊಡುವುದಕ್ಕೆ ಕಷ್ಟವಾಗುತ್ತದೆ. ಲೆಜಿಸ್ಲೇಚರ್ಸ್ ನಲ್ಲಿರುವ ನಮಗೆಲ್ಲಾ ಜವಾಬ್ದಾರಿ ಇರುತ್ತದೆ. ಆ ಪಕ್ಷವೇ ಇರಲಿ ಈ ಪಕ್ಷವೇ ಇರಲಿ, ಜವಾಬ್ದಾರಿ ಇದೆ. ಆಪೋಸಿಷನ್‌ನಲ್ಲಿದ್ದರೆ ನಮ್ಮಲ್ಲಿರತಕ್ಕ ಲೋಪ ದೋಷಗಳನ್ನು ಎತ್ತಿ ತೋರಿಸುವುದು ಅವರ ಜವಾಬ್ದಾರಿ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳಿಧಂತೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. ಪಟ್ಟಿಕೊಟ್ಟರೆ ಕನ್ಸಿಡರ್ ಮಾಡುತ್ತೇವೆ ಎಂದು ಹೇಳಿದಿರಿ. ಪಟ್ಟಿ ಬಗ್ಗೆ ಸಹಕಾರ ಕೇಳುತ್ತಿದ್ದೀರಿ. ಡಿಸಿಪ್ಲಿನರಿ ಆಕ್ಷನ್ ಒಂದು ಕಡೆ ಇರಲಿ, ಅಡ್ಮಿನಿಸ್ಟ್ರೇಷನ್‌ನಲ್ಲಿ ಮುಖ್ಯವಾಗಿ ಅಧಿಕಾರಿಗಳ ಆಟಿಟ್ಯೂಡ್ ಬದಲಾವಣೆ ಮಾಡುವ ಬಗ್ಗೆ ನೀವು ಏನು ಕಾರ್ಯಕ್ರಮ ತೆಗೆದು ಕೊಂಡಿದ್ದೀರಿ ? ನೀವು ಬಂದಮೇಲೆ ಅವರಲ್ಲಿ ಏನೂ ವ್ಯತ್ಯಾಸ ಕಾಣುವುದಿಲ್ಲ. ಹಿಂದೆ ಹಳಬರನ್ನು ಎಲ್ಲೆಲ್ಲಿ ಸೇರಿಸಿದ್ದೀರೋ ಅವರು ಅದೇ ಸ್ಥಾನದಲ್ಲಿ ಇದ್ದಾರೆ. ಅಷ್ಟೇ ಅಲ್ಲದೆ ಅವರಿಗೆ ಇನ್ನೂ ಹೆಚ್ಚು ಸ್ಥಾನಗಳನ್ನು ಕೊಟ್ಟಿದ್ದೀರಿ.

12-30 P. M.

ಶ್ರೀ ಡಿ. ದೇವರಾಜ ಅರಸ್.—ಈ ವಿಚಾರಗಳನ್ನು ಹೇಳುವಾಗ ಅದಕ್ಕೆ ಬೇರೆ ಮುಖಗಳೂ ಇವೆ. ಇದೇ ಸಭೆಯಲ್ಲಿ ತಾವು ಹೇಳಿದ ಮಾತಿಗೆ ವ್ಯತಿರಿಕ್ತವಾಗಿ ಮಾತನಾಡಿರುವುದನ್ನು ತಾವು ಕೇಳಿರಬಹುದು. ತಮ್ಮ ದೃಷ್ಟಿಯಲ್ಲಿ ಕೆಲವು ಅಧಿಕಾರಿಗಳನ್ನು ಹಿಂದೆ ಬೇಕು ಎಂದು ಇಟ್ಟುಕೊಂಡಿದ್ದರು, ಏತಕ್ಕಾಗಿ ಇಟ್ಟುಕೊಂಡಿದ್ದರೋ ಅವರು ಅದೇ ಸ್ಥಾನದಲ್ಲಿದ್ದಾರೆ, ಬದಲಾವಣೆಯಾಗಿಲ್ಲ. ಬದಲಾವಣೆ ಮಾಡಿದ ರೀತಿ ಗೊತ್ತಾಗುತ್ತಿಲ್ಲ, ಕೆಲವರನ್ನು ಮುಂದುವರಿಸಿದ್ದೀರಿ ಎಂದು ತಾವು ಹೇಳಿದರೆ ಇನ್ನು ಕೆಲವರು ಬದಲಾವಣೆ ಮಾಡಿರುವುದೇ ಸರಿಯಿಲ್ಲ ಎಂದು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಆ ವಿಷಯ ಹೇಳಬೇಡಿ. ಇಲ್ಲಿಯೂ ಕೂಡ ಹಿತಾಸಕ್ತಿಗಳಿವೆ. ವರ್ಗ ಹಿತಗಳು, ಪಟ್ಟಭದ್ರ ಹಿತಗಳಿರುತ್ತವೆ. ಮುಖ್ಯ ಮಂತ್ರಿಗಳಾಗಿ ತಾವು ಏನು ಹೇಳುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ನಾನು ಹೇಳತಕ್ಕುದು ಇಷ್ಟೆ: ಒಬ್ಬರ ದೃಷ್ಟಿಯಲ್ಲಿ ಯಾರಾದರೂ ಕೆಟ್ಟವರಿದ್ದರೆ, ಅವರು ಇತರರ ದೃಷ್ಟಿಯಲ್ಲಿ ಒಳ್ಳೆಯವರಾಗಿರುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ದೃಷ್ಟಿಯಲ್ಲಿ ಅವರು ಒಳ್ಳೆಯವರು ಎಂದು ತಾವು ತಿಳಿದುಕೊಳ್ಳಬೇಕು

ಶ್ರೀ ಡಿ. ದೇವರಾಜ ಅರಸ್.—ಸ್ಪೆಸಿಫಿಕ್ ಇನ್‌ಸ್ಟೆನ್‌ಸಸ್‌ಗೆ ಬರೋಣ, ಸ್ವಲ್ಪ ನಿಧಾನ ಮಾಡಿ ಸರ್ಕಾರ ಕೆಲಸ ಮಾಡುವಾಗ, ಸರ್ಕಾರದ ವತಿಯಿಂದ ನಾವು ಯಾವುದೇ ರಾಗದ್ವೇಷಗಳಿಗೆ ಒಳಗಾಗದೆ ಕೆಲಸ ಮಾಡಬೇಕು ಎನ್ನುವುದು ನನ್ನ ಮನಸ್ಸಿನಲ್ಲಿರತಕ್ಕ ದೃಢ ನಿರ್ಧಾರ. ನಾನು ಒಂದು ವೇಳೆ ಯಾವುದಾದರೂ ಸಂದರ್ಭದಲ್ಲಿ ಕುಂಠಿತನಾಗಿದ್ದರೆ, ಸಭೆಯ ಸದಸ್ಯರಾಗಿ ಯಾವ ಸಂದರ್ಭದಲ್ಲಿಯಾದರೂ ನನಗೆ ಹೇಳುವುದಕ್ಕೆ ತಮಗೆ ಅಧಿಕಾರವಿದೆ. ಇದು ಯಾವುದಕ್ಕೂ ಒಳಗಾಗದೆ ಪ್ರತಿಯೊಂದು ವಿಚಾರದಲ್ಲಿಯೂ ನಮ್ಮ ಕೈಲಾದಷ್ಟು ಪ್ರಾಮಾಣಿಕವಾಗಿ ತೂಗಿ ಕೆಲಸ ಮಾಡಬೇಕಾಗುತ್ತದೆ. ಈಗ ಕೆಲವರ ದೃಷ್ಟಿಯಲ್ಲಿ ಒಬ್ಬರು ಒಳ್ಳೆಯವರು ಎನ್ನುವವರು ಇನ್ನು ಕೆಲವರ ದೃಷ್ಟಿಯಲ್ಲಿ ಕೆಟ್ಟವರಿರಬಹುದು. ಆಗಲೂ ಕೂಡ ಜಜ್‌ಮೆಂಟ್ ನಮ್ಮದು. ಆ ಕೆಲಸ ನಾವು ತೆಗೆದುಕೊಳ್ಳುವಾಗ ಅದರ ಪರಿಣಾಮ ಒಳ್ಳೆಯದಾಗಬಹುದು, ಕೆಟ್ಟದ್ದಾಗಬಹುದು, ಅದರ ಕಾನ್‌ಸೀಕ್ವೆನ್ಸ್ ಫೇಸ್ ಮಾಡುವುದಕ್ಕೆ ನಾವು ತಯಾರಾಗಿ ಇರಬೇಕು. ಒಬ್ಬರು ಒಳ್ಳೆಯದು ಎಂದರೆ ಇನ್ನೊಬ್ಬರು ಕೆಟ್ಟದ್ದು ಎಂದು ಹೇಳುತ್ತಾರೆ. ಅದರಲ್ಲಿಯೂ ನಮ್ಮ ದೇಶದಲ್ಲಿ ಎಲ್ಲ ಜಾತಿಯ ಪಿಡುಗಿರುತ್ತದೆ. ಆ ದೇಶದ ಸ್ಥಿತಿ ಇದೇ. ಯಾರಾದರೂ ಒಬ್ಬ ಅಧಿಕಾರಿ ಬ್ರಾಹ್ಮಣ ಇದ್ದರೆ ಬ್ರಾಹ್ಮಣೇತರರು ಬ್ರಾಹ್ಮಣನಿದ್ದಾನೆಂದು ಹೇಳುವುದು, ಒಕ್ಕಲಿಗನಿದ್ದರೆ ಲಿಂಗಾಯಿತರು ಒಕ್ಕಲಿಗನಿದ್ದಾನೆ ಎಂದು ಹೇಳುವುದು ಈ ರೀತಿಯಾಗಿ ಹೇಳುತ್ತಾರೆ. ಯಾರನ್ನು ತಂದರೂ ಯಾವುದಾದರೂ ಒಂದು ಜಾತಿ, ಮತಕ್ಕೆ ಸೇರಿದವರು ಇರುತ್ತಾರೆ. ಜಾತಿ ಮತಗಳ ಗೊಂದಲದಿಂದ ನಾವು ಇನ್ನೂ ದೂರವಾಗಿಲ್ಲ. ನಾವು ಈ ಸಂದರ್ಭದಲ್ಲಿ ಏನು ಮಾಡಬೇಕು ಎಂದರೆ, ನಿನ್ನೆಯ ದಿನ ಮಾನ್ಯ ಸದಸ್ಯರಾದ ಕೆ. ಎಂ. ನಾಗಣ್ಣ ಅವರು ಹೇಳಿದ ಹಾಗೆ ಅಂತರಂಗ ಬಹಿರಂಗವಾಗಿ ಜನತೆಯ ಮುಂದೆ ಮತ್ತು ಈ ಸಭೆಗೆ ಏನು ಹೇಳಿದ್ದೇವೆ ಅದನ್ನು ಜ್ಞಾಪಿಸಿಕೊಂಡು ಕೆಲಸ ಮಾಡಬೇಕಾದ್ದು ನಮ್ಮ ಧರ್ಮ. ನಾವು ಸೆಕ್ಯುಲಾರಿಸಂ ತತ್ವವನ್ನು ಒಪ್ಪಿ ಅದಕ್ಕೆ ಬದ್ಧರಾಗುತ್ತೇವೆಂದು ಜನಗಳಿಗೆ ವಚನ ಕೊಟ್ಟಿದ್ದೇವೆ. ನಾವು ಅದನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿದ್ದೇವೆ. ಅದೇ ರೀತಿ ಪ್ರಜಾಸತ್ತೆಯಲ್ಲಿ ನಮಗೆ ನಂಬಿಕೆ ಇದೆ. ಅದೇ ರೀತಿ ಸಮಾಜವಾದ ತತ್ವವನ್ನು ಕೂಡ ಜಾರಿಗೆ ತರಬೇಕು. ಈ ಮೂರು ತತ್ವಗಳನ್ನು ಹೊಂದಿಸಿಕೊಂಡು ಹೋಗಬೇಕು ಎಂದು ಹೊರಟಿದ್ದೇವೆ. ಶ್ರೀಮಾನ್ ನಾಗಣ್ಣನವರು ಹೇಳಿದ ಮಾತನ್ನು ನೂರಕ್ಕೆ ನೂರರಷ್ಟು ಒಪ್ಪುತ್ತೇನೆಂದು ನಾನು ನಿನ್ನೆಯೇ ಹೇಳಿದೆ. ನಮಗೆಲ್ಲರಿಗೂ ಏನು ನಂಬಿಕೆ ಇದೆ ಎಂದರೆ ಈ ದೇಶದಲ್ಲಿ ಮೊದಲು ಜಾತೀಯತೆಯ ಭಾವನೆ ಏನಿದೆ ಅದನ್ನು ದೂರ ಮಾಡಬೇಕು ಅಥವಾ ಅದರಿಂದ ನಾವು ಅತೀತರಾಗಿ ಜಾತ್ಯತೀತರಾಗಬೇಕು. ಜಾತಿಯನ್ನು ಬಿಡುವುದು ಎಂದರೆ ಎಲ್ಲಾ ಬಿಟ್ಟೆವು, ಯಾವುದೇ ಜಾತಿ ಇಲ್ಲ ಎಂದು ಹೇಳಿದರೆ ಅದು ವಾಸ್ತವಿಕತೆಯನ್ನು ತಿಳಿಯದೆ ಮಾತನಾಡಿದ ಹಾಗೆ ಆಗುತ್ತದೆ. ನೀವಾದರೂ ಶಾಸಕರಿದ್ದೀರಿ, ನಾವು ಸರ್ಕಾರವನ್ನು ನಡೆಸತಕ್ಕ ಜವಾಬ್ದಾರಿಯನ್ನು ಹೊತ್ತಿದ್ದೇವೆ. ನಾವಾದರೂ ಅದರಿಂದ ಅತೀತರಾಗಿ ಇರಬೇಕು.

ಶ್ರೀ ಬಾಪೂಗೌಡ ರಾಯಪ್ಪ.—ಯಾವ ರೀತಿ ಬಿಡಬೇಕು ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಆ ವಿಧಾನ ಕಾರ್ಯದಲ್ಲಿರುತ್ತದೆ. ನಾವೂ, ನೀವೂ ಇಲ್ಲ ಎಂದು ಎಷ್ಟು ಹೇಳಿದರೂ, ಸ್ವಲ್ಪ ಇದಕ್ಕೆ ಬಣ್ಣ ಹಚ್ಚುವುದಾದರೆ, ನಾವು ಏನೂ ಮಾಡಿಲ್ಲ ಎನ್ನುವುದಕ್ಕೆ ಸ್ವಲ್ಪಮಟ್ಟಿಗೆ ಬಿಲೀಫ್ ಮೇಲೆ ಹೋಗುತ್ತೇವೆ. ಅದಕ್ಕಿಂತ ಏನೂ ಮಾಡುವುದಕ್ಕಾಗುವುದಿಲ್ಲ. ನಾವು ಸರ್ಕಾರದ ವತಿಯಿಂದ ಯಾವುದೇ ಒಂದು ಅಧಿಕಾರಿಗೆ ಸಂಬಂಧಪಟ್ಟ ಹಾಗೆ, ಯಾವುದೇ ಒಂದು ಕಾನೂನನ್ನು ಜಾರಿಗೆ ಕೊಡುವಾಗ ಜಾತೀಯತೆಯನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಕೆಲಸ ಮಾಡುತ್ತೇವೆನ್ನುವ ಭರವಸೆಯನ್ನು ನಾನು ಇಲ್ಲಿ ಧೈರ್ಯದಿಂದ ಕೊಡಬಲ್ಲೆ. ಇದು ಮೊದಲನೇ ಸೋಪಾನವಾಗಬೇಕು ಮುಂದಿನ ಕಾರ್ಯಗಳಿಗೆ. ಅದಿಲ್ಲದೆ ಹೋದರೆ ನಾನು ದೃಢವಾಗಿ ತಿಳಿದಿರತಕ್ಕ ವಿಚಾರವೇನೆಂದರೆ ನಮ್ಮ ಈ ದೇಶದಲ್ಲಿ ಜಾತೀಯತೆಯ ಪಿಡುಗು ಸರ್ಕಾರ ನಡೆಸುತ್ತಿರತಕ್ಕವರಲ್ಲಿ ಅಥವಾ ಶಾಸಕರಲ್ಲಿ ಎಲ್ಲಿಯವರೆಗೆ ದೂರವಾಗುವುದಿಲ್ಲ ಅಲ್ಲಿಯವರೆಗೂ ಈ ದೇಶದಲ್ಲಿ ಪ್ರಜಾಸತ್ತೆ ಯಶಸ್ವಿಯಾಗುವುದಿಲ್ಲ.

ನಮ್ಮ ದೇಶದಲ್ಲಿ ದುರದೃಷ್ಟವಶಾತ್ ಒಂದು ಕಡೆ ಜಾತಿ, ಒಳಜಾತಿ ಇದ್ದರೆ, ಇನ್ನೊಂದು ಕಡೆ ವರ್ಗವಿದೆ. ತಮ್ಮ ಮುಖೇನ ಶ್ರೀಮಾನ್ ಬಂಗಾರಪ್ಪನವರಿಗೆ ನನ್ನ ಅರಿಕೆ ಏನೆಂದರೆ, ಯೂರೋಪ್ ದೇಶದಲ್ಲಿ ಎಲ್ಲಾ ಕ್ರಿಶ್ಚಿಯನರಿದ್ದಾರೆ. ಇಲ್ಲಿ ಹಾಗಿಲ್ಲ. ಇಲ್ಲಿ ಹಿಂದುಗಳು, ಕ್ರಿಶ್ಚಿಯನ್ನರು, ಮುಸ್ಲಿಮರು, ಬೌದ್ಧರು, ಪಾರಸಿಗಳು, ಜೈನರು, ಸಿಕ್ಕರು, ಸಿಂಧಿಗಳು ಹೀಗೆ ಯಾವ ಯಾವ ಜಾತಿಗಳಿವೆ ಅವೆಲ್ಲ ಸೇರಿವೆ ಮತ್ತು ಇದರ ಜೊತೆಗೆ ನಾಲ್ಕು ವರ್ಣಗಳೂ ಸೇರಿವೆ. ಈ ವರ್ಣದೊಳಗೆ ಅದರ ಹಿಂದೆಯೇ ನಾನಾ ಬಣಗಳಿವೆ, ಏನೇನು ಬಟ್ಟೆ ಹಾಕುತ್ತಿದ್ದಾರೆ, ಏನೇನು ಅಲಂಕಾರ ಮಾಡಿಕೊಳ್ಳುತ್ತಾರೆ ಇಂಥದೆಲ್ಲ ಸೇರಿ ಒಂದೊಂದು ಜಾತಿಯಲ್ಲಿ ಸಾವಿರಾರು ಜಾತಿ

ಗಳಿವೆ. ಇದನ್ನು ಶ್ರೀ ಬಂಗಾರಪ್ಪನವರು ತಿಳಿದುಕೊಳ್ಳಬೇಕು. ಒಂದು ಕಡೆ ವರ್ಗವಿದೆ ಇನ್ನೊಂದು ಕಡೆ ಜಾತಿ ಇದೆ. ಜಾತಿ ವರ್ಗ ಎರಡೂ ಸಾಮಾನ್ಯವಾಗಿ ಕೂಡುತ್ತವೆ. ಒಂದೊಂದು ಸಲ ಕೂಡುವುದಿಲ್ಲ. ಇಂಥ ಒಂದು ಕಾಂಪ್ಲಿಕೇಟೆಡ್ ಸೊಸೈಟಿ ನಮ್ಮ ದೇಶದಲ್ಲಿದೆ. ಆದುದರಿಂದ ಈ ಸಮಾಜದಿಂದ ಉದ್ಭವವಾಗಿ ಬರತಕ್ಕವರು ನಾವು, ನಾವು ಎಲ್ಲರೂ ಇನಿದ್ದೇವೆ, ನಾವು ಪೂರ್ಣವಾಗಿ ದೂರ ಹೊರಟು ಹೋಗಿ ಅತೀತರಾಗಿದ್ದೇವೆ ಎಂದು ಹೇಳುವಷ್ಟು ಧೈರ್ಯ ನನಗಿಲ್ಲ. ಆದರೆ ನಮ್ಮ ಪ್ರಯತ್ನ ಪ್ರಾಮಾಣಿಕವಾಗಿ ಇರಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ಮೋಕ್ಷ ಯಾವಾಗ ?

ಶ್ರೀ ಡಿ. ದೇವರಾಜ ಅರಸ್.—ಮೋಕ್ಷ ನಿಧಾನವಾಗಿ ಬರುತ್ತದೆ. ಒಂದೇ ದಿವಸಕ್ಕೆ ಮೋಕ್ಷ ಬರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಜಾತಿಯ ಆಧಾರದ ಮೇಲೆ ಯಾರಾದರೂ ವಿಧಾನ ಸಭಾ ಸದಸ್ಯರು, ಸಾರ್ವಜನಿಕರು ನಿಮ್ಮಲ್ಲಿ ಬಂದರೆ ಜಾತಿಯ ಆಧಾರದ ಮೇಲೆ ಯಾವುದೇ ವಿಷಯವನ್ನು ತಮ್ಮ ಗಮನಕ್ಕೆ ತಂದರೆ, ಅದನ್ನು ಮಟ್ಟ ಹಾಕುತ್ತೇನೆನ್ನುವ ಧೈರ್ಯದಿಂದ ಕೆಲಸ ಮಾಡತಕ್ಕ ಗ್ಯಾರಂಟಿಯನ್ನು ಈ ಸಭೆಗೆ ಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರಲ್ಲಿ ಆಗಲೇ ಅರಿಕೆ ಮಾಡಿದೆ. ತಮಗೂ ಹೇಳುತ್ತೇನೆ. ಈ ಮಾತನ್ನು ಬೇರೆ ರೀತಿಯಲ್ಲಿ ಹೇಳಿದ್ದೇನೆ. ನಾವು ನಮ್ಮ ಕೆಲಸ ಕಾರ್ಯಗಳಲ್ಲಿ ಪ್ರಾಮಾಣಿಕವಾಗಿ ಈ ಜಾತೀಯತೆಯಿಂದ ದೂರವಾಗಿರುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಅಂಥ ವಿಷಯ ಬಂದಾಗ ಒಂದು ಆರ್ಡರ್ ಬರೆದು ಜಾತಿಯನ್ನು ಹಿಡಿದು ಬಂದರೆ ಏನೂ ಮಾಡುವುದಿಲ್ಲ ಎಂದು ಆರ್ಡರ್ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಈ ಒಂದು ಹಿನ್ನೆಲೆಯಿಂದ ಈ ದೇಶದ ಕಾರ್ಯಗಳನ್ನು ಗಮನಿಸೋಣ.

ಶ್ರೀ ಎಂ. ಎಸ್. ಕೃಷ್ಣನ್.—ಮೊನ್ನೆಯ ದಿನದ ಪ್ರಜಾವಾಣಿ ಪತ್ರಿಕೆಯಲ್ಲಿ ಛೂ ಬಾಣ ಓದಿದ್ದೀರಾ ? ಅದರಲ್ಲಿ ಕೆಲವು ಮಂತ್ರಿಗಳ ಬಗ್ಗೆ ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಸಾಮಾನ್ಯವಾಗಿ ನೋಡುತ್ತೇನೆ. ನಿನ್ನೆ ಮೊನ್ನೆ ನೋಡಿಲ್ಲ. ಮಂತ್ರಿಗಳಲ್ಲಿ ಕೆಲವರ ಬಗ್ಗೆ ಹೇಳಿದ್ದಾರೆಂದರೆ ಫ್ರೀಡಂ ಆಫ್ ಎಕ್ಸ್‌ಪ್ರೆಷನ್ ಇದೆ. ಸಂದರ್ಭಾನುಸಾರವಾಗಿ ಹೇಳಿದ್ದೆಲ್ಲ ನಿಜ ಎಂದು ನಾನು ನಂಬಿಕೊಳ್ಳುವುದಾದರೂ ಹೇಗೆ ? ತಪ್ಪು ಮಾಡಿದ್ದರೆ ಮಂತ್ರಿಗಳಾಗಲೀ, ನಾನಾಗಲೀ ಯಾರು ಮಾಡಿದರೂ ತಪ್ಪೇ. ತಪ್ಪು ಏನಾದರೂ ಆಗಿದ್ದರೆ ಧೈರ್ಯವಾಗಿ ತಪ್ಪು ಆಗಿದೆ ಎಂದು ಒಪ್ಪಿಕೊಳ್ಳುವುದಕ್ಕೆ ನಾನು ಹಿಂಜರಿಯುವವನಲ್ಲ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ತಪ್ಪನ್ನು ಹಿಡಿಯುವ ಅಧಿಕಾರ ನನಗೆ ಇದ್ದಿದ್ದರೆ ಇಷ್ಟು ಹೊತ್ತಿಗೆ ಎಷ್ಟೋ ಮಂತ್ರಿಗಳನ್ನು ಹಿಡಿದುಕೊಡುತ್ತಿದ್ದೆ.

ಶ್ರೀ ಡಿ. ದೇವರಾಜ ಅರಸ್.—ಯಾವಾಗ ಬೇಕಾದರೂ ಹೇಳಲಿ, even as a citizen, more than as a Legislator, you have a right. ಮಂತ್ರಿಗಳನ್ನು ನಿಮ್ಮ ಎದುರಿಗೆ ಕೂರಿಸಿ ಮಾತನಾಡೋಣ. ನನಗೆ ಯಾವ ಅವಮಾನವೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ತಾವು ಒಂದು ಹೆಜ್ಜೆ ಮುಂದೆ ಹೋಗಿದ್ದೀರಿ. ಬಹಳ ಸಂತೋಷ. ಇನ್ನೂ ಸ್ವಲ್ಪ ಹಾಗೆ ಮುಂದೆ ಹೋಗುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಮತ್ತೆ ಮತ್ತೆ ಹೇಳಬೇಕಾಗಿಲ್ಲ, ನಮ್ಮ ಹೆಜ್ಜೆಯನ್ನು ಗಮನಿಸಿ, ತೀರಾ ಜೋರಾಗಿ ಹೋಗಿ ಕೈಕಾಲು ಮುರಿದುಕೊಳ್ಳಬೇಡಿ.

ಶ್ರೀ ಎಸ್. ಬಂಗಾರಪ್ಪ.—ಶಕ್ತಿ ಇದ್ದರೆ ಜಂಪ್ ಮಾಡಿಬಿಡೋಣ.

ಶ್ರೀ ಡಿ. ದೇವರಾಜ ಅರಸ್.—ತಮ್ಮ ಮನಸಿನಲ್ಲಿರತಕ್ಕ ದುಗುಡ, ಸಾಮಾಜಿಕ ಕಾರ್ಯಗಳ ಬಗ್ಗೆ ಏನು ಇದೆ ಅದನ್ನು ನಾನು ನಿಜವಾಗಿ ಮೆಚ್ಚುತ್ತೇನೆ. ಸೋಷಿಯಲಿಷ್ಟ ಪಕ್ಷದಲ್ಲಿರುವ ತಮ್ಮಂಥ ಯುವಕರಿಗೆ, ವಾಟಾಳ್ ನಾಗರಾಜ್ ಅವರಿಗೆ ದುಗುಡ ಇದೆ. ಆದರೆ ದುಗುಡ ಇದ್ದ ಕೂಡಲೇ ಆಡಳಿತ ಏನು ಇದೆ, ವಾಸ್ತವಿಕ ವಿಷಯಗಳನ್ನು ಗಮನಿಸಿ ಹೋಗಬೇಕಾಗುತ್ತದೆ. ಸಮಾಜವನ್ನು ಒಂದು ಕಡೆ ಬಿಟ್ಟು ಓಡಿದರೆ, ನಾವು ಒಂದು ಕಡೆ ಆಗುತ್ತೇವೆ, ಸಮಾಜ ಒಂದು ತಡೆ ಆಗುತ್ತದೆ. ನಾವು ಅದನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗಬೇಕಾದುದು ಇದೆ. ಈ ಒಂದು ಮಾತನ್ನು ಹೇಳುತ್ತಿದ್ದೆ.

(ಶ್ರೀ ಡಿ. ದೇವರಾಜ ಅರಸ್)

ಅನೇಕರು ಅಡ್ಮಿನಿಸ್ಟ್ರೇಷನ್ ಬಗ್ಗೆ ಮಾತನಾಡಿ, ಅಲ್ಲಿ ಅನೇಕ ಲೋಪದೋಷಗಳು ಇವೆ. ಕರಪ್ಷನ್ ಇದೆ ಎಂದು ಹೇಳಿದ್ದಾರೆ. ನಮ್ಮ ದೇಶದಲ್ಲಿ ಕರಪ್ಷನ್ ಜಾಸ್ತಿಯಾಗುತ್ತಿದೆ ಎನ್ನುವುದು ಸರ್ವೆ ಸಾಧಾರಣವಾಗಿ ಎಲ್ಲರ ಮನಸ್ಸಿನಲ್ಲಿದೆ. ಇದೇ ಸ್ಥಳದಿಂದ, ಹೋದಸಭೆಯಲ್ಲಿ ಶ್ರೀ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಇದೇ ವಿಚಾರವನ್ನು ತೆಗೆದುಕೊಂಡು ಮಾತನಾಡಿರುವುದನ್ನು ನಾನು ಗಮನಿಸಿದೆ. ಅವರು ನಮ್ಮ ದೇಶದಲ್ಲಿ ಕರಪ್ಷನ್ ಬಗ್ಗೆ ಮಾತನಾಡಿ, ಮಾತನಾಡಿ ಅದು ಜಾಸ್ತಿ ಆದ ಹಾಗೆ ಕಾಣುತ್ತಾ ಇದೆ ಅಷ್ಟೆ. ನಾವು ತಿಳಿದಿರುವಷ್ಟು ಪ್ರಮಾಣದಲ್ಲಿ ನಿಜವಾಗಿ ಈ ಲಂಚ ಇಲ್ಲಎಂದು ಹೇಳಿದರು. ಅವರ ದೃಷ್ಟಿಯಲ್ಲಿ ಅದು ಸರಿಯಾಗಿ ಕಂಡಿರಬಹುದು. ಆ ಮಾತನ್ನೇ ನಾನು ಹೇಳಿದರೆ, ಹೇಳಿಕೊಂಡು ಹೋಗಬಹುದು. ಆದರೆ, ತಮ್ಮ ಗಳ ಮನಸ್ಸಿನಲ್ಲಿ ಮಾತ್ರ ನಾನು ಹೇಳಿದ ಮಾತು ಸರಿಯಾದುದು ಅಲ್ಲ, ಅದರಲ್ಲಿ ತೂಕವಿಲ್ಲ, ಏನೋ ಉತ್ತರ ಕೊಡುವುದಕ್ಕೆ ಹೇಳುತ್ತಿದ್ದಾರೆ, ಎನ್ನುವ ಭಾವನೆ ತಮ್ಮಲ್ಲಿ ಬಂದೇ ಬರುತ್ತದೆ. ಆದ್ದರಿಂದ ನಾನು ಹಾಗೆ ಹೇಳುವುದಕ್ಕೆ ತಯಾರಿಲ್ಲ. ತಾವು ಹೇಳತಕ್ಕ ಮಾತಿನಲ್ಲಿ ಅರ್ಥವಿಲ್ಲ, ಸುಮ್ಮನೆ ಮಾತನಾಡುತ್ತೀರಿ, ಎಂದು ನಾನು ಹೇಳುವವನು ಅಲ್ಲ. ಇದರಲ್ಲಿ ಅರ್ಥವಿದೆ. ನಾನು ಹಿಂದೆ ಕೂಡ ಈ ಪಕ್ಷದ ಕನ್‌ವೀನರ್ ಆಗಿ, ಕೆಲಸ ಮಾಡುವಾಗ ಬಹಿರಂಗವಾಗಿ ಹೇಳಿದ್ದೇನೆ ಇದು ನಮ್ಮ ದೇಶ ದಲ್ಲಿರತಕ್ಕ ವಿಚಾರ, ಇದನ್ನು ನಾವು ಕಣ್ಣು ಮುಚ್ಚಿಕೊಂಡು ಇಲ್ಲ ಎಂದು ಕೇಳದೆ ಬಿಟ್ಟರೆ, ಈ ಸಮಸ್ಯೆ ಬಗೆಹರಿಯುವುದಿಲ್ಲ. ಆದ್ದರಿಂದ ನಾವು ದೂರ ಓಡಿ ಹೋದ ಹಾಗಾಯಿತು. ಈ ರೀತಿ ದೂರ ಓಡಿ ಹೋಗುವುದಕ್ಕೆ ನಾನು ತಯಾರಿಲ್ಲ. ಆದರೂ ನಾನೂ ಹೇಳುತ್ತೇನೆ. ಇದರಲ್ಲಿ ಅರ್ಥವಿದೆ ಎಂದು ನನಗೂ ಗೊತ್ತಿದೆ. ಇದನ್ನು ದಮನ ಮಾಡುವುದು, ಕಡಿಮೆ ಮಾಡುವುದು ಹೇಗೆ ? ಸಂಪೂರ್ಣವಾಗಿ ನಿಲ್ಲಿಸಿ ಬಿಡುತ್ತೇವೆ ಎನ್ನುವ ಧೈರ್ಯ ನನಗೆ ಬಂದಿಲ್ಲ ಎಂದು ಬಹಿರಂಗ ವಾಗಿ ಒಪ್ಪಿಕೊಳ್ಳುತ್ತೇನೆ; ಮೊದಲು ಇದನ್ನು ಕಡಿಮೆ ಮಾಡುವುದರ ವಿಧಾನವನ್ನು ಕಂಡು ಹಿಡಿಯುವ ಜವಾಬ್ದಾರಿ ನಮ್ಮ ಮೇಲಿದೆ. ಈ ಜವಾಬ್ದಾರಿ ನಿರ್ವಹಣೆಯಲ್ಲಿ ತಮ್ಮೆಲ್ಲರ ಸಹಕಾರ ವನ್ನು ಬೇಡುತ್ತೇನೆ. ನಮ್ಮ ಪಕ್ಷ ಒಂದರಿಂದಲೇ ಈ ಕೆಲಸ ಸಾಧ್ಯವಿದೆ ಎಂದು ನಾನು ಹೇಳುತ್ತಿಲ್ಲ. ಎದುರು ಪಕ್ಷದ ಎಲ್ಲಾ ಮಾನ್ಯ ಸದಸ್ಯರು ಹಾಗೂ ಎಲ್ಲಾ ಪಕ್ಷಗಳವರೂ ಈ ಕೆಲಸದಲ್ಲಿ ಸಹಕಾರ ಕೊಡಬೇಕಾಗಿದೆ. ಇಷ್ಟೇ ಅಲ್ಲ. ಈ ಸಭೆಯ ಹೊರಗಡೆ ಶಾಸಕರು ಅಲ್ಲದೆ ಇರತಕ್ಕ ಮುಖಂಡರೂ ಸಮಾಜದ ಮುಖ್ಯಸ್ಥರೂ ಮತ್ತು ಸಮಾಜದ ವಿಷಯಗಳನ್ನು ಮತ್ತು ಅಭಿಪ್ರಾಯಗಳನ್ನು ರೂಪಿಸತಕ್ಕ ಮತ್ತು ಮುಖಂಡತ್ವ ಕೊಡತಕ್ಕ ಅನೇಕ ಜನರಿದ್ದಾರೆ. ಅವರೆಲ್ಲರ ಸಹಕಾರ ಬೇಕಾಗಿದೆ. ಒಂದು ಸರ್ಕಾರ ಪೋಲೀಸ್ ಮುಖಾಂತರ ಸರಿ ಮಾಡುತ್ತೇವೆ ಎಂದು ಹೇಳುವುದರಿಂದ ಸಾಧ್ಯವಾಗುವುದಿಲ್ಲ. ಕರಪ್ಷನ್ ಎಂದ ಕೂಡಲೇ ಬರೀ ದುಡ್ಡು ತೆಗೆದುಕೊಳ್ಳು ವುದು ಎಂದು ಅರ್ಥ ಅಲ್ಲ. ಅದಕ್ಕೆ ಅರ್ಥ ಇನ್ನೂ ವ್ಯಾಪಕವಾಗಿದೆ ಎಂದು ನನ್ನ ಭಾವನೆ. ಕೇವಲ ಹಣ ಪಡೆಯುವುದಕ್ಕೆ ಗ್ರಾಫ್ಟ್ ಎಂದು ಹೇಳುತ್ತಾರೆ, ಕರಪ್ಷನ್ ಎಂದರೆ ಕಾನೂನು ವಿರುದ್ಧ ವಾಗಿ ಕೆಲಸ ಮಾಡುವುದು ಕರಪ್ಷನ್, ಒಬ್ಬರಿಗೆ ಅನ್ಯಾಯ ಮಾಡಿ ಇನ್ನೊಬ್ಬರಿಗೆ ನ್ಯಾಯ ಮಾಡಿದರೆ ಅದು ಕರಪ್ಷನ್. ಆ ನಮ್ಮ ಜನಕ್ಕೆ ಕೆಲಸಬೇಕು ಎಂದಾಗ ನಮ್ಮ ಸ್ಥಾನಮಾನಗಳನ್ನು ಉಪ ಯೋಗಮಾಡಿ ಕೆಲಸ ಪಡೆಯುವುದಕ್ಕೆ ಹೋದರೆ ಅದು ಕರಪ್ಷನ್. ಇಲ್ಲವೇ ಜಾತಿಯ ಹೆಸರಿನಿಂದ ಅಧಿಕಾರಿಗಳನ್ನು ಬದಲಾವಣೆ ಮಾಡುವುದಕ್ಕೆ ಹೋದರೆ ಟ್ರಾನ್ಸ್‌ಫರ್ ಮಾಡಿದರೆ ಇದು ಕರಪ್ ಷನ್. ನನ್ನ ದೃಷ್ಟಿಯಲ್ಲಿ ಇದೆಲ್ಲಾ ಕರಪ್ಷನ್.

ಶ್ರೀ ಕಾಗೋಡು ತಿಮ್ಮಪ್ಪ.—ವ್ಯಾಪಕವಾದಂಥಾದ್ದನ್ನು ತಾವು ಏನು ಹೇಳುತ್ತೀರಿ, ಅದನ್ನು ಕಾನೂನಿನಲ್ಲಿ ಅಳವಡಿಸುತ್ತೀರಾ ?

Sri D. DEVARAJ URS.—According to concise Oxford Dictionery merely taking money is not corruption. It is part of it.

ಶ್ರೀ ಎಸ್. ಬಂಗಾರಪ್ಪ.—ಆಕ್ಸ್‌ಫರ್ಡ್ ಡಿಕ್ಷನರಿಯಲ್ಲಿ ಕರಪ್ಷನ್ ಬಗ್ಗೆ ಇರುವ ಅರ್ಥ ವನ್ನು ಕಾನೂನು ವ್ಯಾಪ್ತಿಯ ಒಳಗೆ ತರುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ತರೋಣ, ಲೋಕ ಆಯುಕ್ತ ಮತ್ತು ಲೋಕಪಾಲ ಇವಕ್ಕೆ ಸಂಬಂಧಪಟ್ಟ ಕಾನೂನನ್ನು ತರಬೇಕು ಎಂದು ಹೇಳಿ ಹಿಂದಿನಿಂದಲೂ ಇದೆ. ಕೇಂದ್ರಸರ್ಕಾರ ದವರು ಒಂದು ಡ್ರಾಫ್ಟ್ ಕೂಡ ಕಳುಹಿಸಿದ್ದರು. ಅದು ಹಾಗೆಯೇ ಉಳಿದಿದೆ- ಇದನ್ನು ತರಬೇಕು ಎಂದು ತಮ್ಮಲ್ಲಿ ಅನೇಕರು ಸಲಹೆ ಕೊಟ್ಟಿದ್ದಾರೆ. ವಿರೋಧಪಕ್ಷದ ನಾಯಕರು ಕೂಡ

ಹೇಳಿದ್ದಾರೆ. ನಾನು ಓದಿದ್ದೇನೆ, ಅದನ್ನು ತರಬೇಕು ಎಂದು ಸರ್ಕಾರದ ತೀವ್ರ ಆಲೋಚನೆಯಲ್ಲಿದೆ. ಒಂದು ಸಂದರ್ಭದಲ್ಲಿ ಇಂತಹ ಒಂದು ಜಾತೀಯ ಕರಪ್ಷನ್ ಏನು ಇದೆ, ಈ ಒಂದು ಕೆಟ್ಟ ಚಾಳಿಯನ್ನು ನಿಲ್ಲಿಸತಕ್ಕ ವ್ಯಾಪ್ತಿ ಏನಿದೆ, ಅದರ ಡೆಪ್ತ್ ಏನಿದೆ ಎನ್ನುವುದನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಇದನ್ನು ಸುಲಭವಾಗಿ ಸರಿಮಾಡುತ್ತೇವೆ ಎಂದು ಹೇಳಿದರೆ ಅದು ತಮಾಷೆಯ ಮಾತಾಗುತ್ತದೆ. ನಾವು ಪ್ರಯತ್ನ ಮಾಡೋಣ. ಅದಕ್ಕೆ ಪೀಠಿಕೆಯಾಗಿ ಕಾನೂನು ಬದಲಾವಣೆ ಮಾಡಬೇಕಾದ ಸಂದರ್ಭ ಬಂದರೂ ಕೂಡ ಕಾನೂನುಗಳನ್ನು ಮಾಡಬೇಕು. ಹೊಸದಾಗಿ ಮಾಡಬೇಕಾದ ಸಂದರ್ಭ ಬಂದರೂ ಮಾಡೋಣ. ಇದು ಕೆಲವು ಕಾರಣಗಳಿಂದ ಜಾಸ್ತಿಯಾಗುವುದಿದೆ. ಮೊದಲನೆಯದು ಅಂದರೆ, ಕಾಗದಗಳು ಬಂದು ಅಧಿಕಾರಿಯ ಟೇಬಲ್‌ನಿಂದ ಇನ್ನೊಂದು ಅಧಿಕಾರಿಯ ಟೇಬಲ್‌ಗೆ ಹೋಗುವುದು. ಒಂದು ಹಂತದಿಂದ ಇನ್ನೊಂದು ಹಂತದವರೆಗೆ ಹೋಗುವ ಸಂದರ್ಭ ಏನಿದೆ, ಅದು ನಿಧಾನವಾಗುತ್ತದೆ. ನಿಧಾನ ಎನ್ನುವುದು ಕರಪ್ಷನ್ ಪ್ರಾರಂಭಕ್ಕೆ ಕಾರಣವಾಗುತ್ತದೆ. ಮಾನ್ಯ ಅಧ್ಯಕ್ಷರೆ, ನನ್ನ ಒಂದು ಸಣ್ಣ ಅನುಭವದಲ್ಲಿ ತಾಲ್ಲೂಕು ಆಫೀಸು ಮಟ್ಟದಿಂದ ಮೇಲಿನವರೆಗೆ ಕಾಗದ ಪತ್ರಗಳು ಹೇಗೆ ಓಡಾಡುತ್ತವೆ ಎನ್ನುವುದನ್ನು ಸಾಕಷ್ಟು ತಿಳಿದುಕೊಂಡಿದ್ದೇನೆ. ಅನೇಕ ಸಂದರ್ಭಗಳಲ್ಲಿ ನನಗೆ ಗೊತ್ತಿರುವ ಹಾಗೆ ತಹಸೀಲ್ದಾರ್, ರೆವಿನ್ಯೂ ಇನ್ಸ್‌ಪೆಕ್ಟರ್‌ರಿಂದ, ಜಮೀನು ಸಂಬಂಧದಲ್ಲಿ, ಮತ್ತೊಂದು, ಮಗದೊಂದು ಸಂಧರ್ಭದಲ್ಲಿ ಕಾಗದ ಪತ್ರ ಪ್ರಾರಂಭವಾಗುತ್ತದೆ. ರೆವಿನ್ಯೂ ಇನ್ಸ್‌ಪೆಕ್ಟರಿಗೆ ನೇರವಾಗಿ ಅರ್ಜಿ ಕೊಟ್ಟರೆ ಅವನು ಶಿಫಾರಸ್ ಮಾಡಬೇಕಾಗಿದ್ದರೆ ಅವನು ಅದನ್ನು ಇಟ್ಟುಕೊಂಡೇ ಇರುತ್ತಾನೆ. ಪಾರ್ಟಿ ಅವನಲ್ಲಿ ಬರಬೇಕು. ಬರೀ ಅರ್ಜಿ ಕೊಟ್ಟು ಹೋದರೆ ಸಾಲದು, ಅವನಿಗೆ ಅಲ್ಪ ಸ್ವಲ್ಪ ಕೊಡಬೇಕು. ಆಗಿಂದಾಗ್ಗೆ ಕೊಡುತ್ತಾ ಇರಬೇಕು. ಎಷ್ಟೋ ದಿವಸಗಳಾದ ಮೇಲೆ ತಹಸೀಲ್ದಾರ್ ಆಫೀಸಿಗೆ ತಲುಪಿದಮೇಲೆ ಮತ್ತೆ, ತಹಸೀಲ್ದಾರ್ ಇಂತಹದು ಬರಲಿಲ್ಲ ಎಂದು ಕ್ವೆಯರಿ ಹಾಕಿ ಕಳುಹಿಸಿದ್ದರೆ ಇನ್ನು ಒಂದು ಆರು ತಿಂಗಳು ಇರಬೇಕಾಗುತ್ತದೆ. ಅದು ಕೂಡ ಕಡಿಮೆ. ಹೀಗೆಲ್ಲಾ ನಡೆಯುವುದು ಇದೆ, ತಹಸೀಲ್ದಾರ್ ಆಫೀಸಿನಿಂದ ಅರ್ಜಿ ಸಬ್ ಡಿವಿಜನ್ ಆಫೀಸಿಗೆ ಹೋಗಿ ಬರಬೇಕಾದರೆ, ಅಲ್ಲಿ ಸಬ್ ಡಿವಿಜನ್‌ನ ಆಫೀಸಿನಲ್ಲಿ ಕೆಲವರಿರುತ್ತಾರೆ. ಯಾರು ಮಾಡುತ್ತಾಗೆ ಎನ್ನುವುದನ್ನು ಒಂದೊಂದನ್ನು ತಮ್ಮ ಗಮನಕ್ಕೆ ತರಬೇಕು. ಇಲ್ಲಿ ಗೆಜೆಟೆಡ್ ನೌಕರರು ಅಥವಾ ನಾನ್ ಗೆಜೆಟೆಡೆ ನೌಕರರು ಎನ್ನುವ ಪ್ರಶ್ನೆ ಇಲ್ಲ. ಕೆಲಸ ಮಾಡುವುದರಲ್ಲಿ ಎಲ್ಲರೂ ಒಂದೇ.

ಶ್ರೀ ಕಾಗೋಡು ತಿಮ್ಮಪ್ಪ.—ಅದರಲ್ಲಿ ಸಂಪೂರ್ಣ ಪಾಲು ಇರುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಅಲ್ಲಿ ಏನು ಮಾಡುತ್ತಾರೆ ಎಂದರೆ ಕ್ವ್ಯಾಯರಿ ಹಾಕುವುದು. ಒಂದು ಸಾರಿ ನೋಡಿ ಕ್ವ್ಯಾಯರಿ ಹಾಕುವುದಿಲ್ಲ. ಒಂದೇ ಸಲ ಕ್ವ್ಯಾಯರಿ ಹಾಕಿಕಳುಹಿಸಿದರೆ ಫೈಸಲ್ ಆಗುತ್ತದೆ. ಹಾಗೆ ಮಾಡದೆ 6 ತಿಂಗಳು ಒಂದು ವರ್ಷ ಮಾಡುತ್ತಾರೆ. ಅಮುಲ್ದಾರರ ಆಫೀಸಿಗೆ ಕಾಗದ ಬಂದರೆ ಅವರು ಕ್ವ್ಯಾಯರಿಗೆ ಉತ್ತರ ಕಳುಹಿಸುತ್ತಾರೆ. ಆಮೇಲೆ ಇನ್ನು ಒಂದು ಕ್ವ್ಯಾಯರಿ ಹಾಕುತ್ತಾರೆ. ಹೀಗೆ ಕೆಲವು ಫೈಲಗಳು ನಿಧಾನವಾಗಿ ಮೂವ್ ಆಗುತ್ತವೆ. ಪಾರ್ಟಿಗಳು ಬಂದು ಇವರ ಮನಸ್ಸು ತೃಪ್ತಿ ಆದಹಾಗೆ, ಫೈಲ್ ಮೂವ್ ಆಗಬೇಕು. ಇವೆಲ್ಲಾ ಆಗುತ್ತಾ ಇರುವುದು ನನಗೆ ಗೊತ್ತಿದೆ. ಸೆಕ್ರೆಟೇರಿಯಟ್ ಲೆವೆಲ್ಲಿನಲ್ಲಿ ಟೈಂ ಮತ್ತು ಮೋಷನ್ ಸ್ಟಡಿ ಮಾಡುತ್ತಾ ಇದ್ದಾರೆ. ಎಕಾನಮಿ ಮಾಡುವ ದೃಷ್ಟಿಯಿಂದ ಬೇಗಬೇಗ ಕೆಲಸ ಆಗುವ ದೃಷ್ಟಿಯಿಂದ ಕೆಲವು ಕಮಿಟಿಗಳನ್ನು ಮಾಡಿದ್ದಾರೆ. ರಾಮಚಂದ್ರರಾವ್ ಕಮಿಟಿ ಮಾಡಿದ್ದರು. ಗೌರ್ನಮೆಂಟ್ ಆಫ್ ಇಂಡಿಯಾ ಲೆವೆಲ್ಲಿನಲ್ಲಿ ಅಪಿಸಿಯಲ್ ರಿಪೋರ್ಟು ಬಂದು ಆಗಿಂದಾಗ್ಗೆ ಇದರ ಬಗ್ಗೆ ವಿಮರ್ಶೆಮಾಡಿ ಕೆಲವು ಶಿಫಾರಸ್ಸುಗಳನ್ನು ತಂದರೂ ನಮಗೆ ಇನ್ನೂ ತೃಪ್ತಿಕರವಾಗಿ ಕೆಲಸ ಆಗುತ್ತಾ ಇಲ್ಲ ಎನ್ನುವ ದೂಷಣೆ ಇನ್ನೂ ಇದ್ದೇ ಇದೆ. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಎಲ್ಲರ ಸಹಕಾರದಿಂದ ಇಂಥ ಕೆಟ್ಟ ಚಾಳಿ ಕಮ್ಮಿ ಮಾಡಬೇಕು, ನಿಲ್ಲಿಸಬೇಕು. ಕರಪ್ಷನ್ ಆರ್ಗನೈಜಡ್ ವೇ ನಲ್ಲಿ ಕೆಲವು ಕಡೆ ನಡೆಯುತ್ತಾ ಇದೆ ಎಂದು ಗೊತ್ತಾಗಿದೆ. ಕೆಲವು ಸಂಪರ್ಬಗಳಲ್ಲ ನಿದಾನ ಆಗುವ ಕಾರಣ ಆದರೆ ನಮ್ಮ ಕಾನೂನುಗಳಲ್ಲಿ ಕೆಲವು ದೋಷಗಳು ಇವೆ. ಕಾನೂನುಗಳನ್ನು ಮಾಡುವಾಗ ಕೆಲವು ಸಂದರ್ಭಗಳಲ್ಲಿ ಎಷ್ಟು ಕಾಂಪ್ಲಿಕೇಟೆಡ್ ಆಗಬೇಕೋ ಅಷ್ಟು ಮಾಡಿ ಇಟ್ಟುಬಿಡುತ್ತೇವೆ. ಎಷ್ಟೆಷ್ಟು ಕಠಿಣವಾಗಿ ಆಗುತ್ತದೋ ಅಷ್ಟಷ್ಟು ಕೆಟ್ಟ ಚಾಳಿಗೆ ಅನುಕೂಲವಾಗುತ್ತವೆ. ಉದಾಹರಣಗೆ ಹೇಳುವುದಾದರೆ ಟ್ರಾನ್ಸ್‌ಪೋರ್ಟ್ ಸಿಸ್ಟಮ್ ತೆಗೆದುಕೊಳ್ಳಿ. ಲಾರಿಗಳನ್ನು ಲೋಡು ಮಾಡುವಾಗ ಏನಾಗಿದೆ ಎಂದರೆ ಯಾವ ಲಾರಿಯಲ್ಲಿ ಕೂಡ 10 ಟನ್ ಮೇಲೆ ಲೋಡ್ ಹಾಕಬಾರದು ಎಂದು ಕಾನೂನು ಮಾಡಿ ಇಟ್ಟಿದ್ದಾರೆ. ಮರ್ಸಿಡೀಸ್ ಬೆಂಜ್ ಚಾಸೀಸ್ 15 ಟನ್ ಮೇಲೆ ಭಾರವನ್ನು ತಡೆಯುತ್ತವೆ. 15 ಟನ್ ಹಾಕಬಹುದಾದರೂ ನಾವು,

(ಶ್ರೀ ಡಿ. ದೇವರಾಜ್ ಅರಸ್)

ಕಾನೂನಿನಲ್ಲಿ 10 ಟನ್ ಮೇಲೆ ಹಾಕಕೂಡದು ಎಂದು ಹೇಳಿದ್ದೇವೆ. ಎಲ್ಲಾ ಕಡೆ ವೇ ಬ್ರಿಡ್ಜ್ಸ್ ಇಟ್ಟಿದ್ದಾರೆ. ಇದರಿಂದ ಅವರಿಗೆ ಲಂಚಕ್ಕೆ ಅನುಕೂಲ ಮಾಡಿಕೊಟ್ಟಹಾಗೆ ಆಯಿತು. ಬಾಂಬೆಯಿಂದ ಬೆಂಗಳೂರಿಗೆ ಬರತಕ್ಕ ಯಾವ ಲಾರಿಯೂ 10 ಟನ್ ಹಾಕಿಕೊಂಡು ಬರುವುದಿಲ್ಲ. 15—16 ಟನ್ ಹಾಕಿರುತ್ತಾರೆ. ನಾನು ಹಿಂದೆ ಮಿನಿಷ್ಟರ್ ಆಗಿದ್ದಾಗ ಈ ಕಾನೂನು ಬದಲಾಯಿಸಬೇಕೆಂದು ಹೇಳಿದೆ. ಇಂಜಿನಿಯರಿಂಗ್ ಇಲಾಖೆಯವರು ಹೇಳಿದರು ಅವರ ಒಪೀನಿಯನ್ ಇಲ್ಲದೆ ಬದಲಾಯಿಸುವುದಕ್ಕೆ ಆಗುವುದಿಲ್ಲ ಎಂದು ಅವರು ಹೇಳುತ್ತಾರೆ. ಬ್ರಿಡ್ಜ್‌ಗಳ ಮೇಲೆ 10 ಟನ್‌ಗಿಂತ ಜಾಸ್ತಿ ಲೋಡ್ ಹೋದರೆ ಬ್ರಿಡ್ಜ್ ಮುರಿದುಕೊಳ್ಳುತ್ತದೆ ಎಂದು. ಆದರೆ ಆಗಲೇ ಆ ಬ್ರಿಡ್ಜ್‌ಗಳ ಮೇಲೆ 15 ಟನ್ ಬಂದಿರುತ್ತದೆ. ಇದನ್ನು ಸುಮ್ಮನೆ ಉದಾಹರಣೆಯಾಗಿ ಹೇಳಿದೆ. ನಾವು ಕಾನೂನುಗಳನ್ನು ಅನೇಕ ರೀತಿಯಲ್ಲಿ ದುರುಪಯೋಗ ಮಾಡುವಂತೆ ಮಾಡಿ ಇಟ್ಟಿದ್ದೇವೆ. ಜನಸಾಮಾನ್ಯರಿಗೆ ನಮ್ಮ ಜೀವನ ಎಲ್ಲಾ ವಿಷಯಗಳಲ್ಲೂ ನಮ್ಮ ನಡವಳಿಕೆ ಸರಳವಾಗಿಲ್ಲ. ಯಾವುದೋ ಕಾಲದಲ್ಲಿ ಕೇವಲ ಅಗ್ರಿಕಲ್ಚರ್ ಸೊಸೈಟಿ ಆಗಿ ಇದ್ದ ಕಾಲದಲ್ಲಿ ನಮ್ಮ ಜೀವನ ಸರಳವಾಗಿತ್ತು, ಊಟ ಮಾಡುವುದು, ಹೊಲ ಊಳುವುದು, ಓದುವುದು, ಮಲಗುವುದು ಹಾಗೆ ಇಲ್ಲ. ಸೈನ್ಸ್ ಟೆಕ್ನಾಲಜಿ ಬೆಳೆದಹಾಗೆ ಸೊಸೈಟಿ ಕೂಡ ಕಾಂಪ್ಲಿಕೇಟ್ ಆಗುತ್ತಿದೆ. ಸೊಸೈಟಿಯಲ್ಲಿ ಯಾವ ಕಾನೂನು ಇಲ್ಲದೆ ನಡೆಸುತ್ತೇವೆ ಎಂದು ಹೇಳಿದರೆ ಅದು ತಮಾಷೆ ಮಾತು ಆಗುತ್ತದೆ. ಕಾನೂನು ಇರಬೇಕು. ಇದ್ದಂಥ ಕಾನೂನುಗಳನ್ನು ವಾಸ್ತವಿಕ ದೃಷ್ಟಿಯಿಂದ ಯಾವರೀತಿ ಸರಳ ಮಾಡಬೇಕು ಎನ್ನುವುದು ಪರಿಶೀಲನೆ ಮಾಡಬೇಕು.

ಮತ್ತೆ ಅಧಿಕಾರಿಗಳ ವಿಚಾರದಲ್ಲಿ ಕೆಲವು ಟೀಕೆಗಳು ಬಂದಿವೆ. ಅವರನ್ನು ವರ್ಗ ಮಾಡಿದ ವಿಚಾರ ಮತ್ತು ಅವರನ್ನು ಯಾತಕ್ಕೆ ಇಲ್ಲಿ ಹಾಕಿದರು. ಚೀಫ್ ಇಂಜನಿಯರನ್ನು ಯಾತಕ್ಕೆ ಹಾಕಿದರು, ಪೋಲೀಸ್ ಐ. ಜಿ. ಪಿ.ಯನ್ನು ಯಾತಕ್ಕೆ ಮಾಡಿದರು ಡೆವಲಪ್‌ಮೆಂಟ್ ಕಮಿಷನರ್ ಏತಕ್ಕೆ ಇಟ್ಟಿದ್ದೀರಿ, ಇತ್ಯಾದಿ ಟೀಕೆಗಳು ಬಂದಿವೆ. ಇನ್ನು ಈ ವಿಷಯದಲ್ಲಿ ತಮ್ಮಲ್ಲಿ ಅರಿಕೆ ಮಾಡುವುದು ಇಷ್ಟೇ. ಒಟ್ಟಿನಲ್ಲಿ, ಒಬ್ಬ ಅಧಿಕಾರಿಯನ್ನು ಯಾತಕ್ಕೆ ಹಾಕಿದಿರಿ ಎನ್ನುವುದಕ್ಕಿಂಥ ಆ ಅಧಿಕಾರಿಯಿಂದ ಕೆಲಸ ತೆಗೆದುಕೊಳ್ಳದಿದ್ದರೆ ನಮ್ಮನ್ನು ಆಕ್ಷೇಪಣೆ ಮಾಡುವುದು ಸರಿ. ಒಬ್ಬ ಒಂದು ಕಡೆ ಇರಬೇಕು ಎನ್ನುವ ಕಾರಣದಿಂದ ಹೇಳುತ್ತಾ ಇಲ್ಲ. ಅವರನ್ನು ಸುಲಭವಾಗಿ ವರ್ಗಾವಣೆ ಮಾಡುವುದಕ್ಕೆ ಆಗದೆ ಇರುವ ಸಂದರ್ಭ ಇರುವುದರಿಂದ, ಹಾಗೆ ವರ್ಗಾವಣೆ ಮಾಡುವುದಕ್ಕೆ ಆಗುವುದಿಲ್ಲ. ಡೆವಲಪ್‌ಮೆಂಟ್ ಕಮಿಷನರ್ ಅವರು ಕೆಟ್ಟವರು ಒಳ್ಳೆಯವರು, ಎಂದು ಹೇಳುವುದು ಅಷ್ಟು ಸರಿಯಿಲ್ಲ. ಅವರು ತೃಪ್ತಿಕರವಾಗಿ ಕೆಲಸ ಮಾಡಿದ್ದಾರೆ. ಹಿಂದಿನಿಂದಲೂ ಮಾಡಿಕೊಂಡು ಬಂದಿದ್ದಾರೆ. ಹಿಂದಿನ ಸರ್ಕಾರ ಮೆಚ್ಚಿ ಇಟ್ಟುಕೊಂಡಿದ್ದಾರೆ. ಈಗ ಏಕಾಏಕಿ ಕೆಟ್ಟವರು ಎಂದು ಹೇಳುವುದಕ್ಕೆ ನನಗೆ ಯಾವ ಕಾರಣವೂ ಇಲ್ಲ. ಮತ್ತೆ ಬದಲಾವಣೆ ಮಾಡಬೇಕೇ ಬೇಡಬೇಕೇ ಎಂದರೆ ಹುದ್ದೆ ಹೈಯೆಸ್ಟ್ ಪೋಸ್ಟು ನೆಕ್ಸ್ಟ್ ಟುದಿ ಚೀಫ್ ಸೆಕ್ರೆಟರಿ. ನಾನು ಮಾಡಿದ್ದು ಅಲ್ಲ. ಅದು ಮೊದಲಿನಿಂದಲೂ ಇದ್ದದ್ದು. ಆ ಹುದ್ದೆ ಅವರು ಮಾಡಿದ್ದು ತಪ್ಪು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ತಾವು ಏನಾದರೂ ಹೇಳಿರಿ ಆ ಮಾತು ಬೇರೆ. ನಾನು ಅದನ್ನು ಹೇಳುತ್ತಾ ಇಲ್ಲ. ಆ ರೀತಿ ಇರುವುದರಿಂದ ಸುಲಭವಾಗಿ ನಾನು ಇವರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಟ್ರಾನ್ಸ್‌ಫರ್ ಮಾಡುವುದಕ್ಕೆ ಸಾಧ್ಯವಿಲ್ಲ. ವ್ಯಕ್ತಿಶಃ ಅಧಿಕಾರಿ ಏನಾದರೂ ತಪ್ಪು ಮಾಡಿದ್ದರೆ ಅದಕ್ಕೆ ನಾವು ಯಾವರೀತಿ ತಪ್ಪನ್ನು ನೋಡಬೇಕು. ಶಿಕ್ಷೆಮಾಡಬೇಕೇ, ಬಿಡಬೇಕೇ ಎನ್ನುವ ಮಾತು ಬೇರೆ. ತಪ್ಪು ಏನೂ ಇಲ್ಲದ ಅಧಿಕಾರಿ ಕೆಟ್ಟವರು ಎಂದು ಹೇಳಿದರೆ, ಅದು ಅಷ್ಟು ಸೂಕ್ತವಾಗಲಿಕ್ಕಿಲ್ಲ. ವೈಯುಕ್ತಿಕವಾಗಿ ಅವರು ಕೆಟ್ಟವರು ಎಂದು ಹೇಳುವುದು ಅಷ್ಟು ಸೂಕ್ತವಲ್ಲ, ಅವರು ಸರ್ಕಾರಕ್ಕೆ ಸಮರ್ಪಕವಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ.

1.00-P.M.

ಕೆಲವು ವಿಚಾರಗಳಲ್ಲಿ ಸ್ವಲ್ಪ ಹೆಚ್ಚು ಕೆಲಸಗಳನ್ನು ನಾವು ಮೆಚ್ಚಿಕೊಳ್ಳುವ ಹಾಗೆ ಮಾಡಿದ್ದಾರೆ. ಹೋಮ್ ಸೆಕ್ರೆಟರಿಯವರನ್ನು ವರ್ಗ ಮಾಡಿದ್ದು ಏತಕ್ಕೆ ಎಂದು ಮಾನ್ಯ ನಾಗರಾಜ್ ಅವರು ಕೇಳಿದರು. ಅವರು 5—6 ವರ್ಷಗಳಿಂದ ಒಂದೇ ಸ್ಥಾನದಲ್ಲಿ ಇದ್ದರು. ಕೆಲವು ಸ್ಥಾನಗಳನ್ನು ಬದಲಾವಣೆ ಮಾಡತಕ್ಕಂಥ ಅವಕಾಶ ಬಂದಾಗ ಒಂದೇ ಕಡೆ ಹೆಚ್ಚು ಕಾಲ ಇರುವವರನ್ನು ಬದಲಾವಣೆ ಮಾಡುವುದು ಸ್ವಾಭಾವಿಕ. ಅದರಂತೆ ಅವರನ್ನು ಮಾಡಲಾಗಿದೆ. ಅವರ ಜಾಗಕ್ಕೆ

ಬೇರೆಯವರು ಬಂದಿದ್ದಾರೆ. ಅವರನ್ನು ಬದಲಾವಣೆ ಮಾಡಿದ್ದರಿಂದ ಮಾನ್ಯ ಸದಸ್ಯರಿಗೆ ಆದ ತೊಂದರೆಯಾದರೂ ಏನು ? ನಾವೇನಾದರು ದುರುದ್ದೇಶದಿಂದ with bad motive ನಿಂದ ಬದಲಾವಣೆ ಮಾಡಿದ್ದರೆ ಅಗ ಹೇಳಲಿ ; ಮತ್ತು ದುರುದ್ದೇಶ ಇದೆ ಎಂಬುದು ಸಾಬೀತಾದರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಎಲ್ಲ ಅಧಿಕಾರಿಗಳಿಗೂ ಇದೇ ತತ್ವವನ್ನು ಅನ್ವಯ ಮಾಡುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ನಾರ್ಮಲ್ ಅಗಿ ಎಲ್ಲರಿಗೂ ಅನ್ವಯ ಮಾಡತಕ್ಕಂಥ ರೂಲ್ಸನ್ನೇ ಇವರಿಗೂ ಅನ್ವಯ ಮಾಡಿದ್ದೇವೆ.

Sri M. S. KRISHNAN.—There is a rule that they must be changed after a particular period of service in the same post.

Sri D. DEVARAJ URS.—But every rule has an exception. Normally the rule is applied. Ultimately it is followed in the discretion of the Government.

Sri M. S. KRISHNAN.—I agree. But the question is when an Officer is in the same post for 5 years and above, better to see that he is displaced and some other Officer posted in his place.

Sri D. DEVARAJ URS.—Definitely. I follow it invariably in almost all cases.

Sri C. M. ARUMUGAM (K.G.F.).—I submit that some Officers and Secretaries in the Secretariat feel that they are inevitable and that the posts they hold are their home property. They think that they are justified in feeling so because they are continued in the same post and capacity for 10 to 12 years at a stretch. Does not the Chief Minister feel that the Officers should reflect the socialistic views of the Government ? Some of these Officers who are continuing in the same post for more than 10 years are useful neither to the Administration nor to the people. Some of them were chosen for the posts during the President's Rule when Sri Dharmaveera was the Governor of Mysore. Does not the Chief Minister in his wisdom feel the necessity to change those Officers in view of the changed circumstances and set up and post those who are committed to socialist views ?

Sri D. DEVARAJ URS.—Madam, I have already stated that normally we have adopted this principle of changing Officers after a certain time.

Sri C. M. ARUMUGAM.—Nowhere in the country a top Police Officer has continued in the same post for more than 8 to 9 years. Have you any such precedent anywhere in the country ? There was a Police Officer who held the post of the I.G.P. in Mysore State for 10 years or even more. He was thinking that he was indispensable and that he will continue as I.G.P. for ever. Since he was I.G.P. for an unprecedented period, the subordinate officers were actually afraid of him. If the present Chief Minister also wants to follow in the footsteps of Veerendra Patil Government and Nijalingappa Government, I have no objection; let him follow them. But in the new set up of the Government which is out to bring revolutionary socio-economic changes, is it not necessary to disturb these Officers who cannot adjust themselves to the changed set up ?

Sri D. DEVARAJ URS.—After hearing me so long, I request the hon. member not to entertain that doubt. Wherever it is not possible, a change has not been effected; that is only in one or two instances. Normally, as replied to Sri M. S. Krishnan, every Officer has been changed after a certain period. This principle is applied to all; I am not saying that this principle will be applied here and not there. I do appreciate the anxiety of the hon. member: but I may tell him that except in one or two instances, the principle of changing officers after a stipulated period has been adopted by us all along. If the previous Government has given a go-by to that principle, it is a different matter. But we want to implement that principle. When Sri Arumugam was not present in the House, everybody felt the dullness of the Assembly! How is that although so many members were present here? Some Officers are like that. They have become inevitable like Sri Arumugam. But that cannot be a rule. Sri Arumugam is an exception. So, some times there are exceptions.

Sri C. M. ARUMUGAM.—Thanks. The Hon'ble Chief Minister is good to me. He is really very kind to me.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ನಾಗರಾಜ್ ಅವರು ಪೋಲೀಸ್ ಡಿಮ್ಯಾಂಡ್ ಬಗ್ಗೆ ಮಾತನಾಡುತ್ತಾ ಐ.ಜಿ.ಪಿ. ಪೋಸ್ಟ್‌ಗಳನ್ನು ಜಾಸ್ತಿ ಮಾಡಿದ್ದು ಏತಕ್ಕೆ ಎಂದು ಕೇಳಿದರು. ಈಗ ಮೂರು ಜನ ಐ.ಜಿ.ಪಿ. ಗಳು ಇಲ್ಲ. ಇರುವವರು ಒಬ್ಬರೇ ಐ.ಜಿ.ಪಿ. ವಿಜಿಲೆನ್ಸ್ ಮತ್ತು ಹೋಮ್‌ಗಾರ್ಡ್ಸ್ ಪೋಸ್ಟ್‌ಗಳ ಪೇ-ಸ್ಕೇಲನ್ನು ಅಪ್-ಗ್ರೇಡ್ ಮಾಡಬೇಕಾದುದು ಅಗತ್ಯ ಎಂದು ಹಿಂದಿನ ರಾಜ್ಯಪಾಲರೇ ಕೇಂದ್ರ ಸರ್ಕಾರಕ್ಕೆ ಬರೆದು ಆ ಪೋಸ್ಟ್‌ಗಳನ್ನು ಅಪ್‌ಗ್ರೇಡ್ ಮಾಡಿಸಿದ್ದಾರೆ. ಅದನ್ನು ನಾವು ಹೇಳಿ ಮಾಡಿಸಿದ್ದಲ್ಲ. ಆ ಎರಡು ಪೋಸ್ಟ್‌ಗಳಿಗೆ ಸೀನಿಯರ್ ಪೋಲೀಸ್ ಆಫೀಸರ್‌ಗಳನ್ನು ನೇಮಕ ಮಾಡಲಾಗಿದೆ. ಈ ಪೋಸ್ಟ್‌ಗಳನ್ನು ಬಿಟ್ಟರೆ, ಪೋಲೀಸ್ ಇಲಾಖೆಯಲ್ಲಿ ಐ.ಜಿ.ಪಿ. ಯಿಂದ ಡೌನ್‌ವರ್ಡ್ಸ್ ಎಲ್ಲ ಹುದ್ದೆಗಳು ಹಿಂದೆ ಇದ್ದ ಹಾಗೆ ಸೆಟ್‌ಅಫ್ ಇನ್‌ಟ್ಯಾಕ್ಟ್ ಇವೆ.

ಇನ್ನು ಜಿ.ಎ.ಡಿ. ಬಗ್ಗೆ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ತಮ್ಮ ಒಂದು ಉತ್ತರದಿಂದ ಲಂಚ ಇನ್ನೂ ಇದೆ ಎಂಬುದು ಅರ್ಥ ವಾಯಿತು. ಅದನ್ನು ತೆಗೆದುಹಾಕುವುದಕ್ಕೆ ಏನು ಸಲಹೆಯನ್ನು ತಾವು ಮಾಡಿದ್ದೀರಿ ಎಂಬುದನ್ನು ಹೇಳಲಿಲ್ಲ. ಈಗ ಲಂಚವನ್ನು ತಡೆಗಟ್ಟುವುದಕ್ಕೆ ಏನು ಕೆಲವು ಇಲಾಖೆಗಳಿವೆ ಅವುಗಳಿಂದ ಕೂಡ ಅದನ್ನು ನಿಲ್ಲಿಸುವುದಕ್ಕೆ ಆಗಲಿಲ್ಲ. ಈ ಕಾರಣದಿಂದ ನಾನು ಹೇಳಿದಂತೆ ಒಂದು ಕಮೀಷನ್ ನೇಮಕ ಮಾಡಬೇಕು. ಮತ್ತು ನಾನು ಹೇಳಿದಂಥ ಸಲಹೆಗಳನ್ನು ಜಾರಿಗೆ ತಂದರೆ ಮೂರು ದಿವಸ ಗಳಲ್ಲಿ ಲಂಚ ಎಂಬುದನ್ನು ಖತಂ ಮಾಡಬಹುದು.

ಶ್ರೀ ಡಿ. ದೇವರಾಜ ಅರಸ್.—ತಮ್ಮ ಸಲಹೆಗಳನ್ನು ನಾನು ಕೇಳಿದ್ದೇನೆ. ಆದರೆ ತಮ್ಮ ಸಲಹೆಗಳನ್ನು ಕಾರ್ಯಗತ ಮಾಡಲು ನಮ್ಮಿಂದ ಸಾಧ್ಯವಾಗುವುದಿಲ್ಲ. ನೀವೇ ಮುಖ್ಯಮಂತ್ರಿ ಗಳಾಗಿ ಬಂದು ಅದನ್ನು ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ —ದಯವಿಟ್ಟು ಆ ಒಂದು ಅವಕಾಶವನ್ನು......

ಶ್ರೀ ಡಿ. ದೇವರಾಜ ಅರಸ್.—ನನ್ನ ಕೈಯಲ್ಲಿ ಕೊಡುವುದು ಇದ್ದರೆ ಕೊಡುತ್ತಿದ್ದೆ. ಆದರೆ ನನ್ನ ಕೈಯಲ್ಲಿ ಇಲ್ಲ. ಮತ್ತೊಂದು ಚುನಾವಣೆ ಬಂದಾಗ ನೋಡೋಣ. ನಾನು ಮೊದಲೆ ಹೇಳಿದ ಹಾಗೆ ಲಂಚವನ್ನು ತಡೆಗಟ್ಟುವುದಕ್ಕೆ ವಿಜಿಲೆನ್ಸ್ ಕಮಿಷನ್ ಇದೆ. ಲೋಕಪಾಲ ಮತ್ತು ಲೋಕಆಯುಕ್ತ ಮಸೂದೆಗಳನ್ನು ತರಬೇಕೆಂದಿದ್ದೇವೆ. These are steps in the direction of trying to minimise corruption in the Administration and, if possible to remove it. ಇದರ ಜೊತೆಗೆ ಈಗಿರತಕ್ಕಂಥ ಕೆಲವು ಕಾನೂನುಗಳನ್ನು ಬದಲಾವಣೆ ಮಾಡಬೇಕೆಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಮತ್ತು ಹೆಚ್ಚು ಕಾಲ

ಒಂದೇ ಹುದ್ದೆಯಲ್ಲಿರುವವರನ್ನು ಬದಲಾವಣೆ ಮಾಡಬೇಕೆಂದು ಹೇಳಿದರು. ಅದನ್ನು ಮಾಡೋಣ. ಮುಖ್ಯವಾಗಿ ನಾವು ಮತ್ತು ನೀವು ಸೇರಿಕೊಂಡು ಮಾಡಬೇಕಾಗಿದೆ. ನಿಮ್ಮೆಲ್ಲರ ಸಹಾಯ ನಮಗೆ ಬೇಕಾಗಿದೆ. ತಪ್ಪಾಗಿರುವುದನ್ನು ದಮನ ಮಾಡಲು ಕಾನೂನಿನ ಅಡಚಣೆ ಇದ್ದರೆ ಕಾನೂನನ್ನು ಬದಲಾವಣೆ ಮಾಡೋಣ. ಈಗ ಏನಾಗುತ್ತಿದೆ ಎಂದರೆ, ಸರ್ಕಾರದವರು ಯಾರಾದರೂ ಅಧಿಕಾರಿಗಳನ್ನು ಅನುಮಾನದ ಕಾರಣದಿಂದ ಅಥವಾ ಮತ್ತೊಂದು ಕಾರಣದಿಂದ ತಾತ್ಕಾಲಿಕವಾಗಿ ಸಸ್ಪೆಂಡ್ ಮಾಡಿ ತನಿಖೆಗೆ ಒಳಪಡಿಸಿದರೆ, ಆ ಅಧಿಕಾರಿಯನ್ನು ಏತಕ್ಕೆ ಸಸ್ಪೆಂಡ್ ಮಾಡಿದಿರಿ ಎಂದು ಅಕ್ಷೇಪಣೆ ಕೂಡ ಬರುತ್ತದೆ.

Wherever Government finds it necessary or where certain charges are made against certain officers, I think the House will agree that there should be no interference from anybody. The moment Government takes some disciplinary action by way of suspending a person, he goes to some member or some important gentleman belonging to his caste and goes on telling him stories after stories. He tells him that the Minister belongs to a particular caste and he belongs to some other caste and so they try to do him some harm. He also tells him that he is next to Harischandra. Unfortunately, sometimes some of our people really believe all they say for the moment. In all their ignorance they think that it may be so, because I belong to one caste and the officer against whom I want to take disciplinary action belongs to some other caste and anybody to start with will normally think that the disciplinary action has been taken due to caste feelings. When we want to take some action honestly with a view to correcting the administration, if such motives are imputed I am sorry I do not know how to function at all. It becomes very difficult to function. In one breath you want Government to put an end to corruption and in another breath if you say that we should not take action or should not suspend it becomes difficult. They have all joined as one syndicate. They are going from door to door. They have taken in their group even some contractors in the Corporation.

ತಾವುಗಳು ಯಾರೂ ತಪ್ಪು ತಿಳಿದುಕೊಳ್ಳಬಾರದು ಈಗ ನನಗೆ ಆಗಿರತಕ್ಕ ಅನುಭವದಿಂದ ಈ ವಿಚಾರವನ್ನು ನಾನು ಹೇಳುತ್ತಿದ್ದೇನೆ. ಉದಾಹರಣೆಗೆ ಈಗ ಸಸ್ಪೆಂಡ್ ಆಗಿರತಕ್ಕ 17 ಜನ ಕಾರ್ಪೊರೇಷನ್ ಅಧಿಕಾರಿಗಳು ಏನಿದ್ದಾರೆ ಅವರೆಲ್ಲರೂ ಈಗ ಒಂದು ಸೊಸೈಟಿ ತರಹ ಮಾಡಿಕೊಂಡು ಕೆಲವು ಕಂಟ್ರಾಕ್ಟರುಗಳೊಡನೆ ಸೇರಿಕೊಂಡು ಹಣ ಕೂಡಿಸಿಕೊಂಡು ರಾಜಕೀಯ ಮಾಡುತ್ತಿದ್ದಾರೆ. ಅವರಿಗೆ ಕೆಲವು ರಾಜಕಾರಣಿಗಳೂ ಪ್ರೋತ್ಸಾಹ ಕೊಡುತ್ತಿದ್ದಾರೆ. ಆ ಮಂತ್ರಿ ಕೆಟ್ಟವನು, ಅವನು ಆ ಜಾತಿಯವನು, ಈ ಜಾತಿಯವನು, ಎಂದು ಪ್ರಚಾರ ಮಾಡುತ್ತಿದ್ದಾರೆ. ಸಸ್ಪೆಂಡ್ ಆಗಿರತಕ್ಕ ಅಧಿಕಾರಿ ಅವರ ಜಾತಿಯ ಎಂ. ಎಲ್. ಎ. ಹತ್ತಿರ ಹೋಗಿ ಮಂತ್ರಿ ಬೇರೆ ಜಾತಿಯವನು ಅದಕ್ಕೋಸ್ಕರ ಆ ಮಂತ್ರಿಗಳು ಹೀಗೆ ಮಾಡಿದ್ದಾರೆ ಎಂದು ಹೇಳುವವರೂ ಇದ್ದಾರೆ. ಎಲ್ಲರೂ ಒಂದಲ್ಲ ಒಂದು ಜಾತಿಗೆ ಸೇರಿದವರು. ಯಾರನ್ನು ಎಲ್ಲಿ ನೇಮಿಸಿದರೂ ಅವರೊಂದು ಜಾತಿಗೆ ಸೇರಿರುತ್ತಾರೆ. ಆದ್ದರಿಂದ ಏನೇ ಮಾಡಿದರೂ ಅದಕ್ಕೆ ಜಾತಿಯ ಬಣ್ಣವನ್ನು ಹಚ್ಚುವುದು ಬೇಡ. ಈ ಮನೋಭಾವದಿಂದ ಸ್ವಲ್ಪ ದೂರವಿದ್ದರೆ ಒಳ್ಳೆಯದು. ರಾಜಕಾರಿಣಿಗಳು ಇಂಥಾದ್ದಕ್ಕೆ ಪ್ರೋತ್ಸಾಹ ಕೊಡುತ್ತಾ ಹೋದರೆ ಲಂಚಗುಳಿತನ ಮತ್ತು ಭ್ರಷ್ಟಾಚಾರವನ್ನು ನಿಲ್ಲಿಸುವುದು ಹೇಗೆ? ಒಂದುವೇಳೆ ನಾವು ಮಾಡತಕ್ಕದ್ದು ಅನ್ಯಾಯವಾಗಿದ್ದರೆ ಅದು ಕಾನೂನಿಗೆ ವಿರೋಧವಾಗಿದ್ದರೆ ಅದಕ್ಕೆಲ್ಲಾ ಕೋರ್ಟುಗಳು ಇವೆ. ಅನ್ಯಾಯವಾಗಿರತಕ್ಕವರು ಕೋರ್ಟಿಗೆ ಹೋದರೆ ಅವರು ಅಲ್ಲಿ ನ್ಯಾಯವನ್ನು ದೊರಕಿಸುತ್ತಾರೆ. ಹೀಗಿರುವಾಗ ಸರ್ಕಾರ ಮಾಡಿದ ಡಿಸಿಪ್ಲಿನರಿ ಕೆಲಸಗಳನ್ನು ಕ್ವೆಶ್ಚನ್ ಮಾಡಿದರೆ ಹೇಗೆ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಆಪಾದನೆ ಇರತಕ್ಕ ಎಲ್ಲಾ ಅಧಿಕಾರಿಗಳನ್ನೂ ಸಸ್ಪೆಂಡ್ ಮಾಡದೆ ಕೇವಲ ಕೆಲವು ಅಧಿಕಾರಿಗಳನ್ನು ಆರಿಸಿ ಸಸ್ಪೆಂಡ್ ಮಾಡಿದ್ದೀರಿ ಈ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಡಿ. ದೇವರಾಜ ಅರಸ್.—ಅದು ಸರಿಯಲ್ಲ. ಎಲ್ಲೆಲ್ಲಿ ಅಪಾದನೆಗಳು ಇವೆ ಎಂಬುದನ್ನು ನಾವು ಹುಡುಕಲಿಲ್ಲ. ಹಿಂದಿನ ಅಪಾದನೆಗಳು ಇದ್ದುವು. ರಾಜ್ಯಪಾಲರ ಕಾಲದಲ್ಲೇ ಬೆಂಗಳೂರು ಕಾರ್ಪೊರೇಷನ್ನಿನ ಕೇಸುಗಳು ವಿಜಿಲೆನ್ಸ್ ಕಮಿಷನ್ನಿಗೆ ಹೋಗಿದ್ದುವು. ಈಗ ನಾವು ಇಲ್ಲಿಗೆ ಅಧಿಕಾರಕ್ಕೆ ಬಂದಮೇಲೆ ವಿಜಿಲೆನ್ಸ್ ಕಮಿಷನ್ನಿನಿಂದ ವರದಿಗಳು ಬಂದಿವೆ. ಆ ವರದಿಯ ಆಧಾರದ ಮೇಲೆ ಅವರನ್ನು ನಾವು ಸಸ್ಪೆಂಡ್ ಮಾಡಿದ್ದೇವೆ. ಈಗ ಅವರನ್ನು ಸಸ್ಪೆಂಡ್ ಮಾಡದೆ ಇನ್ನೇನು ಮಾಡೋಣ ? ಕೆಲವರನ್ನು ಮಾತ್ರ ಸಸ್ಪೆಂಡ್ ಮಾಡಿದ್ದೀರಿ ಎಂದು ಹೇಳಿದರೆ ಹೇಗೆ ? ಯಾರ ಮೇಲೆ ಆಪಾದನೆಗಳು ಬಂದಿದ್ದವೋ ಅವರನ್ನು ಸಸ್ಪೆಂಡ್ ಮಾಡಿದ್ದೇವೆ. ಪ್ರತಿಯೊಬ್ಬರು ಒಂದಲ್ಲ ಒಂದು ಜಾತಿಗೆ ಸೇರಿದವರೇ ಆಗಿದ್ದಾರೆ. ಅವರನ್ನೇಕೆ ನೀವು ನಂಬುತ್ತೀರಿ ? ಒಂದು ದೃಷ್ಟಿಯಲ್ಲಿ ಅಧಿಕಾರಿಗಳದ್ದೇ ಒಂದು ಜಾತಿ. ಅಧಿಕಾರಿಗಳಲ್ಲಿ ಎಲ್ಲರೂ ಕೆಟ್ಟವರು ಎಂದು ನಾವು ಹೇಳುವುದಕ್ಕಾಗುವುದಿಲ್ಲ, ಅವರಲ್ಲಿಯೂ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಅಧಿಕಾರಿಗಳಲ್ಲಿಯೂ ಪ್ರಾಮಾಣಿಕರು ಹಾಗೂ ದೇಶಭಕ್ತರು ಇದ್ದಾರೆ. ಆದರೆ ದೇಶದಲ್ಲಿ ರಾಜಕೀಯ ಹಾಳಾಗಿ ಜಾತೀಯತೆ ಹೆಚ್ಚಿ ಭ್ರಷ್ಟಾಚಾರ ಬೆಳೆದಿರುವುದಕ್ಕೆ ಕೆಲವು ಅತೃಪ್ತ ಅಧಿಕಾರಿಗಳೇ ಕಾರಣ. ಯಾರಿಗಾದರೂ ಪ್ರಮೋಷನ್" ಆದರೆ ಅದಕ್ಕೆ ಬೇರೆ ಜಾತಿ ಮಂತ್ರಿ ಕಾರಣ, ಯಾರಾದರೂ ಸಸ್ಪೆನ್ಷನ್ ಆದರೆ ಅದಕ್ಕೆ ಬೇರೆ ಜಾತಿ ಕಾರಣ, ಇನ್ನೇನಾದರೂ ಅದರಲ್ಲೂ ಜಾತಿ ಕಾರಣ. ಅಧಿಕಾರಿಗಳು ಹೀಗೆ ಹೇಳಿ ಹೇಳಿ ನಾವು ಕೇಳಿ ಕೇಳಿ ಗೊಂದಲದಲ್ಲಿ ಬಿದ್ದು ನಾವು ಪರಸ್ಪರ ಬೈದುಕೊಳ್ಳುವ ಪ್ರಸಂಗ ಬಂದಿದೆ. ಇದು ಈಗ ದೇಶದಲ್ಲಿ ನಡೆಯುತ್ತಿದೆ. ಯಾರಮೇಲಾದರೂ ಮೊದಲನೋಟಕ್ಕೆ ಅಪರಾಧಿ ಎಂದು ಕಂಡುಬಂದರೆ ಅವರು ಯಾವುದೇ ಜಾತಿ, ವರ್ಗ, ಜನಾಂಗ ಆಗಲಿ ಶಿಸ್ತು ಕ್ರಮವನ್ನು ಖಂಡಿತಾ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಈಗ ತಾವು ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದು ಸಂತೋಷ ಕೆಲವು ಸೆಕ್ರೆಟರಿಗಳು ಇದ್ದಾರೆ. ಅವರ ಮೇಲೂ ಅಪಾದನೆಗಳೂ ಇವೆ.

ಶ್ರೀ ಡಿ. ದೇವರಾಜ ಅರಸ್.—ಆ ಅಪಾದನೆಗಳು ಸಾಬೀತು ಆದರೆ ಅದರಲ್ಲಿ ಪ್ರೈಮಾಫೇಸಿ ಕೇಸು ಇದ್ದರೆ ಅವರು ಎಷ್ಟೇ ದೊಡ್ಡ ಅಫೀಸರಾಗಿರಲಿ, ಖಂಡಿತವಾಗಿಯೂ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

Sri H. S. SIDDAPPA.—Our apprehension is that the Vigilance Commission is keeping back some reports and is sending only some reports. Against whichever officer they want action to be taken, they send the reports concering him and against whichever officer they do not want action to be taken they will not send the reports.

ಶ್ರೀ ಡಿ. ದೇವರಾಜ ಅರಸ್,—ಆ ಬಗ್ಗೆ ನಮ್ಮಿಂದ ಸಾಧ್ಯವಿರುವುದನ್ನೆಲ್ಲಾ ಮಾಡುತ್ತೇವೆ. ಹಿಂದಿನವರನ್ನು ಉದಾಹರಣೆ ಮಾಡಿ ಯುವಕರನ್ನೂ ಮತ್ತು ಆದರ್ಶವಾದಿಗಳಾಗಿರುವವರನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ. ವಿಜಿಲೆನ್ಸ್ ಕಮಿಷನ್‌ನಲ್ಲಿ ಡಿಲೇ ಮಾಡುವಂಥಾದ್ದನ್ನು ಜಾಗ್ರತೆ ತರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಉದ್ದೇಶಪೂರ್ವಕವಾಗಿ ಯಾವುದನ್ನು ಹಿಂದೆ ಇಟ್ಟಿದ್ದಾರೆ ಅಂಥಾದ್ದನ್ನೂ ಜಾಗ್ರತೆ ತರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ ಕೆಲವು ಕೇಸುಗಳನ್ನು ತೆಗೆದುಕೊಳ್ಳುವುದು, ಕೆಲವು ಕೇಸುಗಳನ್ನು ಬಿಡುವುದು ಇವೆಲ್ಲಾ ಮಾಡಬಾರದು ಎಂದು ಅವರ ಗಮನಕ್ಕೆ ತಂದಿದ್ದೇವೆ.

ಆ ಮೇಲೆ ಐ.ಎ.ಎಸ್. ಆಫೀಸರ್ಸ್ ಬಗ್ಗೆ ಕೆಲವು ಸದಸ್ಯರು ಮಾತನಾಡುತ್ತಾ, ಅವರನ್ನು ತೆಗೆದು ಹಾಕಬೇಕು ಅಥವಾ ನೇಮಕ ಮಾಡಬಾರದು ಇತ್ಯಾದಿ ಕೆಲವು ಆಕ್ಷೇಪಣೆಗಳನ್ನು ಎತ್ತಿ ಮಾತನಾಡುತ್ತಿದ್ದರು. ಅದರ ಬಗ್ಗೆ ಒಂದು ಮಾತನ್ನು ಇಲ್ಲಿ ಹೇಳಬಯಸುತ್ತೇನೆ. ಈ ಐ.ಎ.ಎಸ್. ಆಫೀಸರ್ ಎಂದು ನಾವು ಏನು ಹೇಳುತ್ತೇವೆ, it has come to stay in this country. ಕೇಂದ್ರಸರ್ಕಾರದವರು ಇದರ ಬಗ್ಗೆ ಸಾಕಷ್ಟು ಯೋಚನೆಮಾಡಿ ಎಲ್ಲಾ ರಾಜ್ಯಗಳಲ್ಲಿಯೂ ರಾಜ್ಯಾಂಗದ ಪ್ರಕಾರ ಈ ಒಂದು ಆಫೀಸರ್ಸನ್ನು ನೇಮಕಮಾಡುತ್ತಿದ್ದಾರೆ. ಇದೇ ರೀತಿ ಇಂಡಿಯನ್ ಫಾರಿನ್ ಸರ್ವಿಸಸ್ ಇಂಡಿಯನ್ ಫಾರೆಸ್ಟ್ ಸರ್ವಿಸಸ್, ಇಂಡಿಯನ್ ಪೋಲೀಸ್ ಸರ್ವಿಸಸ್ ಎಂದು ಮಾಡಿದ್ದಾರೆ. ಆ ಮೇಲೆ ಎಜ್ಯುಕೇಶನ್, ಅಗ್ರಿಕಲ್ಚರ್ ಇವುಗಳಿಗೂ ಬಡಾಯಿಸಬೇಕು

ಎನ್ನುತಕ್ಕಂಥ ಅಭಿಪ್ರಾಯ ಕೇಂದ್ರಸರ್ಕಾರದಲ್ಲಿ ಇದೆ. ನನಗೆ ಒಂದು ವಿಚಾರ ಜ್ಞಾಪಕ ಇದೆ. ಹಿಂದೆ ಒಂದು ಸಾರಿ ಕೆ.ಸಿ. ರೆಡ್ಡಿಯವರ ಕಾಲದಲ್ಲಿಯೋ ಅಥವಾ ಹನುಮಂತಯ್ಯನವರ ಕಾಲದಲ್ಲಿಯೋ ಈ ಐಎಎಸ್ ಬೇಡ ಎಂದು ಹೇಳುತ್ತಿದ್ದರು. ನಿಮಗೆ ಬೇಡವೆಂದರೆ ಬೇಡ, ಬಾಕಿ ರಾಜ್ಯಗಳು ಇಟ್ಟುಕೊಳ್ಳುತ್ತಾರೆಂದು ಹೇಳಿದಾಗ, ಇಲ್ಲ ಇಲ್ಲ, ನಾವು ಸಹ ನಮ್ಮ ರಾಜ್ಯದವರಿಗೆ ಸಿಗುವ ಚಾನ್ಸ್ ಕಳಕೊಳ್ಳುತ್ತೇವೆಂದು ತಿಳಿದು, ಬೇಕೆಂದು ಹೇಳಿದರು. ಇವತ್ತು ಮಂತ್ರಿ ಕಾನೂನು ಬಿಟ್ಟು ಹೋಗುವುದಾದರೆ ಅಧಿಕಾರಿಯಾಗಿದ್ದವನನ್ನು ಕೇಳಬಾರದು. ಯಾವ ಅಧಿಕಾರಿಯಾಗಲಿ ಅಥವಾ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟಾಗಲಿ ಕಾನೂನು ರೀತಿಯಲ್ಲಿ ಯಾವುದಾದರೂ ಕೆಲಸ ತಪ್ಪು ಎಂದು ಇರುವುದಾದರೆ ಅದನ್ನು ಹೇಳುವ ಫ್ರೀಡಂ ಅವನಿಗೆ ಇರಲೇಬೇಕು. ಆತನ ಕರ್ತವ್ಯ ಆತ ಮಾಡಬೇಕಾಗುತ್ತದೆ. ಮಂತ್ರಿಯಾದವನು ಕಾನೂನು ಬಿಟ್ಟು ಅಥವಾ ಕಾನೂನು ಬದಲಾವಣೆ ಮಾಡಿ ಮಾಡುವುದಾದರೆ, ಅದು ಮಂತ್ರಿಯ ಮೇಲಿನ ಜವಾಬ್ದಾರಿಯಲ್ಲದೆ, ಅಧಿಕಾರಿಯದ್ದು ಅಲ್ಲ. ಒಂದು ವೇಳೆ ಐ. ಎ. ಎಸ್. ಅಧಿಕಾರಿ ಆ ರೀತಿ ಕಾನೂನಿಗೆ ಸರಿಯಾಗಿ ನಡದದ್ದೇ ಆದರೆ ಅವನಿಗೆ ಶಾಹಭಾಸ್‌ಗಿರಿ ಕೊಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಈ ಐ.ಎ.ಎಸ್. ಅಧಿಕಾರಿಗಳು ಇರಬಾರದು ಎಂದು ಹೇಳುವುದಿಲ್ಲ. ನೀವು ಅವರು ತಪ್ಪು ಮಾಡಿದ್ದಕ್ಕೆ ಏನಾದರೂ ಅವರ ಮೇಲೆ ಕ್ರಮ ತೆಗೆದುಕೊಂಡರೆ ಅವರು ಸ್ವಾಭಾವಿಕವಾಗಿ ಉದಾಸೀನ ತೋರಿಸುತ್ತಾರೆ. ಹಾಗೆ ಮಾಡುತ್ತಾರೆಂದು ನಾವು ಹೇಳುತ್ತಿರುವುದು.

ಶ್ರೀ ಡಿ. ದೇವರಾಜ ಅರಸ್.—ಸರ್ಕಾರಕ್ಕೆ ಅವರ ಮೇಲೆ ಡಿಸಿಪ್ಲಿನರಿ ಕ್ರಮ ತೆಗೆದುಕೊಳ್ಳುವ ಪೂರ್ಣ ಅಧಿಕಾರ ಇದೆ. I can suspend an I.A.S. Officer if I find fault with him.

Sri C. M. ARUMUGAM.—As a test case you must suspend somebody and see whether you have got such power.

Sri D. DEVARAJ URS.—It is not fair. I distinctly remember that we have that power. I will again verify. If we do not have I will tell you again.

ಇನ್ನು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಕೆಲವು ವಿಚಾರಗಳನ್ನು ಹೇಳಿದರು. ನನಗಂತೂ ಅವರ ಮೇಲೆ ತುಂಬಾ ಗೌರವ ಇದೆ. The Opposition party is a part of this democratic system. I must honour him here and listen to his words respectfully. I have listened to his criticisms. ಅವರು ಇಲ್ಲಿ ಇದ್ದರೆ ಚೆನ್ನಾಗಿತ್ತು. ಅವರು ಈ ಐ.ಎ.ಎಸ್. ಅಧಿಕಾರಿಗಳಲ್ಲಿ ಒಕ್ಕಲಿಗರು, ಲಿಂಗಾಯಿತರು ಬಹಳ ಕಡಿಮೆ ಇದ್ದಾರೆಂದು ಹೇಳಿದರು. ಇವತ್ತು ಐ.ಎ.ಎಸ್. ಅಧಿಕಾರಿಗಳನ್ನು ನೇಮಕ ಮಾಡುವುದಕ್ಕೆ ಒಂದು ಕ್ರಮ ಇದೆ. ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಶನಿನವರು ಪಬ್ಲಿಕ್ ಪರೀಕ್ಷೆ ಮಾಡಿ ಈ ರೀತಿ ಸೆಲೆಕ್ಟ್ ಮಾಡುತ್ತಾರೆ. The Examination system is there. Whoever comes out of the examination, he is selected. We are not responsib e for it.

ಇನ್ನೊಂದು ಸಿಸ್ಟಂ ನಮ್ಮಲ್ಲಿರುವ ಮೈಸೂರು ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಎಂಬುದು. ಇದರ ಪ್ರಕಾರ ಪ್ರೊಮೋಶನ್, ಸೀನಿಯಾರಿಟಿ ಮತ್ತು ಎಬಿಲಿಟಿಯ ಮೇಲೆ ಕೊಟ್ಟುಕೊಂಡು ಬಂದಿದ್ದಾರೆ. ಇನ್ನೊಂದು ಸ್ಪೆಷಲ್ ಸೆಲೆಕ್ಷನ್ ಎಂದು ಮಾಡುತ್ತಾರೆ. ಸ್ಟೇಟ್ ಸರ್ವಿಸಸ್‌ಗೆ ಸೇರದೆ ಇರತಕ್ಕಂತಹ ಒಂದು ವರ್ಗ ಇಟ್ಟುಕೊಂಡಿದ್ದಾರೆ. ಮತ್ತೊಂದು ಎಮರ್ಜೆನ್ಸಿ ರಿಕ್ರುಟ್‌ಮೆಂಟ್ ಎನ್ನುತಕ್ಕಂತಹ ವರ್ಗದವರೂ ಇದ್ದಾರೆ. ಹೀಗೆ ಕೆಲವು ಹುದ್ದೆಗಳಿಗೆ ಯು.ಪಿ.ಎಸ್.ಸಿ. ಯವರು ಡೈರೆಕ್ಟ್ ರಿಕ್ರುಟ್‌ಮೆಂಟ್ ಮಾಡುತ್ತಿದ್ದಾರೆ. ನಮ್ಮಲ್ಲಿ ನಾವು ಪ್ರೊಮೋ[illegible] ಕೊಟ್ಟು ಸೆಲೆಕ್ಟ್ ಮಾಡತಕ್ಕಂತದ್ದರಲ್ಲಿ ಒಂದು ಜಾತಿಯವರು ಜಾಸ್ತಿ ಇದ್ದಾರೆ, ಇನ್[illegible]ಜಾತಿಯವರು ಕಮ್ಮಿ ಇದ್ದಾರೆಂದು ಹೇಳುತ್ತಿದ್ದಾರೆ. ಒಂದು ಕಡೆ ಆ ಭಾವನೆ ಇರಬ[illegible] ಹೇಳುತ್ತಾರೆ; ಇನ್ನೊಂದು ಕಡೆ ಅದನ್ನು ಕೊಡಿ ಎಂದು ಹೇಳುತ್ತಿರುತ್ತಾರೆ. ಈಗ ಒಕ್ಕಲಿಗರ ಪೈಕಿ 5 ಜನರು ಐ.ಎ.ಎಸ್. ನಲ್ಲಿದ್ದಾರೆ. ಲಿಂಗಾಯಿತರ ಪೈಕಿ 9 ಜನರು ಇದ್ದಾರೆ. ಮತ್ತು ಕಾಂಪಿಟಿಟಿವ್ ಎಗ್ಸಾಮಿನೇಶನಿನಲ್ಲಿ 2 ಜನ ಲಿಂಗಾಯಿತರು ಬಂದಿದ್ದಾರೆ ಮತ್ತು ಸ್ಟೇಟ್ ಸರ್ವಿಸಸ್‌ನಲ್ಲಿ 7 ಜನ ಲಿಂಗಾಯಿತರು ಇದ್ದಾರೆ. ಅದೇ ರೀತಿ ಕಾಂಪಿಟಿಟಿವ್ ಎಗ್ಸಾಮಿನೇಶನಿನಲ್ಲಿ ಬೇರೆ ಬೇರೆ ಜಾತಿ

(SRI D. DEVARAJ URS)

ಯವರು ಇದ್ದಾರೆ. ಯಾವ ಜಾತಿಯವರಿಗೂ ಈ ಪರೀಕ್ಷೆಯನ್ನು ಪಾಸ್ ಮಾಡಿ ಬರಬಹುದು; ಅದಕ್ಕೆ ಯಾರ ಅಭ್ಯಂತರವೂ ಇಲ್ಲ. I remember even scheduled caste people have come up in the I.A.S. examination. Last time one Muslim from our State appeared for the examination, but he did not succeed and again he appeared for Indian Forest Services Examination and he got through. Another boy appeared for I.P.S. and he got through. After certain stage let us not go on mixing up from top to bottom on communal lines.

Sri C. M. ARUMUGAM.—It is said that from cradle to graveyard there is casteism. There is communalism right from the appointment to the primary school upto college level, from peon level to I.A.S. level. So, let us know other communities. What is the total number of I.A.S. officers and the number belonging to each community.

Sri D. DEVARAJ URS.—I will give that figure later on. I have no objection.

1-30 P.M.

Sri C. M. ARUMUGAM.—Out of 200 I.A.S. Officers only about five Vokkaligas and 9 Lingayaths are there. It is a great injustice done to the majority community. In the name of socialism these posts cannot be given to one particular section.

Sri D. DEVARAJ URS.—We have to see among these how many were promoted and how many were recruited directly. Further in an examination every citizen is free to appear and get through. Neither myself nor you could prevent it. Let us not try to bottle-up intelligence of anybody.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ವರ್ಗದವರಲ್ಲಿಯೂ ಬಹಳ ಜಾಣರು ಇದ್ದಾರೆ. ಅವರಿಗೆ ಇಂತಹ ಅವಕಾಶ ಇರಬೇಕು. ಅವರನ್ನು ಕಡಿಮೆಮಾಡುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ನಾವು ಉದ್ದೇಶಪೂರ್ವಕವಾಗಿ ಯಾರಿಗೋ ಕಡಿಮೆಮಾಡಿದ್ದೇವೆಂದು ಹೇಳಿದ್ದು ನನಗೆ ಕಂಡಿಲ್ಲ. ಇನ್ನು ಪೋಲೀಸ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಕೆಲವು ಟೀಕೆಗಳು ಬಂದಿವೆ.

ಶ್ರೀ ಎಸ್. ಬಂಗಾರಪ್ಪ.—ಗೆಜೆಟೆಡ್ ಆಫೀಸರ್ಸ್ ಮತ್ತು ನಾನ್ ಗೆಜೆಟೆಡ್ ಆಫೀಸರ್ಸ್ ಬಗ್ಗೆ ಸಂಬಳಸಾರಿಗೆಗಳಲ್ಲಿ ವ್ಯತ್ಯಾಸ ತೆಗೆದುಹಾಕಬೇಕು. ಆ ವಿಷಯದಲ್ಲಿ ತಮ್ಮ ಒಂದು ಅಭಿಪ್ರಾಯ ವೇನು ?

ಶ್ರೀ ಡಿ. ದೇವರಾಜ ಅರಸ್.—ಸದ್ಯಕ್ಕೆ ಅದನ್ನು ತೆಗೆದುಹಾಗುವುದು ಕಂಡುಬಂದಿಲ್ಲ. ಇದರ ಬಗ್ಗೆ ಮದ್ರಾಸಿನಲ್ಲಿ ಎಕ್ಸ್‌ಪೆರಿಮೆಂಟ್ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ನಾನು ಈಗಾಗಲೇ ಅದನ್ನು ಒಂದುಸಾರಿ ಎಗ್ಝಾಮಿನ್ ಮಾಡಿದ್ದೇನೆ. ಇದರಿಂದ ಇದುವರೆಗೂ ಯಾರಿಗೂ ಅನುಕೂಲ ಕಂಡುಬಂದಹಾಗೆ ಕಾಣಲಿಲ್ಲ. ಅವರ ಒಂದು ಈ ಎಕ್ಸ್‌ಪೆರಿಮೆಂಟಿನಿಂದ ಏನಾಗುತ್ತದೋ ಎಂಬುದನ್ನು ನಾವು ಕಾದು ನೋಡೋಣ.

ಇನ್ನು ಪೋಲೀಸ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಮಾತನಾಡುವುದಾದರೆ, ಈಗಿನ ಸನ್ನಿವೇಶಕ್ಕೆ ಈಗಿನ ಪೋಲೀಸ್ ಆಡಳಿತ ಹೊಂದಿಕೊಳ್ಳುವುದಿಲ್ಲ. ಅವರ ಬಗ್ಗೆ They are not sympathetic towards workers and farmers ಎನ್ನುವ ವಿಚಾರಗಳನ್ನು ಹೇಳಿದರು. ನಾನು ತಮಗೆ ಹೇಳುವುದೇನೆಂದರೆ, ಅವರ ಒಂದು ವಿಚಾರದಲ್ಲಿ ನಿನ್ನೆ ನಾನು ಅಭ್ಯಾಸಮಾಡಿದೆ. ಮಾನ್ಯ

ಶ್ರೀ ಕೃಷ್ಣನ್ ಅವರು ಹೇಳಿದಮೇಲೆ ಅವರ ಮಾತಿಗೆ ಒಪ್ಪಬೇಕೇ ಬೇಡವೇ ಎನ್ನುವುದನ್ನು ಯೋಚನೆ ಮಾಡಿದೆ. ಸುಮಾರು ಒಂದು ವರ್ಷದ ಹಿಂದೆ ಇವೇ ಪೋಲೀಸಿನವರ ಬಗ್ಗೆ ಕೆಲವು ಆರ್ಟಿಕಲ್‌ಗಳನ್ನು ಹಿಂದೂ ಪೇಪರ್‌ನಲ್ಲಿ ನೋಡಿದ್ದೆ. I refreshed my memory from these articles. I need not quote here. I just wanted to satisfy myself. ತಾವು ಹೇಳಿದ ಹಾಗೆ ನಿಮ್ಮ ಪ್ರೊಪೊಸಿಷನ್ನನ್ನು ಒಪ್ಪಿಕೊಂಡರೆ ನಾನು ಕಾನೂನನ್ನು ಒಂದು ಕಡೆ ಇಟ್ಟಹಾಗೆ ಆಗುತ್ತದೆ. ನನ್ನ ದೃಷ್ಟಿಯಲ್ಲಿ ಅಥವಾ ಅಡ್ಮಿನಿಸ್ಟ್ರೇಷನ್ ತಿಳಿದಂಥ ತಜ್ಞರ ದೃಷ್ಟಿಯಲ್ಲಿಯೂ ಕೂಡ, ಲಾ ಅಂಡ್ ಆರ್ಡರ್ ಮೇಂಟೇನ್ ಮಾಡತಕ್ಕ ಪೋಲೀಸ್ ಇಲಾಖೆ ಏನಿದೆ ಅದು ಮಾತ್ರ ಕಾನೂನಿನಂತೆಯೇ ನಡೆಯಬೇಕು. ಇದರಲ್ಲಿ ಏನಾದರೂ ವ್ಯತ್ಯಾಸವಾದರೆ ಅನಾಹುತಗಳು ಸಮಾಜದಲ್ಲಿ ಆಗುತ್ತವೆ. ಇದರಲ್ಲಿ ವಿಶೇಷವಾಗಿ ನ್ಯೂನತೆಗಳು ಇವೆ, ತೊಂದರೆಗಳು ಇವೆ. ಅವರು ಕಾನೂನು ಬಿಟ್ಟು ನಡೆಯುತ್ತಿದ್ದಾರೆ ಎನ್ನುವುದೇ ನಮ್ಮಲ್ಲಿ ಬಂದಿರತಕ್ಕ ಟೀಕೆಗಳು. ಅವರು ಕಾನೂನಿನಂತೆ ನಡೆಯುವುದಿಲ್ಲ, ಪೋಲೀಸ್ ಸ್ಟೇಷನ್ನಿನಲ್ಲಿ ಹೊಡೆಯುತ್ತಾರೆ, ಶಿಕ್ಷೆ ಮಾಡುತ್ತಾರೆಂದು ಹೇಳುತ್ತಾರೆ. ಅದು ಕಾನೂನಿನಲ್ಲಿ ಇಲ್ಲವೇ ? ಕಾನೂನಿನಲ್ಲಿ ಏನಿದೆಯೋ ಅದರಂತೆ ಮಾಡುತ್ತಾರೆ. ತಪ್ಪು ಕಂಡಕಡೆ ನಾವು ಅವರನ್ನು ಶಿಕ್ಷಿಸಬೇಕು. ಅದು ಕಾನೂನಿಗೆ ವಿರುದ್ಧವಾದುದಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ಕಂಡ ಹಾಗೆ ಅವರು ಹೊರಗೆ ಹೋಗಿ ಲಂಚ ತೆಗೆದುಕೊಳ್ಳುತ್ತಾರೆ.

SRI D. DEVARAJ URS.—There I agree. We should strictly tell them not to do this.

I am aware that there are such instances. There we must severely punish such erring officers. But at the same time if he is acting according ~~to~~ law, are we to interfere there also ? The Hon'ble Leader of Opposition Mr. Deve Gowda, raised a hue and cry particularly about the incident that took place at Srirangapatna. Madam, I got this verified through a responsible officer. The officer has given me a report and the police have acted perfectly according to rules and regulations ; they have not defied the law and I am fully satisfied.

ನಾನು ಕಾನೂನನ್ನು ಧರ್ಮ ಎಂದು ನಮ್ಮ ಮಾತಿನಲ್ಲಿ ಹೇಳುತ್ತೇನೆ. ಸಂಸ್ಕೃತದಲ್ಲಿ ಇದಕ್ಕೆ ಒಂದು ಮಾತು ಹೇಳುತ್ತಾರೆ. ಅದೇನೆಂದರೆ, 'ಧರ್ಮೋ ರಕ್ಷತಿ ರಕ್ಷಿತಃ' ಎಂದು. ಇದರ ಅರ್ಥ ಯಾರು ಧರ್ಮವನ್ನು ಕಾಪಾಡುತ್ತಾರೋ, ಧರ್ಮ ಅವರನ್ನು ಕಾಪಾಡುತ್ತದೆ ಎಂದು. That means in other words if you honour or if you preserve the law, the law preserves you and protects you. ನಮ್ಮಲ್ಲಿ ಏನಾಗಿದೆ, ನಾವು ಯಾರೂ ಅದನ್ನು ಪ್ರಾಕ್ಟೀಸ್ ಮಾಡಬಾರದು, ಪ್ರಿಸರ್ವ್ ಮಾಡಬಾರದು, ಕಾನೂನಿನಂತೆ ನಾವು ನಡೆಯಬಾರದು, ಕಾನೂನು ನಮಗೆ ರಕ್ಷಣೆ ಕೊಡಬೇಕು. ಇದನ್ನು ಯಾರೂಮಾಡುವುದಕ್ಕಾಗುವುದಿಲ್ಲ. ಯಾರೇ ಪೋಲೀಸ್ ಅಡ್ಮಿನಿಸ್ಟ್ರೇಷನ್ ನಡೆಸಿದರೂ ಈ ಒಂದು ತತ್ವ ಹಿಂದಿನಿಂದ ನಡೆದುಕೊಂಡು ಬಂದಿದೆಯೆಂದು ಹೇಳಿಕೊಂಡು ಬಂದಿದ್ದಾರೆ. ಆದರೆ ಆ ತತ್ವದ ಪ್ರಕಾರ ಕಾನೂನಿನಂತೆ ನಾವು ನೋಡಿದರೆ ಕಾನೂನು ರಕ್ಷಣೆ ನಮಗೆ ಇರುತ್ತದೆ. ಏಕೆ ಇದರ ಬಗ್ಗೆ ಅಲ್ಲೋಲ ಕಲ್ಲೋಲವಾಗುತ್ತದೆಯೆಂದರೆ, ಅಕ್ಸಿಡೆಂಟ್ಸ್ ಬಹಳಜಾಸ್ತಿಯಾಗುತ್ತಿದೆ. ಅನೇಕ ಸಂದರ್ಭಗಳಲ್ಲಿ ಕಾರು ನಡೆಸುವ ಡ್ರೈವರ್ ಕಾನೂನಿನಂತೆ ನಡೆಯುವುದಕ್ಕಾಗುವುದಿಲ್ಲ. ಸಾಮಾನ್ಯವಾಗಿ ರಿಕ್ಷಾದಲ್ಲಿ ಸೈಕಲ್‌ನಲ್ಲಿ ಹೋಗುವವರು ಸರಿಯಾಗಿ ನೋಡಿಕೊಂಡು ಎಲ್ಲಿ ಹೋಗುತ್ತಾರೆ! ಪೋಲೀಸಿನವರು ಅವರಿಗೆ ನಿಂತುಕೊಳ್ಳಿ ಅಂದರೂ ಸಹ ನಿಂತುಕೊಳ್ಳುವುದಿಲ್ಲ. Some of you if you have gone in the car might have observed this. ನಿಮ್ಮ ಕಾರು ಬರುತ್ತಿದ್ದರೂ ಅದನ್ನು ನೋಡಿದರೂ ಹಾಗೆಯೇ ರಿಕ್ಷಾ ಬಿಟ್ಟುಕೊಂಡು ಹೋಗುತ್ತಾನೆ. He takes a pleasure in defying the law. That is the attitude, that is the temperment we have developed in our country. ಯಾವನಾದರೂ ಒಬ್ಬ ಕಾರಿನಲ್ಲಿ ಹೋಗುತ್ತಿದ್ದರೆ, ಇನ್ನೊಬ್ಬನಿಗೆ ಅವನು ದಾರಿ ಬಿಡುವುದಕ್ಕೆ ಇಷ್ಟವೇ ಇಲ್ಲವೆಂದು ಹೇಳುತ್ತಾರೆ. ಇದು ಏನು ಸಂಸ್ಕೃತಿಯೋ, ನಮ್ಮ ಹಿಂದಿನ ನಡೆವಳಿಕೆಯೋ, ಅಥವಾ ನಮ್ಮ ಬ್ರಿಟೀಷರ ಆಳ್ವಿಕೆಯೊಳಗೆ ಇದ್ದುದೋ ಅಥವಾ ನಮ್ಮ ದೇಶದ ಗಾಳಿ ಹವಾಮಾನವೋ ಗೊತ್ತಾಗಲಿಲ್ಲ.

(SRI D. DEVARAJ URS).

I read an article in American review once, as to how the geographical and environmental conditions have an impact on human culture and thinking. ಆದ್ದರಿಂದ ಈಗ ನಮ್ಮಲ್ಲಿ ಏನಾಗಿದೆಯೆಂದರೆ ಇದು ಅನೂಚಾನವಾಗಿ ಬಂದಿರತಕ್ಕದ್ದು ಆಗಿದೆ. ಕಾನೂನು ಬ್ರೇಕ್ ಮಾಡುವುದು ನಮಗೆ ಒಂದು ರೀತಿ ಸಂತೋಷವೆಂದು ಹೇಳುವವರೂ ಇದ್ದಾರೆ.

ಹಳ್ಳಿಯಲ್ಲೂ ನೋಡಿದ್ದೇನೆ. ನಮ್ಮ ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಖೂನಿಗಳೇನು ನಡೆಯುತ್ತಿವೆ ಅಲ್ಲಿಯ ಜನರ ಭಾವನೆಯಲ್ಲಿ ಅಂಥ ಖೂನಿಗಳನ್ನು ಮಾಡತಕ್ಕವನು ಒಬ್ಬ ಪಟಿಂಗ ಮತ್ತು ಅವನೇ ಧೀರ ಎಂದು ಭಾವಿಸುತ್ತಿದ್ದಾರೆಯೇ ವಿನಾ ಅದೊಂದು ಹೀನಾಯಕರವಾದ ಕೃತ್ಯ ಎಂದು ಭಾವಿಸುವುದೇ ಇಲ್ಲ. ಹೀಗೆ ಒಂದಾನೊಂದು ಕಾಲದಲ್ಲಿ ಈ ಖೂನಿಗಳನ್ನು ಮಾಡುವುದು ಮತ್ತು ಬಹಳ ಜನ ಹೆಂಡತಿಯರನ್ನು ಇಟ್ಟುಕೊಳ್ಳುವುದು ಎಂದರೆ, ಹೆಚ್ಚು ಜನ ಹೆಂಡತಿಯರನ್ನು ಇಟ್ಟುಕೊಂಡರೆ ಅವನೊಬ್ಬ ಧೀರ ಎಂದು ಭಾವಿಸುತ್ತಿದ್ದ ಒಂದು ಕಾಲವೂ ಇತ್ತು. ಇಂಥ ಒಂದು ಭಾವನೆ ಹೈದ್ರಾಬಾದ್ ಕರ್ಣಾಟಕದಲ್ಲಿ ಜಾಸ್ತಿ ಇದ್ದರೆ ನಮ್ಮ ಕರ್ಣಾಟಕ ದಲ್ಲಿ ಸ್ವಲ್ಪ ಕಡಿಮೆ ಇರಬಹುದು. ಅಷ್ಟೇ. ಆದರೆ ಅಂಥ ಭಾವನೆ ಇಲ್ಲ ಎಂದು ಹೇಳುವುದಕ್ಕಾಗು ವುದಿಲ್ಲ. ಇನ್ನೂ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿ ಜನರು ಹೇಳಿಕೊಳ್ಳುತ್ತಿರುವುದನ್ನು ತಾವೆಲ್ಲರೂ ಕೇಳಿರಬಹುದು—ನಾವೆಲ್ಲರೂ ಹಳ್ಳಿಯಿಂದಲೇ ಬಂದಿರತಕ್ಕವರು, ಕಾನೂನನ್ನು ಉಲ್ಲಂಘನೆ ಮಾಡಿ ನಡೆಯುವುದೂ ಕೂಡ ಒಂದು ಧೀರತ್ವ ಎಂದು ತಿಳಿದುಕೊಂಡಿದ್ದಾರೆ. ಹೀಗೆ ಜನರು ಕಾನೂನನ್ನು ಮುರಿದು ಅದು ಸರಿಯಲ್ಲ—ಅವರು ಸರಿಯಾಗಿಲ್ಲ ಎಂದರೆ ಅದು ಸರಿಯಾದುದಲ್ಲ. ಆ ವಾದವನ್ನು ನಾನು ಒಪ್ಪುವುದಿಲ್ಲ. ಪೋಲೀಸಿನವರು ಇರತಕ್ಕ ಇಂಡಿಯನ್ ಕ್ರಿಮಿನಲ್ ಕೋಡ್, ಇಂಡಿಯನ್ ಪೀನಲ್ ಕೋಡು ಅವುಗಳೇನಿವೆ ಅವುಗಳಿಗೆ ಅವರು ವ್ಯತಿರಿಕ್ತವಾಗಿ ನಡೆದುಕೊಂಡರೆ ಅವರನ್ನು ಶಿಕ್ಷಿಸೋಣ. ಅವರು ಮಾಡಿದ್ದು ತಪ್ಪು ಅಂತ ಹೇಳೋಣ.

ಶ್ರೀ ವಿ. ಎನ್. ಪಾಟೀಲ್.—ಈಗತಾನೆ ಮಾನ್ಯ ಮಂತ್ರಿಗಳು ನಮ್ಮಲ್ಲಿ ಏಕೆ ಈ ಲಾ ಆಫ್‌ದಿ ಜಂಗಲ್ ಬಂದಿತು ಎಂಬುದಕ್ಕೆ ಕಾರಣಗಳನ್ನು ಹೇಳುತ್ತಾ ಇದೇನು ಸಮಾಜದ ತಪ್ಪೋ ಅಥವಾ ರಿಲಿಜನ್ನಿನ ದೋಷವೋ ಕಾಣೆ ಎಂದು ಹೇಳುತ್ತಿದ್ದರು. ಅದಕ್ಕೆ ನಾನು ಹೇಳುತ್ತೇನೆ ಹಿಂದೆ ಇಲ್ಲಿ ಬ್ರಿಟಿಷರಿದ್ದ ಕಾಲಕ್ಕೆ ನಾವು ಅವರ ಸ್ಲೇವ್ಸ್ ಆಗಿದ್ದೆವು. ಆದ್ದರಿಂದ ಅವರನ್ನು ಇಂಡಿಯಾ ದೇಶ ದಿಂದ ಓಡಿಸಬೇಕೆಂದು, ಧಣಿಯಮೇಲೆ ಬೀಳತಕ್ಕ ಒಂದು ಮನೋಭಾವವನ್ನು ಆ ಸ್ವಾತಂತ್ರ್ಯ ಚಳವಳಿಯಲ್ಲಿ ತಂದು ಬಿತ್ತಿದರು. ಅದರಿಂದ ಸಮಾಜದಲ್ಲಿ ಈ ದಿವಸ ಇಷ್ಟು ಅವ್ಯವಸ್ಥೆಯುಂಟಾಗಿದೆ. ಇನ್ನು ಎರಡನೇ ಕಾರಣ ಕ್ಲಾಸ್‌ಲೆಸ್ ಸೊಸೈಟಿಯನ್ನು ತರಬೇಕೆಂಬ ಉದ್ದೇಶದಿಂದ ಸಮ ಜದಲ್ಲಿ ಯಾರು ಈ ದಿವಸ ದೊಡ್ಡದೊಡ್ಡ ಶ್ರೀಮಂತರಿದ್ದಾರೆ ದೊಡ್ಡ ದೊಡ್ಡ ಜಮೀನ್‌ದಾರರು ಇದ್ದಾರೆ ಯಾರು ನನ್ನಸಮಾನ ಇಲ್ಲ ಅಂತ ಮೀಸೆ ಮೇಲೆ ಕೈ ಹಾಕುತ್ತಿದ್ದಾರೆ ಇವರನ್ನು ಸರಿಪಡಿಸುವುದಕ್ಕೆ ತಾವೇನು ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ಕಾರು ಸಿಕ್ಕಿದ ಮೇಲೆ ಎಲ್ಲರೂ ಹಾಗೇ ಹೇಳುತ್ತಾರೆ. ಕಾರು ಇಲ್ಲದಿದ್ದಾಗ ರಸ್ತೆಯಲ್ಲಿ ಇವರು ಹೇಗೆಬೇಕಾದರೂ ಹೋಗಬಹುದು. ಇದು ಜನರಲ್ಲಿ ಸಾಮಾನ್ಯ ವಾಗಿ ಎದ್ದು ಕಾಣತಕ್ಕ ಒಂದು ಮನೋಭಾವ. ಇನ್ನು ಶ್ರೀಮಾನ್ ಪಾಟೀಲರು ಹೇಳುತ್ತಾರೆ. ಅವರು ಈಗೇನು ಹೇಳಿದರೋ ಅದನ್ನೇ ಹಿಂದೆಯೂ ಅನೇಕಸಾರ್ತಿ ಹೇಳಿದ್ದಾರೆ. ಸಮಾಜದಲ್ಲಿ ಹಣವಂತರಿದ್ದಾರೆ, ದೊಡ್ಡ ಜಮೀನನ್ದಾರರಿದ್ದಾರೆ ನಿಜ. ಅವರನ್ನು ಹುಚ್ಚಾಪಟ್ಟೆ ಮಾಡುವುದಕ್ಕೆ ಹೊರಟಿದ್ದರಿಂದ ಅವರು ಈಗ ಹಿಂತಿರುಗಿ ನಿಂತಿದ್ದಾರೆ. ಅದರಂತೆಯೇ ಸಮಾಜದಲ್ಲಿ ನಡೆಯುತ್ತಿರುವ ಕಳ್ಳತನ ಅದು ಸರಿಯಾಗಿದೆ ನಡೆಯಲಿ ಅಂತ ತೀರ್ಮಾನ ಮಾಡಿ. ಇಲ್ಲವಾದರೆ ಎಲ್ಲಿಯವರಿಗೆ ಸಮಾಜ ದಲ್ಲಿ ಈ ಕಳ್ಳತನ ಕೆಟ್ಟದ್ದು ಎಂದು ಹೇಳುತ್ತೀರೋ ಅಲ್ಲಿಯವರೆಗೂ ಈ ಪೋಲೀಸ್‌ನವರು ಮತ್ತು ಪೋಲೀಸ್ ಸ್ಟೇಷನ್ನುಗಳು ಇರಲೇಬೇಕು. ಇರತಕ್ಕ ಕಾನೂನುಗಳನ್ನು ಪಾಲನೆ ಮಾಡದೆ ಯಾರದೋ ಜಮೀನನ್ನು ಯಾರೋ ಉಳಲಿ ಅದೆಲ್ಲಾ ಸರಿ ಎಂದು ಹೊಸದೊಂದು ಕಾನೂನು ಮಾಡಿ. ನಮಗೆ ಆ ಐ. ಪಿ. ಸಿ. ಮತ್ತು ಸಿ. ಆರ್. ಪಿ. ಸಿ. ಯಾವುದೂ ಬೇಡ, ನಮಗೆ ಆ ಲಾ ಆಫ್ ದಿ ಜಂಗಲ್ಲೇ ಇರಲಿ ಎಂದು ಹೇಳಿದರೆ ಆಗ ನಮಗೆ ಈ ಪೋಲೀಸ್ ಗೀಲೀಸ್ ಒಂದೂ ಬೇಕಾಗುವುದಿಲ್ಲ. ಆದರೆ ಎಲ್ಲಿಯತನಕ ನಮಗೆ ಕಾನೂನುಗಳು ಇರಬೇಕೆಂದು ಆಸೆ ಇರುತ್ತದೋ ಅಲ್ಲಿಯವರೆಗೂ ಅವುಗಳನ್ನು ಜಾರಿಗೆ ತರಲು ಪೋಲೀಸ್ ಇಲಾಖೆ ಇರಲೇಬೇಕಾಗುತ್ತದೆ. ಮೊನ್ನೆತಾನೆ ಕೇರಳದಲ್ಲಿ ಒಂದು ಇನ್‌ಸ್ಟೆನ್ಸ್ ನಡೆದಿದೆ. ಅಲ್ಲಿ ಪೋಲೀಸಿನವರು ಬೇಜವಾಬ್ದಾರಿಯಿಂದ ಒಂದು ಸ್ಕೂಲ್ ಪ್ರಿಮಿಸೆಸ

ನಲ್ಲ ನುಗ್ಗಿದರು ಎಂಬುದಾಗಿ. ಆ ವಿಚಾರದಲ್ಲಿ ಕೋರ್ಟಿಗೆ ಹೋದಾಗ ಅಲ್ಲಿ ಕೋರ್ಟಿನವರು ಪೋಲೀಸರು ಮಾಡಿದ್ದು 'ಸರಿ' ಎಂಬುದಾಗಿ ತೀರ್ಮಾನ ಕೊಟ್ಟಿದ್ದಾರೆ. ಇಷ್ಟು ವಿಚಾರಕ್ಕೆ ಅಲ್ಲಿ ಒಂದು ದೊಡ್ಡ ಗಲಭೆಯೇ ಎದ್ದಿತ್ತು. ಹೀಗೆ ದೇಶದ ಆಸ್ತಿಪಾಸ್ತಿಗಳಿಗೆ ನಷ್ಟ ಉಂಟಾಗತಕ್ಕ ಸಂದರ್ಭದಲ್ಲಿ ಪೋಲೀಸಿನವರು ಸುಮ್ಮನಿರತಕ್ಕದ್ದು ಸರಿಯಲ್ಲ; ಅದಕ್ಕಾಗಿ ನಾವು ಎಂಟರ್ ಮಾಡಿದೆವು ಎಂದು ಪೋಲೀಸಿನವರು ಹೇಳಿದ್ದಾರೆ. ಅವರು ಮಾಡಿದ್ದು ಸರಿ ಎಂದು ಕೋರ್ಟ್ ಹೇಳಿದೆ. ಇನ್ನು ಕೆಲವರು ಪೋಲೀಸಿನವರು ಅಕ್ರಮವಾಗಿ ನಡೆದಿಲ್ಲವೇ ಎಂದು ಕೇಳಬಹುದು. ಅದಕ್ಕೂ ನಾನು ಇಲ್ಲ ಎಂದು ಹೇಳುವುದಿಲ್ಲ. ಅಲ್ಲೊಂದು ಇಲ್ಲೊಂದು ನಡೆದಿರಬಹುದು. ಅಡ್ಡಹಾದಿ ಹಿಡಿದು ಕೆಲವು ಮಂತ್ರಿಗಳೂ ಪೋಲೀಸಿನವರಿಗೆ ಹೇಳಿರಬಹುದು. ಹಾಗೆ ಹೇಳಿದ್ದರೆ ಮಂತ್ರಿಗಳದೂ ತಪ್ಪೇ ಅದಕ್ಕೆ ಅನುಸಾರವಾಗಿ ನಡೆದದ್ದು ಪೋಲೀಸಿನವರದೂ ತಪ್ಪೇ. ಇದರಲ್ಲಿ ಇಬ್ಬರೂ ತಪ್ಪಿತಸ್ಥರೇ.

ಇನ್ನು ಕೆಲವರು ಪೋಲೀಸರ ಸಂಬಳ ಸಾರಿಗೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾನೂ ಒಪ್ಪುತ್ತೇನೆ. ಅವರ ಸ್ಥಿತಿಗತಿಗಳು ಇನ್ನೂ ಉತ್ತಮವಾಗಬೇಕು. ಆದಾದರೆ ಅವರೂ ಕೂಡ ಈ ಲಾ ಅಂಡ್ ಆರ್ಡರನ್ನು ಸ್ವಲ್ಪ ಉತ್ತಮ ಸ್ಥಿತಿಯಲ್ಲಿ ಇಡುವುದಕ್ಕೆ ಅನುಕೂಲವಾಗುತ್ತದೆ. ಆದರೆ ಇದನ್ನು ಹಂತ ಹಂತವಾಗಿ ಮಾಡಬೇಕಾಗಿದೆ. ಹಾಲಿ ಇರತಕ್ಕ ಪೋಲೀಸ್ ಶಿಬ್ಬಂದಿಯ ಶೇಕಡ 60–70 ರಷ್ಟು ಮಂದಿಗೆ ವಾಸದ ವಸತಿಯನ್ನು ಕಲ್ಪಿಸಲಾಗಿದೆ. ಸರ್ಕಾರದವರು ಅವರಿಗೆ ಕ್ವಾರ್ಟರ್ಸ್‌ನ್ನು ಕಟ್ಟಿಸಿ ಕೊಡುತ್ತಿದ್ದಾರೆ. ಈಗ ಕೊನೇ ದರ್ಜೆಯ ಪೋಲೀಸ್ ಅಧಿಕಾರಿಗೆ ತಿಂಗಳಿಗೆ ಒಟ್ಟು 180 ರೂಪಾಯಿಗಳ ತಲುಬು ದೊರೆಯುತ್ತಿದೆ. ಇದೂ ಕೂಡ ಸಾಲದೆಂತಲೇ ಹೇಳಬಹುದು. ನಾವು ರಾಜ್ಯಾದ್ಯಂತವೂ ಇರತಕ್ಕ ಎಲ್ಲಾ ಪೋಲೀಸರಿಗೂ ಸಂಬಳವನ್ನು ಹೆಚ್ಚಿಸ ದಿದ್ದರೂ ಚಿಂತೆಯಿಲ್ಲ ಈ ಮೆಟ್ರೋಪಾಲಿಟನ್ ಟೌನುಗಳಂಥ ದೊಡ್ಡ ನಗರಗಳಲ್ಲಿ ಅಂದರೆ ಬೆಂಗಳೂರಂಥ ದೊಡ್ಡ ನಗರಗಳಲ್ಲಿರತಕ್ಕ ಪೋಲೀಸ್ ಶಿಬ್ಬಂದಿಗೆ ಸ್ವಲ್ಪ ಹೆಚ್ಚು ಸಂಬಳವನ್ನು ಕೊಡುವುದಕ್ಕೆ ಪ್ರಯತ್ನ ಮಾಡೋಣ. ಅವರ ಸ್ಥಿತಿಯನ್ನು ಇನ್ನೂ ಸ್ವಲ್ಪ ಉತ್ತಮ ಪಡಿಸಬೇಕಾದ್ದು ಅವಶ್ಯಕ.

ಇನ್ನು ಇತ್ತೀಚೆಗೆ ಕಾನೂನು ಭಂಗ ನಡೆದು ಆ ಬಿಜಾಪುರದಲ್ಲಿ ಒಂದೇ ದಿನದಲ್ಲಿ 7 ಜನರನ್ನು ಖೂನಿ ಮಾಡಲಾಗಿದೆ. ಹಾಗೇ ಆ ಪಾಲಿಬೆಟ್ಟ—ಕೊಡಗಿನಲ್ಲಿ ಕೂಡ ಒಂದು ದೊಡ್ಡ ದೊಂಬಿ ನಡೆದಿದೆ. ಅಲ್ಲಿ ಅನೇಕರು ಮುಖವಾಡ ಹಾಕಿಕೊಂಡು ಅದನ್ನು ನಡೆಸಿದ್ದಾರೆ. ಆದರೆ ಇಂಥ ಘಟನೆಗಳೇನಿವೆ ಇವು ಇದ್ದಕಿದ್ದಹಾಗೆ ಏಕಾಏಕಿಯಾಗಿ ನಡೆಯತಕ್ಕವುಗಳಲ್ಲ. ಆದರೆ ಇಂಥ ಸಂದರ್ಭದಲ್ಲಿ ಪೋಲೀಸ್ ಅಧಿಕಾರಿಗಳು ಯಾವರೀತಿ ನಡೆದುಕೊಳ್ಳಬೇಕು ಎಂಬ ತಿಳುವಳಿಕೆಯನ್ನು ಕೊಟ್ಟಿದೆ, ಆದರೆ ಈ ಘಟನೆಗಳಿಗೆ ಏನೋ ಒಂದು ಹಿನ್ನೆಲೆ ಇದ್ದೇ ಇರುತ್ತದೆ. ದ್ವೇಷ ಅಥವಾ ಜಗಳದಲ್ಲಿ ಉಂಟಾಗುವ ಒಂದು ಉದ್ವೇಗ ಅಥವಾ ಏನೋ ಒಂದು ಜಿದ್ದಾಜಿದ್ದಿನ ಪ್ಲಾಟ್ ಇಂಥವುಗಳಿದ್ದರೇನೇ ಅವುಗಳ ಪರ್ಯವಸಾನ ಹೀಗೆ ಕೊನೆಗೊಳ್ಳುತ್ತದೆ. ನಾನು ಈ ಹಿಂದೆ ಆ ಕೊಡಗಿನಲ್ಲಿ ನಡೆದ ಘಟನೆಯನ್ನು ಬೇರೊಂದು ಸಂದರ್ಭದಲ್ಲಿ ವಿಚಾರವಾಗಿ ತಿಳಿಸಿರುತ್ತೇನೆ. ಇಂಥ ಸಂದರ್ಭಗಳು ನಡೆದಾಗ ಪೋಲೀಸಿನವರು ಏನು ಮಾಡುತ್ತಾರೆಂದರೆ ಘಟನೆ ಆದಕೂಡಲೆ ಮದ್ದುಕೊಟ್ಟಿದ್ದೇವೆಂದು ಸುಮ್ಮನಾಗುತ್ತಾರೆ. ಅದು ಸರಿಯಲ್ಲ. ಶರೀರದಲ್ಲಿ ಒಂದು ಕುರು ಆಗುವುದು. Communal riots, is something like a boil. One method is to treat it on the surface; it might subside, but the cause for boil coming up still remains inside the body. We must go at tbe root of it. We must examine his blood and treat his blood and other treatment should be given for the body to become healthy so that he does not get the boil. ರಕ್ತ ಕೆಟ್ಟಿರುವುದು ಅಥವಾ ಏನಾದರೂ ದೋಷ ಇರುವುದು. ಅದನ್ನು ಗಮನಿಸಿ ತಕ್ಕ ಚಿಕಿತ್ಸೆ ಮಾಡಬೇಕು. ರೂಟ್‌ಗೆ ಹೋಗಬೇಕು. ಅಧಿಕಾರಿಗಳು ಇಂಥ ಘಟನೆಯಾದಾಗ ಯಾರನ್ನಾದರೂ ಅರೆಸ್ಟು ಮಾಡಿ ಕೇಸನ್ನು ಹಾಕುವರು. ಕೂನಿಯಾದಾಗಲೂ ಹೀಗೆ ಮಾಡಬಹುದು. ಬಿಜಾಪುರ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಇದು ಹೆಚ್ಚಾಗಿ ನಡೆಯುವುದು. ಹಾಗೆ ನಡೆದಾಗ ಸರಿಯಾಗಿ ಪರಿಶೀಲಿಸ ಬೇಕು. ಕೂನಿ ವಗೈರೆ ಮಾಡುವಾಗ ಅದಕ್ಕೆ ಸಂಬಂಧಪಟ್ಟವರು ಕೆಲವರನ್ನು ಹೈರ್ ಮಾಡಿ ಅವರಿಗೆ 500 ಅಥವಾ ಸಾವಿರ ರೂಪಾಯಿಗಳನ್ನು ಕೊಟ್ಟು ತಮ್ಮ ಕೆಲಸ ಅವರಿಂದ ಮಾಡಿಸಿಕೊಳ್ಳುವರು, ಅವರೇ ಮಾಡುವುದಿಲ್ಲ. ಕೊಲೆ ಮಾಡಿದವರು ಜೈಲಿಗೆ ಹೋದರೆ ಜೈಲಿಗೆ ಹೋದವರಸಂಸಾರವನ್ನು ಕೊಲೆ ಮಾಡಿಸಿದವರು ನೋಡಿಕೊಳ್ಳುವರು. ಹೀಗೆ ಧೈರ್ಯ ಮಾಡಿ ಕೆಲಸಮಾಡುವರು. ಇದಕ್ಕೆ ಬ್ಯಾಕ್‌ಗ್ರೌಂಡ್ ನೋಡಬೇಕು. ಈಗ ಅದನ್ನು ನೋಡದೆ ಕೊಲೆ ಮಾಡದೆ ಇರುವವರನ್ನು ಹಿಡಿದುಕೊಂಡುಹೋಗುತ್ತಿದ್ದಾರೆ. ಜೈಲಿಗೆ ಶಿಕ್ಷೆಯಾಗಿ ಹೋದವರು ಜೈಲನಿಂದ ವಾಪಸು ಬಂದ

(ಶ್ರೀ ಡಿ. ದೇವರಾಜ್ ಅರಸ್)

ಮೇಲೆ ಮತ್ತೆ ಬೇರೆ ಕೊಲೆ ಮಾಡುವರು. ಹೀಗೆ ಕಮ್ಯೂನಲ್ ರಯಟ್ಸ್ ಮುಂತಾದ್ದು ನಡೆಯುವುವು. ಇದಕ್ಕೆ ಹಿನ್ನಲೆಯಿರುತ್ತದೆ. ಕೆಲವರು ದೊಡ್ಡ ಮನುಷ್ಯರು ಕೊಲೆ ಮುಂತಾದುವನ್ನು ಬೇರೆಯವರಿಂದ ಮಾಡಿಸಿ ಅವರು ಯಾವುದಕ್ಕೂ ಸಿಕ್ಕಿಹಾಕಿಕೊಳ್ಳುವುದಿಲ್ಲ. ಇದನ್ನು ಅನಲೈಜ್ ಮಾಡಿದರೆ ನಿಜವಾದ ಸಂಗತಿ ಬೆಳಕಿಗೆ ಬರುವುದು. ಅನುಕೂಲಸ್ತರು ಕೊಲೆ ಮುಂತಾದುವುಗಳಿಗೆ ಕಾರಣರಾದರೂ ಕೂಡ ಅವರಿಗೆ ತೊಂದರೆಯಾಗುವುದಿಲ್ಲ. ಲೂಟಿ ವಗೈರ ಯಾರು ಮಾಡಿಸುವರೋ ಅವರು ಪತ್ತೆಯಾಗುವುದಿಲ್ಲ, ಯಾರೋ ಇತರರು ಬೀಡಿ ಅಂಗಡಿಯವರೋ ಯಾರೋ ತೊಂದರೆಗೆ ಒಳಗಾಗುವರು ಬಡವರಿಗೆ ಶಿಕ್ಷೆಯಾಗುವುದು. ಆದುದರಿಂದ ಇವುಗಳಿಗೆ ಹಿನ್ನಲೆ ಏನಿದೆಯೆಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಈ ರೀತಿಯಾಗಿ ತಿಳಿದು ಘಟನೆಗಳನ್ನು ಹ್ಯಾಂಡ್ಲ್ ಮಾಡಿದರೆ ಅನುಕೂಲ, ಡಿಫರೆಂಟ್ ಅಪ್ರೋಚ್ ಇರಬೇಕು ಎಂದು ನಾವು ಹೇಳುತ್ತಿದ್ದೇವೆ. ಇದರಂತೆ ಈಗ ಕೆಲಸ ಮಾಡುವುದಕ್ಕೆ ಪ್ರಾರಂಭವಾಗಿದೆ. ಕೆಲವರು ಪ್ರಭಾವ ಬೀರುವರು. ಇದನ್ನೆಲ್ಲಾ ತಪ್ಪಿಸಿ ಸರಿಯಾದ ಕ್ರಮ ತೆಗೆದುಕೊಳ್ಳಬೇಕಾದರೆ ಇದಕ್ಕೆ ಎಲ್ಲರ ಸಹಕಾರ ಬೇಕು.

If you go to the root of the matter, you will come across people who are supposed to be honourable and respectable from outward appearance in the society but they would be the root cause for such troubles. Then I will have to lay my hands on such men. I am now itself telling it. I cannot but help. They will try to influence everyone of us. I want the co-operation of all of you in the interests of maintaining law and order and communal harmony, we must try to go into the root of the matter and handle those people firmly and then only we can avoid most of the conflicts.

Sri H. S. SIDDAPPA.—Do you assure us your cooperation in apprehending such persons? But they should not be apprehended on the basis of political affiliation or colour.

Sri D. DEVARAJ URS.—Madam Speaker, I may assure the Hon'ble Member that I would extend my cooperation in such cases. I request the Hon. Members to believe me. ಅವರು ಜ್ಞಾಪಕ ಮಾಡಿದ್ದು ಒಳ್ಳೆಯದಾಯಿತು. ಪೊಲಿಟಿಕಲ್ ಬಯಾಸ್ ಇರುವಾಗ ಯಾರು ಏನು ಹೇಳಿದರೂ ಅದಕ್ಕೆ ಬೆಲೆ ಕೊಡುವುದಿಲ್ಲ. ನಮಗೆ ಪೊಲಿಟಿಕಲ್ ಪಾರ್ಟಿಯಲ್ಲಿ ಅಥವಾ ರಾಜಕೀಯದಲ್ಲಿ ಕೆಲಸಮಾಡಿ ಅನುಭವವಿದೆ. ಹಿಂದೆ ಮಾಡಿರುವುದನ್ನು ನೋಡಿದ್ದೇನೆ. I give a solemn assurance on the floor of this House. ಹಿಂದೆ ಮಾಡಿದ್ದಕ್ಕೆ ಪರಿಣಾಮವೇನಾಗಿದೆಯೆಂಬುದು ಗೊತ್ತಿದೆ. ಜನರು ನಮ್ಮ ಮಾತನ್ನು ಕೇಳುವುದಿಲ್ಲ. ಸರಿಯಾದ ರೀತಿಯಲ್ಲಿ ನಡೆಯದಿದ್ದರೆ ಮುಂದೆ ಚುನಾವಣೆಗೆ ನಿಂತಾಗ ಸಾಕಷ್ಟು ಓಟು ಬಾರದೆ ಸೋತಿರುವ ಉದಾಹರಣೆ ಇದೆ. ಜನರು ಒಪ್ಪುವ ಮತ್ತು ನಾವು ಹೇಳುವ ತತ್ವಗಳು ಮತ್ತು ಕಾರ್ಯಕ್ರಮ ಏನಿವೆ ಅವುಗಳ ಆಧಾರದ ಮೇಲೆ ನಾವು ಮುಂದುವರೆಯಬೇಕು. You cannot fool people for all time, it is impossible. ದ್ವೇಷದಿಂದ ಇನ್ನೊಬ್ಬರನ್ನು ಕೆಳಕ್ಕೆ ಅದಮುವುದರಿಂದ, ಬೇರೆ ಪಕ್ಷಗಳಿಗೆ ವಿರುದ್ಧವಾಗಿ ನಡೆಯುವುದರಿಂದ ತಾತ್ಕಾಲಿಕವಾಗಿ ಸ್ವಲ್ಪ ಅನುಕೂಲವಾಗಬಹುದು ಆದರಿಂದ ಐಕ್ಯರಾಗಿ ಒಳ್ಳೆಯದಾಗುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಯಾರಾದರೂ ಹಿಂದೆ ನಿಂತು ಅಕೃತ್ಯಗಳಿಗೆ ಪ್ರೇರೇಪಣೆ ಮಾಡಿ ಕೃತಗಳನ್ನು ನಡೆಸಿದರೆ ಅಂಥ ಉದಾಹರಣೆಗಳನ್ನು ಗಮನಕ್ಕೆ ತಂದರೆ ಸೂಕ್ತ ಕ್ರಮ ಕೈಕೊಳ್ಳುವಿರಾ?

Sri D. DEVARAJ URS.—Definitely, Sir. ತೆಗೆದುಕೊಳ್ಳುತ್ತೇವೆ. ತಪ್ಪು ಮಾಡುವವರು ಯಾರೇ ಆಗಿರಲಿ, ತಪ್ಪಿಗೆ ತಕ್ಕ ಶಿಕ್ಷೆಯಾಗಲೇಬೇಕು. I would request the hon. members to bring such cases to my notice; I will look into them.

ಶ್ರೀ ಬಾಪುಗೌಡ ರಾಮಪ್ಪ.—ತಮ್ಮ ಸಹೋದ್ಯೋಗಿಗಳು ಏನಾದರೂ ತಪ್ಪು ಮಾಡಿದರೆ?

ಶ್ರೀ ಡಿ. ದೇವರಾಜ ಅರಸ್.—ತಪ್ಪನ್ನು ಯಾರು ಮಾಡಿದರೂ ಅದು ತಪ್ಪೇ, ಅದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಲೇಬೇಕು.

I do not believe in building my party or maintain my party on those lines. I have not done it previously. I will not do it now nor in the future.

ಶ್ರೀ ಎಚ್. ಎಸ್. ಸಿದ್ದಪ್ಪ.—ಹಿಂದೆ ತಪ್ಪುಮಾಡಿದ ಕೆಲವರು ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಂಡಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಮಾತ್ರಕ್ಕೆ ಪ್ರಭಾವ ಬೀರಲು ಅವಕಾಶ ಕೊಡುವುದಿಲ್ಲ.

ಶ್ರೀ ಪಿ. ಎಂ. ಬಂಗಿ—ಅಧಿಕಾರಿಗಳು ಅಕ್ರಮವಾಗಿ ವರ್ತಿಸಿದ್ದರೆ, ಕಾನೂನು ಪ್ರಕಾರ ನಡೆಯದೆ ಇದ್ದರೆ ಕ್ರಮ ತೆಗೆದುಕೊಳ್ಳುವಿರಾ ?

Sri D. DEVARAJ URS.—If there are individual cases, you can bring them to my notice.

ಶ್ರೀ ಎಸ್. ಬಂಗಾರಪ್ಪ.—ಒಂದು ಕ್ಲಾರಿಫಿಕೇಷನ್ ಕೇಳಬೇಕಾಗಿದೆ. ಈಗ ಪೋಲೀಸು ಅಧಿಕಾರಿಗಳನ್ನು ನಾವು ದೂರುತ್ತೇವೆ. ಆದರೆ ಪೋಲೀಸು ಕಾನ್‌ಸ್ಟೇಬಲ್ಲುಗಳ ವಿಚಾರದಲ್ಲಿ ಸ್ವಲ್ಪ ಕನಿಕರ ತೋರಿಸಬೇಕಾದ್ದು ಅವಶ್ಯಕ. ಅಂದರೆ ಅವರು ಲಂಚ ತಿನ್ನಬಹುದು ಎಂದು ಹೇಳುವುದಿಲ್ಲ. ಬೆಂಗಳೂರು ನಗರದಲ್ಲಿ ತಾವೂ ನಾವೂ ಕಾರಿನಲ್ಲಿ ಹೋಗುತ್ತೇವೆ, ಕೆಂಪೇಗೌಡ ರಸ್ತೆ, ಜಯಚಾಮರಾಜೇಂದ್ರ ರಸ್ತೆಗಳಿವೆ, ಆ ರಸ್ತೆಗಳಲ್ಲಿ ಮಧ್ಯದಲ್ಲಿ ಒಂದು ಲೈನು ಬಣ್ಣದಲ್ಲಿ ಹಾಕಿ ರಸ್ತೆಯಲ್ಲಿ ಎರಡು ಭಾಗ ಮಾಡಿ ಮಧ್ಯೆ ನಿಂತಿರುವ ಪೋಲೀಸು ಕಾನ್‌ಸ್ಟೇಬಲ್ಲಿಗೆ ರಕ್ಷಣೆ ಇಲ್ಲ, ತಲೆಯಮೇಲೆ ಹೇಟ, ಕಾಕಿ ಬಟ್ಟೆ ಮೈಮೇಲೆ ಇರುವುದು, ಅದನ್ನು ಬಿಟ್ಟು ಬೇರೆ ಏನೂ ಇಲ್ಲ, ಹಿಂದೆ ಲಾರಿಯನ್ನು ಕಾನ್‌ಸ್ಟೇಬಲ್ಲಿನ ಮೇಲೆ ಹೊಡೆದು ಅತ ಸತ್ತುಹೋದ. ಅವರಿಗೆ ರಕ್ಷಣೆ ಇಲ್ಲ.

ಶ್ರೀ ಡಿ ದೇವರಾಜ ಅರಸ್.—ಟ್ರಾಫಿಕ್ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲು ಒಂದು ಸಮಿತಿ ಮಾಡೋಣ ಎಂಬ ಅಭಿಪ್ರಾಯವಿದೆ. ಸಾರ್ವಜನಿಕ ಮುಖಂಡರು ಮತ್ತು ಶಾಸನ ಸಭೆಗಳ ಸದಸ್ಯರು ಅದರಲ್ಲಿದ್ದು ಸಲಹೆ ನೀಡಲು ಅವಕಾಶ ಮಾಡಬೇಕು. ಈಗ ಅಡ್ವೈಜರಿ ಕಮಿಟಿಯ ರೀತಿಯಲ್ಲಿ ಒಂದು ಕಮಿಟಿ ಇದೆ, ಅದರಲ್ಲಿ ಹೆಚ್ಚಾಗಿ ಅಧಿಕಾರಿಗಳೇ ಇದ್ದಾರೆ, ಅದು ಕಾರ್ಪೊರೇಷನ್ ಮತ್ತು ಡಿಸ್ಟ್ರಿಕ್ಟ್ ಲೆವಲ್ಲಿನಲ್ಲಿದೆ. ಆದರೆ ಖಾಸಗಿ ಸದಸ್ಯರು ಅದರಲ್ಲಿಲ್ಲ. ಆದುದರಿಂದ ಕೆಲವರು ನಾನ್ ಅಫಿಷಿಯಲ್ಸ್ ಇರುವ ಸಮಿತಿ ಮಾಡಿ ಪೋಲೀಸು ಆಡಳಿತದ ಬಗ್ಗೆ ಪರಿಶೀಲಿಸುವಂತೆ ಮಾಡಬೇಕೆಂಬ ಒಂದು ಉದ್ದೇಶವಿದೆ.

2–00 P.M.

ಶ್ರೀ ಟಿ. ಆರ್. ಶಾಮಣ್ಣ.—ಇನ್‌ಎಫಿಷಿಯನ್ಸಿ ಮತ್ತು ಕರ್‌ಪ್‌ಷನ್ ತಪ್ಪಿಸುವುದಕ್ಕೆ ಎಕಾನಮಿ ಅಂಡ್ ಎಫಿಷಿಯನ್ಸಿ ಬೇಸಿಸ್ ಮೇಲೆ ಸ್ಟ್ಯಾಫ್ ಮಟ್ಟವನ್ನು ತಿದ್ದುವುದಕ್ಕೆ ಒಂದು ಕಮಿಟಿ ಮಾಡಿ ಎಂದು ನಾನು ಒಂದು ಸಲಹೆ ಮಾಡಿದ್ದೆ.

ಶ್ರೀ ಡಿ. ದೇವರಾಜ ಅರಸ್.—ಈಗ ಇರುವ ಸಮಿತಿಗಳ ರಿಪೋರ್ಟುಗಳನ್ನು ಓದಿಕೊಂಡು ಅದನ್ನು ಇಂಪ್ಲಿಮೆಂಟ್ ಮಾಡೋಣ, ಸಮಿತಿ ಮೇಲೆ ಸಮಿತಿ ಮಾಡಿ ಏನೂ ಪ್ರಯೋಜನ ಇಲ್ಲ.

ಮತ್ತೆ ಪೋಲೀಸ್ ಬಾಬಿನಲ್ಲಿ ಕೆಲವು ಕೇಸುಗಳು ಇವೆ. ಖೂನಿ ಕೇಸುಗಳು 1969ನೇ ಇಸವಿಯಿಂದ ರಿಪೋರ್ಟೆಡ್ ಕೇಸಸ್ 739, 1970 ರಲ್ಲಿ 694, 1971ರಲ್ಲಿ 759, ಇವುಗಳ ಪೈಕಿ ಡಿಟೆಕ್ಟ್ ಆದದ್ದು 1969ರಲ್ಲಿ 501, 1970ರಲ್ಲಿ 418, 1971ರಲ್ಲಿ 539. ಪರ್ಸಂಟೇಜ್ ಆಫ್ ಡಿಟೆಕ್ಷನ್ 68 ಪರ್ಸೆಂಟ್ 69ರಲ್ಲಿ, 60 ಪರ್ಸೆಂಟ್ 70ರಲ್ಲಿ ಮತ್ತು 71 ಪರ್ಸೆಂಟ್ 1971ರಲ್ಲಿ. ಪರ್ಸನ್ಸ್ ಕನ್‌ವಿಕ್ಟೆಡ್ 1969ರಲ್ಲಿ 467, 1970ರಲ್ಲಿ 302, 1971ರಲ್ಲಿ 393. ಕಂಪ್ಯಾರಿಟೀವ್ ಫಿಗರ್ಸ್ ತೆಗೆದುಕೊಂಡಾಗ ಪೋಲೀಸ್ ಇಲಾಖೆ ಇನ್‌ಎಫಿಷಿಯಂಟು ಅಂತ ತಿಳಿದುಕೊಳ್ಳಬೇಕಾದ ಅಗತ್ಯ ಇಲ್ಲ. ಆದರೆ ಆ ಇಲಾಖೆಯಲ್ಲಿ ಕ್ಲೀನ್ ಆಗಿ, ಬಹಳ ಚೆನ್ನಾಗಿ ಕೆಲಸ ಕಾರ್ಯಗಳನ್ನು ಮಾಡುತ್ತಾ ಇದ್ದಾರೆ, ಆದ್ದರಿಂದ ಇಂಪ್ರೂವ್ ಮಾಡಬೇಕಾಗಿಲ್ಲ ಎಂದು ಏನೂ ನಾನು ಹೇಳುತ್ತಾ

(ಶ್ರೀ ಡಿ. ದೇವರಾಜ ಅರಸ್)

ಇಲ್ಲ. ಅಷ್ಟೇ ಅಲ್ಲದೆ ಯಾವುದೂ ಚೆನ್ನಾಗಿಲ್ಲ ಎಂದು ಹೇಳುವುದೂ ಬೇಡ. They are doing their best. There is scope for improvemeut also. I may assure the House that the efficiency will be improved. This is about the Police administration.

ಶ್ರೀ ಆರ್. ಎಸ್. ಪಾಟೀಲ್.—ತಮ್ಮ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ಬೆಳಗಾಂ ಜಿಲ್ಲೆ ಇಡೀ ಮೈಸೂರು ರಾಜ್ಯದಲ್ಲಿ ಹೆಚ್ಚು ಖೂನಿಗಳಾಗತಕ್ಕ ಜಿಲ್ಲೆ. ಅಲ್ಲಿ ಒಬ್ಬ ಸರ್ಕಲ್ ಇನ್‌ಸ್ಪೆಕ್ಟರು ನಾಲ್ಕು ಜನ ಪಿ.ಎಸ್.ಐ.ಗಳು ಇದ್ದಾರೆ. ಆ ಸರ್ಕಲ್ ಇನ್‌ಸ್ಪೆಕ್ಟರು ಒಂದು ಭಾಗದಲ್ಲಿ ಆದ ಮರ್ಡರ್ ಕೇಸನ್ನು ಇನ್‌ವೆಸ್ಟಿಗೇಷನ್ ಮಾಡುತ್ತಾ ಇರುವಾಗ ಮಧ್ಯೆ ಮತ್ತೊಂದು ಕಡೆ ಮರ್ಡರ್ ಆದಂತಹ ಸಂದರ್ಭದಲ್ಲಿ ಅತನು ಅಲ್ಲಿಗೆ ಬರುವುದಕ್ಕೆ ಸಾಧ್ಯವಾಗದೆ ಇನ್‌ವೆಸ್ಟಿಗೇಷನ್ ಪೂರ್ತಿ ಆಗದೇ ಇರುವುದಕ್ಕೆ ಅದೂ ಒಂದು ಕಾರಣ. ಅದ್ದರಿಂದ ಪಿ.ಎಸ್.ಐ.ಗೆ ಆ ಒಂದು ಅಧಿಕಾರ ಕೊಟ್ಟರೆ ಚೆನ್ನಾಗಿರುತ್ತದೆ.

Sri D. DEVARAJ URS.—We will try to decentralise if it is necessary.

ಒಟ್ಟಿನಲ್ಲಿ ಪೊಲೀಸ್‌ನವರ ಕೆಲಸ ತಾವು ತಿಳಿದುಕೊಳ್ಳುವಷ್ಟು ಅಸಮಾಧಾನಕರವಾಗಿದೆ ಎಂದು ಹೇಳುವುದಿಲ್ಲ. ಸಾಕಾದಷ್ಟು ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕ ಅಧಿಕಾರಿಗಳು ಇದ್ದಾರೆ. ಶ್ರೀಮಾನ್ ಅರ್ಜುನಗೌಡರವರು ಹೇಳಿದ ಹಾಗೆ ಸರ್ಟನ್ ಸೆಟ್ ಅಪ್ ಬದಲಾವಣೆ ಮಾಡಬೇಕು ಅಂತ ಸಲಹೆ ಇದೆ, ಅದನ್ನು ಗಮನದಲ್ಲಿಟ್ಟುಕೊಂಡು I am trying to do some changes here and there with a view to inject more efficiency in the administration.

ಒಟ್ಟಿನಲ್ಲಿ ಇನ್ನು ಕೆಲವು ಷೆಡ್ಯೂಲ್ ಕ್ಯಾಸ್ಟ್, ಷೆಡ್ಯೂಲ್ ಟ್ರೈಬ್ಸ್ ಬಗ್ಗೆ, ಅವರ ರೆಪ್ರಸೆಂಟೇಷನ್ ಬಗ್ಗೆ ಈಗ ಇರತಕ್ಕ ರೀತಿಯಲ್ಲಿ ಅವರಿಗೆ ರೆಪ್ರಸೆಂಟೇಷನ್ ಸಾಲದು ಅಥವಾ ಅವರಿಗೆ ನ್ಯಾಯವಾಗಿ ಸಂವಿಧಾನದ ಪ್ರಕಾರ ದೊರೆಯಬೇಕಾದಂತಹ ಸೌಲತ್ತುಗಳು ದೊರೆಯುತ್ತಿಲ್ಲ ಮತ್ತು ಅಧಿಕಾರಿಗಳನ್ನು ನೇಮಕಮಾಡುವಾಗ ಸಂವಿಧಾನವನ್ನು ಗಮನಕ್ಕೆ ತೆಗೆದುಕೊಳ್ಳದೆ ನಡೆದುಬಿಟ್ಟಿದ್ದಾರೆ ಆದ್ದರಿಂದ ಅವರಿಗೆ ಅನ್ಯಾಯವಾಗಿವೆ ಎಂಬುದನ್ನೂ ಕೂಡ ಗಮನದಲ್ಲಿಟ್ಟುಕೊಂಡಿದ್ದೇವೆ. ತಾವು ಹೇಳುವುದು ಸರಿ ಇದೆ. ಅದು ಕಾರಣಾಂತರದಿಂದ ಆಗಿವೆ. ಯಾರದೊ ತಪ್ಪು ಸಪ್ಪು ಮಾಡಿ ಈಗ ಪ್ರಯೋಜನವಿಲ್ಲ. ಆ ರೀತಿಯಾಗಿ ಸಂವಿಧಾನದಲ್ಲಿ ಅವರಿಗೆ ದೊರೆಯಬೇಕಾದಷ್ಟು ಸ್ಥಳಗಳು ಮತ್ತು ಅಧಿಕಾರ ದೊರೆಯದೇ ಇರತಕ್ಕದ್ದು ಸ್ಪಷ್ಟವಾಗಿ ಎದ್ದು ಕಾಣುತ್ತಾ ಇದೆ. ಆ ಅನ್ಯಾಯವನ್ನು ನಾವು ದೂರ ಮಾಡಿ ನ್ಯಾಯ ದೊರಕಿಸುವ ದೃಷ್ಟಿಯಿಂದ ಯಾವ ಕಾರ್ಯ ಮಾಡುವುದಕ್ಕೂ ನಮ್ಮ ಸರ್ಕಾರ ಹಿಂಜರಿಯುವುದಿಲ್ಲ. ನಾವು ಸರ್ವ ಪ್ರಯತ್ನವನ್ನೂ ಮಾಡಿ ಅವರಿಗೆ ಮುಂದಾದರೂ ಯಾವ ಅನ್ಯಾಯ ಆಗದ ಹಾಗೆ, ನ್ಯಾಯ ದೊರಕುವ ಹಾಗೆ ಮಾಡತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಇದೇ ರೀತಿ ಬ್ಯಾಕ್‌ವರ್ಡ್ ಕ್ಲಾಸ್ ವಿಷಯ. ಬ್ಯಾಕ್‌ವರ್ಡ್ ಅಂತ ಹೇಳುವುದು ಅರ್ಥಿಕ ಪರಿಸ್ಥಿತಿ ಕೆಟ್ಟದ್ದು ಆಗಿರತಕ್ಕದ್ದು, ಸಾಮಾಜಿಕವಾಗಿ ಹಿಂದುಳಿದು ಬಂದಿರುವುದು, ಒಂದೊಂದು ಸಣ್ಣಪುಟ್ಟ ಜನಾಂಗ, ಜನಾಂಗವಾಗಿಯೇ ಹಿಂದುಳಿದು ಬಂದಿದ್ದಾರೆ. ಅವರಿಗೆ ಅಸ್ತಿ ಇಲ್ಲ, ಸ್ಥಳ ಇಲ್ಲ, ಅನೇಕ ಜನರು ಇವತ್ತು ಮೊಲದ ಬೇಟೆ, ಹಂದಿ ಬೇಟೆಗೆ ಹೋಗಿ ಮೂರು ಮೂರು, ನಾಲ್ಕು ನಾಲ್ಕು ದಿವಸ ಎರಡೆರಡು ರೊಟ್ಟಿ ಹೆಗಲ ಮೇಲೆ ಹಾಕಿಕೊಂಡು ಹೋಗಿ ನಾಲ್ಕನೆ ದಿವಸ ಎರಡು ಮೊಲ ಹಿಡಿದುಕೊಂಡು ಬರುತ್ತಾರೆ. They spend 4 days without food. They will be immensely happy with on y two rabbits. How to improve their lot ? ಇಂಥಾದ್ದು ಇರುತ್ತದೆ. ಅವರಿಗೆ ಯಾವುದೂ ಕೆಲಸ ಇಲ್ಲ. ಇಂಥಾ ಜನ ಎಲ್ಲಾ ನಮ್ಮ ದೇಶದಲ್ಲಿ ಇದ್ದಾರೆ, ಅವರ ಎಜುಕೇಷನ್ ಇಂಪ್ರೂವ್ ಮಾಡಬೇಕು, ಆರ್ಥಿಕ ಸ್ಥಿತಿ ಇಂಪ್ರೂವ್ ಮಾಡಬೇಕು, ಅದೆಲ್ಲಾ ಮಾಡಬೇಕಾದರೆ ಅವರಿಗೆ ಹೆಚ್ಚು ಹೆಚ್ಚು ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಇದಕ್ಕೆಲ್ಲಾ ಹಿಂದೆ ಒಂದು ಪ್ರಯತ್ನ ಮಾಡಿದ್ದಾರೆ, ನಾಗನಗೌಡ ಕಮಿಟಿ ರಿಪೋರ್ಟ್ ಬಂತು. ಅದರ ಪ್ರಕಾರ ಕೆಲವು ಇಂಪ್ಲಿಮೆಂಟ್ ಮಾಡಿದರು, ಅದು ಹೈ ಕೋರ್ಟಿಗೆ ಹೋಯಿತು, ಕ್ವಾಷ್ ಆಯಿತು. ಮತ್ತೆ ಬದಲಾವಣೆ ಮಾಡಿದೆವು. ಹೀಗಲ್ಲಾ ಆಗಿದೆ. ಅಲ್ಲಿಂದ ಈಚೆಗೆ ಘಟನೆ ನಡೆದದ್ದು ಅಂದರೆ

ಸುಪ್ರೀಂ ಕೋರ್ಟ್‌ ಡಿಸಿಷನ್ ಬ್ಯಾಕ್‌ವರ್ಡ್ ಕ್ಲಾಸ್ ಕಂಡೀಷನ್ ಪ್ರಕಾರ ಜಾತಿಯನ್ನು ಆಧಾರವಾಗಿಟ್ಟುಕೊಂಡು ರಿಸರ್ವ್ ಮಾಡುವುದು ಸಾಧ್ಯ ಎಂದು ಡಿಸಿಷನ್ ಬಂದಿರುವುದರಿಂದ ಮತ್ತು ಆಂಧ್ರಪ್ರದೇಶದ ಸರ್ಕಾರದವರು ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಒಂದು ಸಮಿತಿ ನೇಮಕ ಮಾಡಿರುವುದರಿಂದ ಇದನ್ನೆಲ್ಲಾ ಕೇಳುತ್ತಾ ಇದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ.—1,200 ರೂಪಾಯಿ ಇನ್‌ಕಂ ಮೇಲೆ ಬರುವವರು ಬ್ಯಾಕ್‌ವರ್ಡ್ ಕ್ಲಾಸ್ ಅಲ್ಲ ಅಂತ ಅನ್ನುವುದಾದರೆ ಒಬ್ಬ ಜವಾನನಿಗೂ ಅದಕ್ಕಿಂತ ಹೆಚ್ಚು ಬರುತ್ತದೆ. ಇದರಿಂದ ಅಂತಹವರಿಗೆ ಯಾವ ನ್ಯಾಯ ದೊರಕುತ್ತದೆ ? ಎರಡನೆಯದಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ರೈತರ ಮಕ್ಕಳು ವರ್ಷದಲ್ಲಿ 6 ತಿಂಗಳು ಹೊಲದ ಕೆಲಸ ಮಾಡಿಕೊಂಡಿರುತ್ತಾರೆ. ಅವರೂ ಒಂದೇ ಮೂರು ಹೊತ್ತೂ ಪಾಠ ಹೇಳಿಕೊಂಡು ಕೆಲಸ ಮಾಡುವವರ ಮಕ್ಕಳೂ ಒಂದೇ, ಈ ರೀತಿ ನಿಗದಿ ಮಾಡುವುದರಲ್ಲಿ ಯಾವ ರೀತಿ ನ್ಯಾಯ ದೊರಕುತ್ತದೆ ?

Sri D. DEVARAJ URS.—I know the difficulty. That is way I say that the system adopted is not perfect under those circumstances. But we had no other option but to adopt this. In the altered circumstances and development we are rethinking about the whole issue. We want to have backward class Commission again. We are thinking to take action. The Government is taking decision shortly. We will get the recommendations from it and we will implement them in the best interest of the Scheduled Castes and Scheduled Tribes and the backward classes. While implementing, we will also keep in view what is legitimately given in the Constitution.

Sri B. B. SAYANAK.—Is it possible to spell out the composition of the Commission ?

Sri D. DEVARAJ URS.—Why do you expect it now ? I have not thought about it. I can assure you that the Commission will consist of only such men who have best interest in Scheduled Castes and Scheduled Tribes and backward classes.

ಮತ್ತೆ ಇನ್ನೊಂದು ಮುಖ್ಯವಾದ ಡಿಮ್ಯಾಂಡ್ ಮೇಜರ್ ಇರಿಗೇಷನ್‌ಗೆ ಸಂಬಂಧಪಟ್ಟದ್ದು. ಇದರಲ್ಲಿ ನಮ್ಮ ಬಿಜಾಪುರದ ಮಾನ್ಯಸದಸ್ಯರು ಇಲ್ಲಿ ಇಲ್ಲ, ಅದೇ ರೀತಿಯಾಗಿ ಇನ್ನೂ ಅನೇಕ ಸದಸ್ಯರು ಮಾತನಾಡಿದ್ದಾರೆ. ಅಪ್ಪರ್ ಕೃಷ್ಣಾ ಇದೆ, ಅದನ್ನು ಮಾಡಲೇ ಬೇಕು, ಅದಕ್ಕೆ ಹಣ ಕಡಿಮೆ ಇಟ್ಟಿದ್ದಾರೆ ವಗೈರೆ ಇದೆಲ್ಲಾ ಹೇಳಿದ್ದಾರೆ. ಒಟ್ಟಿನಲ್ಲಿ ಮಾನ್ಯ ಸದಸ್ಯರ ಅಭಿಪ್ರಾಯದಲ್ಲಿ ನಾವು ಹೆಚ್ಚು ಹಣವನ್ನು ಮೇಜರ್ ಇರ್ರಿಗೇಷನ್‌ಗಾಗಿ ಒದಗಿಸಬೇಕಾಗಿದೆ. ಅದನ್ನು ಎಲ್ಲರೂ ಒಪ್ಪುತ್ತಾರೆ. ಕೆಲವು ಪ್ರಾಜೆಕ್ಟ್‌ಗಳಿಗೆ ಹೆಚ್ಚು ಗಮನ ಕೊಟ್ಟು ಇನ್ನು ಕೆಲವು ಪ್ರಾಜೆಕ್ಟ್‌ಗಳಿಗೆ ಕಡಿಮೆ ಗಮನ ಕೊಡುತ್ತೀರಿ ಎಂದು ಹೇಳುವ ಮಾತು ಸರಿಯಲ್ಲ. ಈ ಮಾನ್ಯ ಸಭೆಗೆ ವಿನಂತಿಸುವುದು ಏನೆಂದರೆ ಕೃಷ್ಣಾ ವ್ಯಾಲಿ ಪ್ರಾಜೆಕ್ಟ್ ಆಗಲಿ, ಕಾವೇರಿ ನದಿಯಲ್ಲಿ ಇರತಕ್ಕ ಪ್ರಾಜೆಕ್ಟ್‌ಗಳಾಗಲಿ ಇವೆಲ್ಲಾ ನಮ್ಮ ರಾಜ್ಯದ್ದು. ಯಾವುದಾದರೂ ಪ್ರಾಜೆಕ್ಟ್‌ಗೆ ಹೆಚ್ಚಿಗೆ ಪ್ರಿಯಾರಿಟಿ ಕೊಡಬೇಕು ಎಂದು ಹೇಳುವುದು ಅದು ನಮ್ಮ ಕಡೆ ಇದೆ ಅಥವಾ ಇನ್ನೊಂದು ಕಡೆ ಇದೆ ಎನ್ನುವ ದೃಷ್ಟಿಯಿಂದ ಅಲ್ಲ. ಎಲ್ಲಾ ಭಾಗವೂ ಒಂದೇ ಕಾವೇರಿ ವ್ಯಾಲಿಯಲ್ಲಿ ಕೆಲವು ಘಟನೆಗಳು ನಡೆದು ಬಂದಿವೆ. 1924 ನೇ ಇಸವಿ ಅಗ್ರಿಮೆಂಟ್ ಪ್ರಕಾರ ಏನು ಇದೆ ಆ ಅಗ್ರಿಮೆಂಟ್ ರೀತ್ಯ ನೀರನ್ನು ಬೇಗ ಉಪಯೋಗ ಮಾಡಿಕೊಳ್ಳುವುದಕ್ಕೆ ಸರ್ವ ಪ್ರಯತ್ನ ಮಾಡಿದರೆ ರಾಜ್ಯದ ಹಿತದೃಷ್ಟಿಯಿಂದ ಯೋಗ್ಯವಾದುದು ಎನ್ನುವ ಕಾರಣದಿಂದ ನಾವು ಪ್ರಯತ್ನ ಮಾಡಬೇಕು ಎಂದು ಹೇಳುತ್ತಿದ್ದೇನೆ. ಹಿಂದಿನ ಸರ್ಕಾರ ಒಂದು ರೀತಿಯಿಂದ ಒಪ್ಪಿದ್ದಾರೆ. ಇದಕ್ಕೆ ಯಾರ ಅಭ್ಯಂತರವೂ ಇಲ್ಲ ಎಂದು ನನ್ನ ಭಾವನೆ. ಇದನ್ನು ಬೇಗ ಪೂರೈಸಬೇಕಾಗಿದೆ.

ಶ್ರೀ ಶರಣಪ್ಪ.—ಕಾವೇರಿ ವ್ಯಾಲಿ ಪ್ರಾಜೆಕ್ಟ್ ಮಾಡಬೇಡಿ, ಕೃಷ್ಣಾ ವ್ಯಾಲಿ ಪ್ರಾಜೆಕ್ಟ್ ಮಾಡಿ ಎಂದು ಹೇಳಲಿಲ್ಲ, ಎಲ್ಲವನ್ನೂ ಮಾಡಿರಿ.

ಶ್ರೀ ಡಿ. ದೇವರಾಜ್ ಅರಸ್.—ಹಣ ಇದ್ದಾಗ ಎಲ್ಲವನ್ನೂ ಮಾಡಬೇಕು ಎನ್ನುವ ಆಸೆ ಇದೆ. ಈಗ ಯಾವುದನ್ನು ಮಾಡಿಕೊಂಡು ಹೋಗಬೇಕು ಎನ್ನುವುದೇ ನಮ್ಮ ಮುಂದಿರುವ ಕಾರ್ಯ. $2\frac{1}{2}$ ಕೋಟಿ ರೂಪಾಯಿಯನ್ನು ಅಪ್ಪರ್ ಕೃಷ್ಣ ಪ್ರಾಜೆಕ್ಟಿಗೆ ಹಾಕಿದ್ದೇವೆ. ಕೆಲವು ಮಾನ್ಯ ಸದಸ್ಯರು ಹೇಳಿದರು ಬೇರೆ ಕಡೆ 4 ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ಇಟ್ಟಿದ್ದೀರಿ ಎಂದು. ಅದು ಏತಕ್ಕೆ ಮಾಡಿದ್ದೇವೆ ? ಎಂದರೆ ಈ ವರ್ಷದ ಹಣಕಾಸಿನ ಪರಿಸ್ಥಿತಿ ಹೀಗಿದೆ. 1971—72 ನೇ ಸಾಲಿನ ಬಡ್ಜೆಟ್ಟಿನಲ್ಲಿ ಮೇಜರ್ ಮತ್ತು ಮೀಡಿಯಮ್ ಇರ್ರಿಗೇಷನ್‌ಗೆ 20 ಕೋಟಿ ರೂಪಾಯಿ ಇಟ್ಟಿದ್ದರು. 1970-71 ರಲ್ಲಿ 18 ಕೋಟಿ ರೂಪಾಯಿ ಇಟ್ಟಿದ್ದರು. ಆದರೆ 1972-73 ನೇ ಸಾಲಿಗೆ ಬಡ್ಜೆಟ್ ಪುಸ್ತಕದಲ್ಲಿ 24.81 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ನಾವು ಯಾವ ರೀತಿಯಾಗಿ ಕಡಿಮೆ ಮಾಡಿದ್ದೇವೆ ? ಅವರು ಏನು ಹೇಳುತ್ತಾ ಇದ್ದಾರೆ ಎಂದರೆ ಈಗ ಬಡ್ಜೆಟ್ಟಿನಲ್ಲಿ 20 ಕೋಟಿ ರೂಪಾಯಿ ಇಟ್ಟಿದ್ದರೂ at the end of the year expenditure has gone upto Rs. 31 crores. That means we have spent 10-11 crores more than what was contemplated in the budget. Alright, to that extent, we do not have any quarrel with them. But to say we have not provided more is not correct. You are able to spend more because you also drew money from the Reserve Bank by way of overdraft. Now, if I am also permitted to have overdraft, I will also spend more. Fortunately or unfortunately for you, you had that privilege when you were there, but now, the Government of India has definitely stated that they cannot allow overdraft. ಆದಕಾರಣ ಮುಂದೆ ಎಷ್ಟು ಖರ್ಚು ಮಾಡಬೇಕು ಎಂದು ರಿಯಲಿಸ್ಟಿಕ್ ಅಂದಾಜು ಇಟ್ಟುಕೊಂಡು 25 ಕೋಟಿ ರೂಪಾಯಿಗಳು ಖರ್ಚು ಮಾಡುತ್ತೇವೆ ಎಂದು ಹೇಳಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಕನ್‌ಸ್ಟ್ರಕ್ಷನ್ ಟೆಂಪೋ ಕಡಿಮೆ ಎಂದು ಹೇಳುತ್ತಿದ್ದಾರೆ.

Sri D. DEVARAJ URS.—I can assure you that nothing has happened. ಟೆಂಪೋ ಕಡಿಮೆ ಆಗುತ್ತಾ ಇಲ್ಲ. I may assure you nothing will happen. ಹಿಂದಿನ ಕತೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. There was a set of criticisms and they were indirectly trying to defend what all happened and trying to say what we are doing is something wrong and they were trying to project that everything has gone wrong. I know how to meet that criticism. ಅಷ್ಟು ಹೇಳಿದರೆ ಸಾಕು. ಹಿಂದೆ ಏನೇ ಖರ್ಚು ಮಾಡಿರಲಿ ಅದಕ್ಕಿಂತ ಕಡಿಮೆ ಆಗುವುದಿಲ್ಲ. ಎಷ್ಟು ಸಾಧ್ಯವೋ ಅಷ್ಟು ಖರ್ಚು ಮಾಡಿ ಕಾವೇರಿ ವ್ಯಾಲಿಯಲ್ಲಿ ಇರತಕ್ಕ ಪ್ರಾಜೆಕ್ಟ್ ರೆಕ್ಟಿಫೈ ಆಗುವುದಕ್ಕೆ ಪ್ರಯತ್ನ ಮಾಡಿಯೇ ಮಾಡುತ್ತೇನೆ. ಇನ್ನೊಂದು ಮಾತು ಹೇಳುವುದಾದರೆ ಈಗ ಅಪ್ಪರ್ ಕೃಷ್ಣಾದಲ್ಲಿ ಎರಡು ಪ್ರಾಜೆಕ್ಟ್‌ಗಳು ಇವೆ. ಒಂದು ನಾರಾಯಣಪುರ ಪ್ರಾಜೆಕ್ಟ್, ಇನ್ನೊಂದು ಆಲಮಟ್ಟಿ ಪ್ರಾಜೆಕ್ಟ್, ಮಲಪ್ರಭಾ ಪ್ರಾಜೆಕ್ಟ್, ಘಟಪ್ರಭಾ ಪ್ರಾಜೆಕ್ಟ್‌ಗಳು ಇವೆ. ಅನೇಕ ಮಾನ್ಯ ಸದಸ್ಯರು ಇದರಿಂದ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಆತುರಾತುರವಾಗಿ ಕೇಳುವುದು ಸಹಜ. ತಮ್ಮಲ್ಲಿ ಒಂದು ಮಾತು ತಿಳಿಸುವುದು ಏನೆಂದರೆ ಈಗಲೇ We have spent in Upper Krishna Project Stage I nearly Rs. 13 crores so far ; in Malaprabha Rs. 22 crores and in Ghataprabha, we have spent Rs. 35 crores. In Hemavathi we have spent Rs. $14\frac{1}{2}$ crores, in Kabini, Rs. 15 crores and in Harangi about Rs. $3\frac{1}{2}$ crores. ಇನ್ನು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಎಲ್ಲಾ ಕಂಪ್ಲೀಟ್ ಆಗಬೇಕಾದರೆ 163 ಕೋಟಿ ರೂಪಾಯಿಗಳು ಬೇಕು. ಫಸ್ಟ್ ಫೇಸ್‌ಗೆ 104 ಕೋಟಿ ರೂಪಾಯಿಗಳು ಬೇಕು. ಅದೇ ರೀತಿ ಮಲಪ್ರಭಾ ಪ್ರಾಜೆಕ್ಟ್ ಕಂಪ್ಲೀಟ್ ಆಗಬೇಕಾದರೆ 47 ಕೋಟಿ ರೂಪಾಯಿಗಳು ಬೇಕು. ಘಟಪ್ರಭಾ ಪ್ರಾಜೆಕ್ಟ್ ಮಾಡಬೇಕಾದರೆ ಈಗ ಇರತಕ್ಕಂಥ ಪೊಸಿಷನ್‌ನಲ್ಲಿ ಸುಮಾರು 12—13 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇನ್ನು ರಿವೈಸ್ ಆದರೆ ಇನ್ನೂ ಜಾಸ್ತಿ ಆಗಬಹುದು. ಅಷ್ಟು ಹಣ ಬೇಕು. ಅದಕ್ಕೆ ಕೆಲಸ ಮಾಡಬಾರದು ಅಂತ ಅಲ್ಲ. ಈ 6 ಮೇಜರ್ ಇರ್ರಿಗೇಷನ್ ಪ್ರಾಜೆಕ್ಟ್‌ಗಳಿಗೆ 230 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇಷ್ಟು ಕೋಟಿ ರೂಪಾಯಿಗಳು ಖರ್ಚು ಆಗುವವರೆಗೆ ನೀರಿನ್ನು ಕಟ್ಟಿಕೊಂಡು ಇರಬೇಕೇ ಅಥವಾ ಮಧ್ಯದಲ್ಲಿ ಬಿಡಬಹುದೇ ಎನ್ನುವುದನ್ನು ನಾವು ಆಲೋಚನೆ ಮಾಡುತ್ತಿದ್ದೇವೆ.

Till then we will try to utilise some water in these projects. This problem is engaging the attention of the Government. ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಬಗ್ಗೆ ಟೆಕ್ನಿಕಲ್ ಒಪೀನಿಯನ್ ಆಲೋಚನೆ ಮಾಡುವುದಾದರೆ supposing we had taken up Narayanapura Project or some other project, at some level, water could have been utilised. ಅದನ್ನು ಒಪ್ಪಿಕೊಳ್ಳುತ್ತೇನೆ. ಅದನ್ನು ಏತಕ್ಕೆ ಒಪ್ಪಿಕೊಳ್ಳಲಿಲ್ಲ ?

ಶ್ರೀ ಬಾಪೂಗೌಡ ರಾಯಪ್ಪ.—ನಾರಾಯಣಪುರದಲ್ಲಿ ಮೇಸನರಿ ಕೆಲಸದ ಟೆಂಪೋ ಕಡಿಮೆಯಾಗಿದೆ. ನಾರಾಯಣಪುರ ಡಿವಿಷನ್ ಷಿಫ್ಟ್ ಮಾಡುತ್ತಾರೆ. ಸಿರಪುರದಲ್ಲಿ ಷಿಫ್ಟ್ ಮಾಡಿದ್ದಾರೆ. ನಾರಾಯಣಪುರ ಡ್ಯಾಮ್ ಕಂಪ್ಲೀಟ್ ಮಾಡುವ ಟೆಂಪೋ ಕಡಿಮೆಯಾಗಿದೆ. 15 ಮೈಲಿ ಕಾಲುವೆಯೂ ಕೂಡ ತೆಗೆದಿದ್ದಾರೆ. ತಾವು ಹೇಳಿದ ಪ್ರಕಾರ ನಾರಾಯಣಪುರಕ್ಕೆ ಸ್ವಲ್ಪ ಹಣ ಖರ್ಚು ಮಾಡಿದರೆ 10-20 ಸಾವಿರ ಎಕರೆ ನೀರಾವರಿ ಮಾಡಿದರೆ ಅನುಕೂಲವಾಗುತ್ತದೆ. ಆದುದರಿಂದ ಆ ಕೆಲಸದ ಟೆಂಪೋ ಕಡಿಮೆ ಆಗಬಾರದು ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ತಮಗೆ ಒಂದು ಮಾತು ಹೇಳುತ್ತೇನೆ. ನಾವು ಸ್ವಲ್ಪ ಸ್ವಲ್ಪ ಹಣಖರ್ಚು ಮಾಡಿ ತಕ್ಷಣ ಏನಾದರೂ ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಿದ್ದರೆ ಅದನ್ನು ನೋಡಿ ಅದರಂತೆ ಮಾಡೋಣ. ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಆಲಮಟ್ಟಿಯಲ್ಲಾಗಲೀ, ನಾರಾಯಣಪುರದಲ್ಲಾಗಲೀ, ಆದರಿಂದ ಬೇಗ ಉಪಯೋಗ ಪಡೆಯಬಹುದು ಎನ್ನುವುದಾದರೆ ಅದಕ್ಕೆ ಹಣವನ್ನು ಮೊದಲು ಖರ್ಚು ಮಾಡೋಣ. ಈ ಸಲ ಹಣ ಕಡಮೆಯಾಗಿ ಖರ್ಚಾಗುವುದಕ್ಕೆ ಕಾರಣವನ್ನು ಹೇಳಿದ್ದೇನೆ. ಯಾವುದೇಯೋಜನೆಗೆ ಹಣವನ್ನು ಖರ್ಚು ಮಾಡಬೇಕಾಗಿದ್ದರೂ, ನಾವು ಹಿಂತೆಗೆಯದೆ ಅದರ ಬಗ್ಗೆ ತೀವ್ರತೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡೋಣ. ವಿಧಾನ ಸಭೆಯ ಪ್ರಸ್ತುತ ಅಧಿವೇಶನ ಮುಗಿದ ಮೇಲೆ ನಾನೇ ಖುದ್ದಾಗಿ ಇಂಜಿನಿಯರುಗಳ ಜೊತೆಯಲ್ಲಿ ಎಲ್ಲ ಪ್ರಾಜೆಕ್ಟ್‌ಗಳನ್ನೂ ನೋಡಿ ಯಾವ ರೀತಿ ಹಣವನ್ನು ಖರ್ಚು ಮಾಡುವುದರಿಂದ ತಕ್ಷಣದಲ್ಲಿ ಉಪಯೋಗ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು, ಆ ಕೆಲಸ ಯಾವುದಾದರೂ ಆಗಲೀ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡೋಣ.

ಘಟಪ್ರಭ ಬಗ್ಗೆ ಹಿಂದೆ ಆಗಿರುವುದನ್ನು ಹೇಳುವುದಕ್ಕೆ ಹೋದರೆ ಬಹಳ ಕಾಲ ಆಗುತ್ತದೆ. ಮುಂದೆ ನಾವು ನಮಗೆ ಇರತಕ್ಕ ಆರ್ಥಿಕ ಸ್ಥಿತಿಗತಿಗಳನ್ನು ನೋಡಿಕೊಂಡು ನಮಗೆ ಬರತಕ್ಕ ವರಮಾನವೆಷ್ಟಿದೆ ಎನ್ನುವುದನ್ನು ನೋಡಿಕೊಂಡು ಹಣವನ್ನು ಖರ್ಚು ಮಾಡಿ ತಕ್ಷಣ ಸ್ವಲ್ಪ ಸ್ವಲ್ಪ ಅನುಕೂಲವಾಗುವಂಥ ಕಾರ್ಯಕ್ರಮ, ಪ್ರೋಗ್ರಾಂ ಆಫ್ ವರ್ಕ್ ಹಾಕಿಕೊಂಡು ಕೆಲಸ ಮಾಡೋಣ. ಮಾತ್ರ ಇದು ಸ್ವಲ್ಪ ನಿಧಾನವಾಗಬಹುದು. ಮುಂದೆ ಇವುಗಳಿಗೆ ಖರ್ಚು ಏನಾಗಬಹುದು ಎಂದು ತಮ್ಮ ಗಮನಕ್ಕೆ ತಂದಿದ್ದೇನೆ. ಒಂದೇ ಸಲ ಇದನ್ನೆಲ್ಲ ಮಾಡುವುದಕ್ಕಾಗುವುದಿಲ್ಲ ಎನ್ನುವ ವಿಚಾರವನ್ನು ತಮಗೆ ಹೇಳುತ್ತೇನೆ. ಹಿಂದೆ ಎನ್.ಡಿ.ಸಿ. ಸಭೆಯಲ್ಲ ನಾನು ಮತ್ತು ಇನ್ನು ಕೆಲವು ರಾಜ್ಯಗಳ ಮುಖ್ಯ ಮಂತ್ರಿಗಳು ಸೇರಿ ಪ್ಲಾನಿಂಗ್ ಕಮಿಷನ್‌ನವರಿಗೆ, ಇಂಡಿಯಾ ಸರ್ಕಾರದವರಿಗೆ ಹೇಳುತ್ತಿದ್ದೆವು, ಇಂಥ ದೊಡ್ಡ ದೊಡ್ಡ, ನಮಗೆ ದೈವದತ್ತವಾಗಿರತಕ್ಕ ಪ್ರಕೃತಿದತ್ತವಾಗಿರತಕ್ಕ ಸಂಪತ್ತು ಏನಿದೆ, ನೀರಿನ ಸಂಪತ್ತು, ಖನಿಜ ಸಂಪತ್ತು ಮತ್ತು ಇನ್ನೂ ಕೆಲವು ಸಂಪತ್ತುಗಳನ್ನು ನಾವು ಉಪಯೋಗ ಮಾಡಬೇಕು. ಆದರಲ್ಲಿಯೂ ನೀರಿನ ಸಂಪತ್ತನ್ನು ಬೇಗ ಉಪಯೋಗ ಮಾಡಿಕೊಳ್ಳಬೇಕು. ನಮಗೆ ಸ್ವಾತಂತ್ರ್ಯ ಬಂದು 25 ವರ್ಷಗಳಾಗಿವೆ ಆದರೂ ನಮ್ಮ ರಾಜ್ಯದಲ್ಲಿ ನೀರಾವರಿ ಇನ್ನೂ ಕುಂಠಿತವಾಗಿದೆ. ಮೈಸೂರು ರಾಜ್ಯದಲ್ಲಿ ಇಷ್ಟೆಲ್ಲ ಪ್ರಯತ್ನ ಮಾಡಿದ್ದರೂ 12 ಪರ್ಸೆಂಟ್ ಮಾತ್ರ ನೀರಾವರಿ ಪ್ರದೇಶವಾಗಿದೆ. I think with all this effort in Mysore we have just reached the figure of 12 per cent in irrigation. The rest is all depending on rain-God. So we have to increase the tempo of these major, minor irrigation and also lift irrigation projects.

ಶ್ರೀ ನಗರದಲ್ಲಿ ನಡೆಯುತ್ತಿದ್ದ ರಾಷ್ಟ್ರದ ನೀರಾವರಿ ಸಚಿವರುಗಳ ಕಾನ್‌ಫರೆನ್ಸ್ ಈಗ ತಾನೇ ಮುಗಿದಿದೆ. Irrigation Ministers Conference that took place in Srinagar-Dr. K.L. Rao has said the same thing and the Planning Commission has been thinking about it. Water, minerals and electricity have to be considered in terms of the nation's benefit. ಅದನ್ನು ಅವರು ಮಾಡುತ್ತಾರೆ, ತೀವ್ರವಾಗಿ ಕೇಂದ್ರ ಸರ್ಕಾರದ ಪರ್ಯಾಲೋಚನೆಯಲ್ಲಿದೆ. ನನ್ನ ಆಶಯವೇನಿದೆ ಎಂದರೆ ಇನ್ನು ಬರತಕ್ಕ ಆರನೇ ಆರ್ಥಿಕ ಆಯೋಗದವರು ಕೂಡ ಇದರ ಬಗ್ಗೆ ಯೋಚನೆ ಮಾಡುವ

(ಶ್ರೀ ಡಿ. ದೇವರಾಜ ಅರಸ್)

ವರಿದ್ದಾರೆ. ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರ ಸರ್ಕಾರದವರು ನಮಗೆ ಸಹಾಯ ಮಾಡುವವರಿದ್ದಾರೆ ಎಂದು ನನಗನಿಸುತ್ತದೆ. ಆದುದರಿಂದ ಈ ಬಗ್ಗೆ ನಾವು ಅಷ್ಟಾಗಿ ನಿರಾಶಾದಾಯಕರಾಗಬೇಕಾದ್ದಿಲ್ಲ. ಪ್ರಾಜೆಕ್ಟ್‌ಗಳನ್ನು ಪೂರೈಸಬೇಕು. ನನ್ನ ದೃಷ್ಟಿಯಲ್ಲಿ 10 ವರ್ಷದ ಪ್ಲಾನ್ ಹಾಕಿಕೊಂಡು ಮೇಜರ್ ಇರಿಗೇಷನ್ ಮತ್ತು ಮೀಡಿಯಂ ಇರಿಗೇಷನ್ ಪೂರ್ತಿ ಮಾಡುವ ದೃಷ್ಟಿಯಿಂದ ಕೆಲಸ ಮಾಡಬೇಕು. ಮೀಡಿಯಂ ಇರಿಗೇಷನ್ಸ್ ಎಂದರೆ ಮಂಚನಬೆಲೆ ಪ್ರಾಜೆಕ್ಟ್, ಕಾರಂಜಿಯಾ ಪ್ರಾಜೆಕ್ಟ್, ಬಿಲ್ಲದ ಹಳ್ಳ ಪ್ರಾಜೆಕ್ಟ್, ಬೆಣ್ಣೆತೊರೆ ಪ್ರಾಜೆಕ್ಟ್ ಮುಂತಾದ ಐದು ಕೋಟಿಗಿಂತ ಕಡಮೆ ಇರುವ ಪ್ರಾಜೆಕ್ಟ್‌ಗಳು. ಇಷ್ಟೆಲ್ಲ ಪ್ರಾಜೆಕ್ಟ್‌ಗಳಿಗೆ ಎಷ್ಟು ಹಣವಾಗುತ್ತದೆ, ಹತ್ತು ವರ್ಷ ಕಳೆದ ಮೇಲೆ ಹೆಚ್ಚು ಹಣ ಇದರಿಂದ ಏನು ಬರುತ್ತದೆ ಪರ್ಸ್ಪೆಕ್ಟಿವ್ ಪ್ಲಾನಿಂಗ್ ಎಂದು ಹೇಳಿ ನಮ್ಮ ದೇಶದಲ್ಲಿ ಮೇಜರ್ ಮತ್ತು ಮೀಡಿಯಂ ಇರಿಗೇಷನ್ ಪ್ರಾಜೆಕ್ಟ್ ಎಲ್ಲವನ್ನೂ ಒಂದಲ್ಲ ಒಂದು ಹಂತದಲ್ಲಿ ತೆಗೆದುಕೊಂಡು ಕಾರ್ಯ ಪ್ರಾರಂಭ ಮಾಡಬೇಕು, ಹತ್ತು ವರ್ಷದಲ್ಲಿ ಇವೆಲ್ಲ ಮುಗಿಯಬೇಕು. ಇದಕ್ಕೆ ಎಷ್ಟು ಹಣ ಆಗಬೇಕು ಎಂದು ಅಂದಾಜು ಮಾಡಿ ತಮ್ಮ ಮುಂದೆ ಇಡುತ್ತೇನೆ. ಏಕೆ ಇಡಬೇಕು ಎಂದರೆ ಒಂದು ಕಡೆ ಪ್ರಾಜೆಕ್ಟ್‌ಗಳು ಬೇಕು, ಲಿಫ್ಟ್ ಇರಿಗೇಷನ್ ಬೇಕು, ಮೈನರ್ ಇರಿಗೇಷನ್ ಬೇಕು, ಸೇತುವೆಗಳಾಗಬೇಕು ಎಂದು ಹೇಳುವುದು ಇನ್ನೊಂದು ಕಡೆ ದುಡ್ಡು ಮಾತ್ರ ಕೊಡುವುದಕ್ಕೆ ಇಷ್ಟ ಪಡುವುದಿಲ್ಲ. ಕೆಲವೊಂದು ಟ್ಯಾಕ್ಸ್ ಏಕೆ ಹಾಕುತ್ತೀರಿ, ಟ್ಯಾಕ್ಸ್ ಬೇಡ, ಸ್ಟಿನವರಿಗೂ ಟ್ಯಾಕ್ಸ್ ಬೇಡ ನೀರು ಉಪಯೋಗಿಸುವವರಿಗೂ ಟ್ಯಾಕ್ಸ್ ಬೇಡ ಎಂದರೆ ಇನ್ನು ಯಾರಿಗೆ ಹಾಕಬೇಕು ? ಶ್ರೀಮಂತರಿಗೆ ಹಾಕಿ ಎಂದು ಹೇಳಬಹುದು. ಆ ಶ್ರೀಮಂತ ಯಾರು ಎನ್ನುವುದು ನನಗಂತೂ ಅರ್ಥವಾಗಿಲ್ಲ. ಅದಕ್ಕೆ ತಮ್ಮ ಮುಂದೆ ಅಂದಾಜುಗಳನ್ನು ಇಡುತ್ತೇನೆಂದು ಹೇಳಿದೆ. ಯಾವ ಯಾವ ಪ್ರಾಜೆಕ್ಟಿಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆ, ಅದರಿಂದ ರಿಸೋರ್ಸಸ್ ಎಷ್ಟು ಎಲ್ಲವನ್ನೂ ತಮ್ಮ ಮುಂದೆ ಇಡುತ್ತೇನೆ. ತುಂಗಭದ್ರ ಪ್ರಾಜೆಕ್ಟ್‌ನಿಂದ ಮೂರು ಕಾಸೂ ಬಂದಿಲ್ಲ, ಬೆಟರ್‌ಮೆಂಟ್ ಲೆವಿ ಇಲ್ಲ. ಇದನ್ನು ಮಾಡಿ 20 ವರ್ಷಗಳ ಮೇಲಾಯಿತು, ಕೋಟಿಗಟ್ಟಲೆ ಅದರ ಮೇಲೆ ಖರ್ಚು ಮಾಡಿದ್ದೇವೆ. ಪ್ರಾಜೆಕ್ಟ್‌ಗಳನು ಆದ ಮೇಲೆ ನೀರು ಕಂದಾಯ ಹಾಕಬಾರದು. ನಾವು ಈಗ ಹಾಕಿರುವ ನೀರು ಕಂದಾಯ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಬಹಳ ಕಡಮೆ. ಸಣ್ಣ ಪುಟ್ಟ ಕೆರೆಗಳ ಕೆಳಗೆ ತೊಂದರೆಗಳಿವೆ ಎನ್ನುವುದನ್ನು ಹೇಳಿದ್ದಾರೆ. ನಾನೂ ಒಪ್ಪಿದ್ದೇನೆ, ಹಣಕಾಸಿನ ಮಂತ್ರಿಗಳೂ ಒಪ್ಪಿದ್ದಾರೆ. ಅದನ್ನು ಯಾವ ರೀತಿ ಮಾಡಬೇಕು ಎಂದು ಯೋಚನೆ ಮಾಡೋಣ. ಒಂದು ಕಡೆ ಪ್ರಾಜೆಕ್ಟ್‌ಗಳಾಗಬೇಕು, ಯಾವುದೇ ಭಾಗಕ್ಕೆ ನೀರು ಬರಲಿ ಪ್ರಾಜೆಕ್ಟ್‌ಗಳಾಗಬೇಕು. ಹೇಮಾವತಿ ಕೆಳಗೆ ಕೆಲವು ಭಾಗಕ್ಕೆ ನೀರು ಬರಬಹುದು. ಕೃಷ್ಣ ಯೋಜನೆ ಮಾಡಿದರೆ ಅದರಿಂದ ಇಡೀ ಬಿಜಾಪುರಕ್ಕೆ ಅನುಕೂಲವಾಗುವುದಿಲ್ಲ, ಗುಲ್ಬರ್ಗದಲ್ಲಿ ಕೆಲವು ಭಾಗ ಹಾಗೆಯೇ ಉಳಿಯಬಹುದು. ಆದರೆ ಆ ಯೋಜನೆಗಳನ್ನೆಲ್ಲ ಪೂರ್ತಿ ಮಾಡಬೇಡವೇ ? ನಾವು ಇಂಥವನ್ನೆಲ್ಲ ರಾಷ್ಟ್ರೀಯ ದೃಷ್ಟಿಯಿಂದ ಯೋಚನೆ ಮಾಡಬೇಕು. ರಾಷ್ಟ್ರಕ್ಕೆ ಅನುಕೂಲವಾಗುವುದಾದರೆ ಮಾಡೋಣ. ಆದರೆ ಅದರಿಂದ ಉಪಯೋಗ ಪಡೆದ ಜನರು ಹಿಂದಕ್ಕೆ ಏನೂ ಕೊಡಬಾರದು ಎನ್ನುವ ಭಾವನೆ ಬರುತ್ತಿದೆ. ಅದನ್ನು ಇಲ್ಲಿಗೇ ಕೊನೆಗಾಣಿಸುವುದು ಒಳ್ಳೆಯದು. ಪ್ರಾಜೆಕ್ಟ್‌ಗಳಿಂದ ಯಾರು ಅನುಕೂಲವನ್ನು ಪಡೆಯುತ್ತಾರೆ ಅವರು ಹಣ ಕೊಡಬೇಕು. ಹಣ ಕೊಡುವುದು ಬೇಡ ಎಂದರೆ ಜಮೀನಿನಲ್ಲಿ ಒಂದು ಭಾಗ ಕೊಡಲಿ. Let us think about it seriously. Let them give away a portion of their land. Supposing I have ten acres of dry land which is going to be converted into wet land after the Harangi or Hemavathi project, I must be in a position to part with 1 or 2 acres. The land should be available to the landless man today. Will you not consider it progressive? Let us think of it. I am seriously thinking about it. As a matter of fact, I have placed the idea before the Planning Commission as well as at the N.D.C. meeting and the Planning Commission are seriously thinking of it. You will get lakhs of acres.

ತುಂಗಬದ್ರ ಪ್ರಾಜೆಕ್ಟ್ ಕೆಳಗೆ ಒಬ್ಬೊಬ್ಬರಿಗೆ ಒಂದು ಸಾವಿರ, ಎರಡು ಸಾವಿರ ಮೂರು ಸಾವಿರ ಎಕರೆ ಜಮೀನಿದೆ. ಅದೆಲ್ಲ ಇರಿಗೇಷನ್ ಆಗುತ್ತದೆ. ಮಾಡುವವರಿಲ್ಲದೆ ಹಾಗೆಯೇ ಬಿದ್ದಿದೆ. ಇಷ್ಟು ಜಮೀನನ್ನು ಅವರು ಹೊಂದಿರಲು ಏಕೆ ಬಿಡಬೇಕು. This sort of an idea

is not new. This idea was there ages back. Somebody was quoting in sanskrit and he said that the idea emanated from KOUTILYA 2500 years back. ಸೀಲಿಂಗ್ ಹಾಗಿದೆ, ಹೀಗಿದೆ ಎಂದು ಹೇಳುತ್ತಾರೆ. 10 ಎಕರೆಗೆ ನೀರು ಕೊಡುವುದಾದರೆ ಅದಕ್ಕಿಂತ ಏನು ಬೇಕಾಗಿದೆ ? ಅದರಲ್ಲಿ ಒಂದು ಭಾಗ ಜಮೀನಿಲ್ಲದವರಿಗೆ ಕೊಡಿ, ಹತ್ತಾರು ನೂರಾರು ವರ್ಷಗಳಿಂದ ನೀರಾವರಿಯಾಗಿಲ್ಲ. ಇಂಥ ಪರಿಸ್ಥಿತಿ ಕೊನೆಗೊಳ್ಳಬೇಕು. ನಾವು ಕೋಟಿಗಟ್ಟಲೆ ಹಣವನ್ನು ತರಬೇಕು. ಅದರಿಂದ ಕೆಲವರಿಗೆ ಅನುಕೂಲವಾದ ಮೇಲೆ ಅವರು ಭಾಗ ಕೊಡಲೇ ಬೇಕಾಗುತ್ತದೆ. ಇದನ್ನು ನೀವು ಯೋಚನೆ ಮಾಡಬೇಕು.

ಇಂಜಿನಿಯರುಗಳ ಟ್ರಾನ್ಸ್‌ಫರ್ಸ್, ಪ್ರಮೋಷನ್ ಅಥವಾ ಪೋಸ್ಟಿಂಗ್ಸ್ ಬಗ್ಗೆ ಕೆಲವು ಟೀಕೆಗಳು ಬಂದಿವೆ. ಶ್ರೀ ಮಾನ್ ದೇವೇಗೌಡರು ಹೆಚ್ಚಾಗಿ ಹೇಳಿದ್ದಾರೆ. ಒಬ್ಬ ಇಂಜಿನಿಯರನ್ನು ಇಂಜಿನಿಯರ್ ಇನ್ ಚೀಫ್ ಎಂದು ಮಾಡಿದ್ದೀರಲ್ಲ, ಅವರ ಮೇಲೆ ಅಪಾದನೆಗಳಿರಲಿಲ್ಲವೇ ಎನ್ನುವ ಮಾತನ್ನು ಹೇಳಿದ್ದಾರೆ. ಶ್ರೀ ಎಂ. ಎಸ್. ಕೃಷ್ಣನ್ ಅವರೂ ಹೇಳಿದ್ದಾರೆ.

ಈಗ ನಾನು ನಮ್ಮದು ತಪ್ಪಾಗಿದೆ ಎಂದರೆ, ಅದನ್ನು ನಿಮ್ಮ ಮುಂದೆ ಹೇಳಿ ಬಿಡೋಣ ಎಂದು ಹಿಂದಿನ ಕಡತ ತರಿಸಿದೆ. ನಮ್ಮದು ತಪ್ಪಿದ್ದರೆ ಒಪ್ಪಿಕೊಳ್ಳೋಣ. ನಿಮ್ಮ ತಿಳುವಳಿಕೆ ಸರಿ ಇಲ್ಲದಿದ್ದರೆ, ನೀವು ಒಪ್ಪಿಕೊಳ್ಳಿ. ಮೈಸೂರು ವಿಧಾನಸಭೆಯ ಅಫಿಷಿಯಲ್ ರಿಪೋರ್ಟಿನಲ್ಲಿ ನನ್ನ ಭಾಷಣ ಇದೆ.

2-30 P. M.

My speech is contained in the Official Report of the 7th Session of the IV Legislative Assembly. I bring to the notice of the hon. members this speech of mine for their benefit. However, I do not think they expect me to read it. As it would take the time of the House, I request them to go through it. I went through that speech now and I find that I have not stated anything personally against Sri Mugdam, the then Chief Engineer and Chairman of Bangalore Water Supply and Sewerage Board. ನಾನು ಹೇಳಿರುವುದು ನಿಮ್ಮ ವಾಟರ್ ಬೋರ್ಡ್‌ನಲ್ಲಿ ಹೀಗೆ ನಡೆಯುತ್ತಿದೆ ಏತಕ್ಕೆ ಕಂಟ್ರಾಕ್ಟ್ ಕ್ವಾಲಿಟಿ ಕೆಟ್ಟಿದೆ ಎಂದು. ಅದಕ್ಕೆ ಆಗ ಮುಖ್ಯಮಂತ್ರಿಗಳು ಇದರ ಮೇಲೆ ನಮ್ಮ ಹೋಲ್ಡ್ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಅದು ತಮಗೂ ಜ್ಞಾಪಕವಿದೆ. ಆ ಉತ್ತರವನ್ನು ನೀವೂ ಒಪ್ಪಿಕೊಳ್ಳಲಿಲ್ಲ. ಆಗ ನಾನು ಹೇಳಿದೆ ಕಾನೂನು ಪ್ರಕಾರ ನಿಮಗೆ ಹೋಲ್ಡ್ ಇದೆ ನೀವು ನೋಡಿ ಎಂದು. ನಾನು ಫೈಲನ್ನೂ ಸಹ ನೋಡಿದ್ದೇನೆ. ಅದರಲ್ಲಿ ಕೊನೆಯಲ್ಲಿ ಅವರು "You are hereby directed to do as you like." ಎಂದು ಹೇಳಿದ್ದಾರೆ. The then Chairman has categorically stated : 'In view of this I do not want to give to this Firm. Please direct and enlighten me what I should do' ಎಂದು ಅವರು ಕೇಳಿದ್ದಾರೆ. ಬೋರ್ಡಿನವರು ಇದನ್ನೇ ನಾಲ್ಕು ಸಾರಿ ಕೂತು ತೀರ್ಮಾನ ಮಾಡಿದ್ದಾರೆ. ನಾವಾಗಲೀ, ನೀವಾಗಲೀ ಯಾರನ್ನಾದರೂ ಒಂದು ಅಪಾದನೆಗೆ ಒಳಪಡಿಸಬೇಕಾದರೆ, ಅವರ ಮೇಲೆ ಅನುಮಾನ ಪಡಬೇಕಾದರೆ, ಕೂಲಂಕಷವಾಗಿ ನೋಡಬೇಕು. I thought I have no business to entertain any prejudice against an officer unnecessarily when I have nothing to substantiate it. If you want to blame anybody, you have to blame the Board as such. You cannot blame the Chairman only. If the Board has done something wrong, the entire Board might be wrong. ಆತ ಒಬ್ಬ ಕಾರಣ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ ಕಾನೂನು ರೀತ್ಯ, ಧರ್ಮ ರೀತ್ಯ, ನ್ಯಾಯ ರೀತ್ಯ ಆ ರೀತಿ ಮಾಡುವುದಕ್ಕಾಗುವುದಿಲ್ಲ.

Sri M. S. KRISHNAN.—One aspect is there. There are serious allegations against him which all of us who were in the last Assembly know. How does the Government give promotion to such an officer ? Even from the point of administration it is not appropriate.

Sri D. DEVARAJ URS.—Perhaps Sri Krishnan forgot what I stated. Merely on suspicion of any kind of complaint, an officer cannot be punished.

Sri M. S. KRISHNAN.—The second aspect is, from the administraive point of view, is it correct that the same person should be made as Engineer-in-Chief, Additional Secretary to Government and the Chairman of BWSSB ?

Sri D. DEVARAJ URS.—First of all, there was the post of the Additional Secretary to Government, P.W.D. The post of the Engineer-in-Chief was created by the previous Government. So, it is not I who created that post; it was not created during our period. So that post was already there when we assumed office. Some incumbant was functioning in that post and that particular officer had to retire. Then came the question: what should be done with that post and who is to be posted to it. Then when we looked into the records and examined the confidential reports of the Engineers, we found that Sri Mugdam was the seniormost Chief Engineer in the State. So we had to take a decision that the seniormost Chief Engineer should occupy the post of the Engineer-in-Chief.

ಶ್ರೀ ಕೆ. ಎಚ್. ಹನುಮೆಗೌಡ.—ಶರಾವತಿ ಬಗ್ಗೆ ಅವರ ಮೇಲೆ ಬೇಕಾದಷ್ಟು ಕ್ರಿಟಿಸಿಸಂ ಬಂದಿದೆ. ಇದು ಕೂಡ ಅವರ ಕಾಲದಲ್ಲಿ ನಡೆದಿದ್ದು. ಇದರ ಬಗ್ಗೆ ಅನ್ಯಾಯವಾಗಿದೆ. ಅಂತಹವರಿಗೆ ಜವಾಬ್ದಾರಿ ಸ್ಥಾನಕ್ಕೆ ಏರಿಸಿದ್ದೀರಿ. ಅವರ ಮೇಲೆ ಏತಕ್ಕೆ ಆಕ್ಷನ್ ತೆಗೆದುಕೊಂಡಿಲ್ಲ? ಸಣ್ಣ ಪುಟ್ಟ ರಿಪೋರ್ಟ್ ಬಂದರೆ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡುತ್ತಾರೆ. ಅಂಥ ಸಂದರ್ಭದಲ್ಲಿ ಜಾಸ್ತಿ ಜವಾಬ್ದಾರಿ ಪುನಃ ಕೊಡುತ್ತಾರೆಯೇ.?

Sri D. DEVARAJ URS.—The premise on which the member's question is put is very wrong.

Sri K. H. HANUME GOWDA.—Sri Mugdam was the Chief Engineer at that time.

ಶ್ರೀ ಡಿ. ದೇವರಾಜ ಅರಸ್.—1962ರಿಂದ ಈಚೆಗೆ ಏನು ಏನು ಆಗಿದೆ, ಅದರ ವಿಚಾರ ನಾವು ಕೂಲಂಕಷವಾಗಿ ನೋಡೋಣ. If this man is responsible, he will have to take the responsiblity.

Sri M. S. KRISHNAN.—Let the Chief Minister enquire any Officer in the Bangalore Water Supply and Sewerage Board or in the P.W.D. how things were going on during Sri Mugdam's time. The impression he has left with one and all is that he is a bureaucat. There was absolute discontentment in the departments he held charge of; all the officials and officers were dissatisfied with him. And this Government has filled up the vacancy of the Engineer-in-Chief by posting such an unpopular engineer without considering how things will go on in the departments under him.

Sri D. DEVARAJ URS.—On the other hand, let me tell the hon. member that there was the other version also. Judged by all standards this particular Officer had to occupy that post of the Engineer-in-Chief and he was purposely kept out though he is an efficient and independent Officer : that aspect is also there. I do not like to overlook the

cliams of an officer if he is efficient and senior ; let him get his chance for promotion. On two counts, he was to be given this chance–on his efficiency as well as seniority. So, on what other grounds could I keep him aside from promotion ? If something has gone wrong in the Water Supply Board, I have not so far heard anything apart from that controversy with regard to tee acceptance of particular tender. That apart, I have not heard anything against him. I would say that if a charge is to be made in this connection, it cannot be against this person but it should be against the Board and against the Government. Even now I hold that view but I am not taking it up. That is a different matter. Rightly or wrongly, in their discretion, they have taken decision. The work has almost come to completion.

Sri C. M. ARUMUGAM.—Is it the Chief Minister's view that if a decision is taken rightly or wrongly, no enquiry is necessary and the matter should be dropped ?

Sri D. DEVARAJ URS.—In their discretion, the Board have given their decision that they should accept a particular tender. There it ends.

Sri M. S. KRISHNAN.—What we are given to understand is that initially this was the person who made the Board accept the tender.

Sri D. DEVARAJ URS.—In logic as well as in law, you cannot hold any one person responsible. That is my point. I must depend on the records.

Sri M. S. KRISHNAN.—The Government should not rely simply on records. The Chief Minister knows some hing besides the records but he does not want to say anything about what he has heard. He must pinpoint the responsibility.

Sri D. DEVARAJ URS.—I know certain things which I cannot say.

Sri C. M. ARUMUGAM.—Is it a fact that this Engineer-in-Chief, Chairman of the Bangalore Water Supply & Sewerage Board and Additional Secretary to Government, PWD, has submitted a nil property statement when he was working as Superintending Engineer in Sharavathi ?

Sri D. DEVARAJ URS.—Now that the hon. Member has told me, I will get it.

Sri C. M. ARUMUGAM.—What property does he hold ?

Sri D. DEVARAJ URS.—That I will follow it up. Every year we do get a statement of the properties of all officers.

ಆದುದರಿಂದ ನಾವು ಯಾವ ಸಂದರ್ಭದಲ್ಲಿ ಈ ಅಧಿಕಾರಿಯನ್ನು ಸ್ಥಾನದಲ್ಲಿ ಇಟ್ಟಿದ್ದಾರೆ ಎನ್ನುವುದನ್ನು ತಿಳಿಸಿದ್ದೇವೆ. ಇನ್ನು ಒಂದು ವಿಚಾರ ಹೇಳಿದರು. ಒಬ್ಬ ಇಂಜಿನಿಯರನ್ನು ಟೆಕ್ನಿಕಲ್ ಕಮಿಟಿ ಪಿನು ಇದೆ ಆ ಕಮಿಟಿಗೆ ಹಾಕಿದ್ದಾರೆ, ಅವರು ಹಿಂದೂಸ್ಥಾನ್ ಕನ್‌ಸ್ಟ್ರಕ್ಷನ್ ಕಂಪನಿಯಲ್ಲಿ ಕೆಲಸ ಮಾಡುತ್ತಾ ಇದ್ದರು ಈಗ ಆ ಕಂಪನಿ ಮೇಲೆ ಜವಾಬ್ದಾರಿ ಬಂದಿದೆ ಎಂದು ಶ್ರೀಮಾನ್ ದೇವೇಗೌಡರು ಹೇಳಿದರು. ದೇವೇಗೌಡರು ಬಹಳ ವಿಚಾರ ತಿಳಿಯುವುದಕ್ಕೆ ಪ್ರಯತ್ನ ಪಡುತ್ತಾರೆ.

(SRI D. DEVARAJ URS)

ಪಿ.ಡಬ್ಲ್ಯೂ.ಡಿ. ಇಲಾಖೆ ವಿಚಾರ ಎಲ್ಲರಿಗಿಂತ ಹೆಚ್ಚಿಗೆ ತಿಳಿದುಕೊಂಡಿದ್ದಾರೆ. ಅದರ ಸಂಪರ್ಕ ಅವರಿಗೆ ಜಾಸ್ತಿ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಸ್ವಲ್ಪಮಟ್ಟಿಗೆ ವಿಚಾರಗಳು ತಮ್ಮ ಗಮನಕ್ಕೆ ಬಂದಾಗ, ಪೂರ್ಣವಾಗಿ ವಿಮರ್ಶೆ ಮಾಡಿ. ವಿಚಾರ ಬಂದ ಕೂಡಲೇ, ಹಳ್ಳಿಯಲ್ಲಿ ಒಂದು ಗಾದೆ ಇದೆ "ಎತ್ತು ಈಯಿತು ಎಂದರೆ ಕೊಟ್ಟಿಗೆಯಲ್ಲಿ ಕಟ್ಟು" ಎಂದು ಹೇಳಿದಂತೆ ಆ ರೀತಿ ಹೇಳಿದರೆ ಹೇಗೆ ? You do not wait to verify whether what one says is true or false or what is the basis on which such information is given. Nothing of the kind. You have already certain pre-conceived ideas behind your back. It will be like throwing a kind of suspicion in the minds of others and try to make it appear as if we are doing something which ought not to have been done in the best interests of the State, I am sorry that is not the way to go about. Hon. Members of this House and the Leader of the Opposition have every right to say that Government has done a wrong thing, but when making reference to individuals outside, I would appeal to them to verify facts before they say anything on the floor of the House, That is all my request.

ಶ್ರೀ ಕೆ. ಎಚ್. ಹನುಮೇಗೌಡ.—ಮೇಜರ್ ಇರಿಗೇಷನ್ ಬೋರ್ಡ್ ಮೆಂಬರು ಮಾಡುವಾಗ ಏತಕ್ಕೆ ಕಂಟ್ರಾಕ್ಟರನ್ನು ತೆಗೆದುಕೊಂಡು ಹೋಗಿ ಅದರಲ್ಲಿ ಹಾಕುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ವಿಷಯ ತಿಳಿಯದೆ ಆ ತರಹ ಏತಕ್ಕೆ ಹೇಳುತ್ತೀರಿ ? I have verified. He was employed by the Hindustan Construction Company. He was also the Chief Engineer in the Iddiki Dam in Kerala which is a particular kind of dam. He resigned his job there and came. He is one of the very good engineer. He has got very good knowledge of the construction of tunnels, of big dams and several other things. ಏನೋ ಸಿಕ್ಕಿಬಿಟ್ಟಿದೆ, ಯಾರನ್ನೋ ತಂದಿದ್ದಾರೆ, ಇಂಥವರನ್ನು ತಂದಿದ್ದಾರೆ, ಅಂಥವರನ್ನು ತಂದಿದ್ದಾರೆ, ಭ್ರಷ್ಟಾಚಾರ ನಡೆದಿದೆ, ಇರಲಿ, ನೋಡತ್ತೇನೆ ಎಂದು ಹೇಳಿಬಿಟ್ಟರೆ ಆಯಿತೆ ? ಇಂಜಿನಿಯರಿಂಗ್ ಸ್ಕಿಲ್ ಬಗ್ಗೆ ಹೇಳುವುದಾದರೆ ಯಾವುದೋ ಒಂದು ಕಾಲದಲ್ಲಿ ಪಾಸು ಮಾಡಿದವರಿಗೆ ಎಲ್ಲಾ ಗೊತ್ತಿರುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. Take for instance the development of science and Technology 10 ವರ್ಷಗಳ ಹಿಂದೆ ಗೊತ್ತಿದ್ದಂಥ ವಿಚಾರ ಬೇರೆ. ಈಗ ಗೊತ್ತಾಗಿರುವ ವಿಚಾರವೇ ಬೇರೆ. ಚೀಫ್ ಇಂಜಿನೀಯರ್ ಎಲ್ಲಾ ತಿಳಿದುಕೊಂಡಿದ್ದಾರೆ ಎಂದು ಹೇಳುವುದು ಸರಿಯಲ್ಲ. There are younger men coming forward who know things better. I know for instance some engineers who do not know certain things though they might have been old in their official career. They do not know later developments. Development is taking place so fast in the world that they cannot cope up with it. That is why I thought of a younger man with greater knowledge. ಯಾವುದರಲ್ಲಿ ಅವರಿಗೆ ಸರ್ಕಾರ ಕಂಟ್ರಾಕ್ಟ್ ಕೊಟ್ಟಿಲ್ಲ. ಎಂ.ಎಲ್.ಎ. ಆಗಬೇಕಾದರೆ ಕ್ವಾಲಿಫಿಕೇಷನ್ ಪ್ರಿಸ್ಕ್ರೈಬ್ ಮಾಡಿದ್ದಾರೆ. ಕಂಟ್ರಾಕ್ಟ್ ತೆಗೆದುಕೊಳ್ಳಕೂಡದು ಎಂದಿದೆ. ಹಾಗೆ ತೆಗೆದುಕೊಂಡಿದ್ದರೆ ಅದನ್ನು ಬಿಡಬೇಕು ಎಂದು ಹೇಳಿದೆ. ಕಂಟ್ರಾಕ್ಟ್‌ದಾರರು ಕಂಟ್ರಾಕ್ಟ್ ಬಿಟ್ಟುಬಿಡುತ್ತಾರೆ, ಆಮೇಲೆ ಎಂ.ಎಲ್.ಎ ಆಗುತ್ತಾರೆ. ಈ ಬೋರ್ಡಿಗೆ ಅತ ಬರಬೇಕಾದರೆ, ಕಂಟ್ರಾಕ್ಟ್ ಇದ್ದರ ಬಿಟ್ಟಿದ್ದಾರೆ. ಹಿಂದೂಸ್ಥಾನ್ ಕನ್‌ಸ್ಟ್ರಕ್ಷನ್ ಕಂಪನಿಯಲ್ಲಿ ಮೊದಲು ಇದ್ದಿರಬಹುದು. ಹಿಂದೂಸ್ಥಾನ್ ಕನ್‌ಸ್ಟ್ರಕ್ಷನ್ ಕಂಪನಿಯಲ್ಲಿ ಕೆಲಸ ಮಾಡುತ್ತಾ ಇದ್ದದ್ದು ಅವರ ತಪ್ಪೆ ? ಹಿಂದೂಸ್ಥಾನ್ ಕನ್‌ಸ್ಟ್ರಕ್ಷನ್ ಕಂಪನಿಯಲ್ಲಿ ನೂರಾರು ಜನ ಇಂಜಿನಿಯರ್‌ಗಳು ಇದ್ದಾರೆ. ಈ ಇಂಜಿನಿಯರ್ ಇಲ್ಲಿಗೆ ಬಂದು ಕೆಲಸ ಮಾಡಿದ್ದಾರೆಯೇ ? He was working somewhere in Calcutta and somewhere in Kerala. He has not even seen your Sharavathi project. So, what is the point in linking these

two things and saying that so and so has been here. I thought of him because he is one of our very good engineers. He is a Mysorean who has worked in various places all over the country and has gone abroad and seen latest constructions there and concrete structures of both tunnels as well as dams. He has so vast in knowledge that I thought I should make use of him. ಅವರ ವಿಷಯ ನನ್ನನ್ನು ಕೇಳಿದ್ದರೆ ಚೆನ್ನಾಗಿತ್ತು, ಅವರನ್ನೇ ಕೇಳಿದ್ದರೂ ಚೆನ್ನಾಗಿತ್ತು. ಆ ರೀತಿ ಏನು ಮಾಡಲಿಲ್ಲ.

ಕೊನೆಯದಾಗಿ ಮಾನ್ಯ ಅಧ್ಯಕ್ಷರೇ, ಜೈಲಿಗೆ ಸಂಬಂಧಪಟ್ಟ ಹಾಗೆ ಕೆಲವು ಸುಧಾರಣೆಗಳು ಮಾಡಬೇಕು ಎಂದು ಹೇಳಿದ್ದಾರೆ. ಈಗ ಕಾಲ ಬಹಳ ಹೆಚ್ಚು ಆಗಿದೆ. ಇನ್ನು ಹೆಚ್ಚು ಕಾಲ ಇದರ ಬಗ್ಗೆ ತೆಗೆದುಕೊಂಡು ಮಾತನಾಡುವುದು ಸೂಕ್ತವಲ್ಲ. ಇದರ ಬಗ್ಗೆ ಕೆಲವು ಕಮಿಟಿಗಳ ಸಲಹೆಗಳು ಇವೆ. ಆ ಸಲಹೆಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಕೆಲವು ಸುಧಾರಣೆಗಳನ್ನು ತಂದಿದ್ದಾರೆ. ಓಪನ್ ಜೈಲ್ ಮಾಡಬೇಕೆಂದು ನನ್ನ ಸಲಹೆ ಇದೆ. We have started one such jail in Sowndathi. We want to see that it becomes a success. ಅದು ಒಂದು ಸಲಹೆ ಕಾರ್ಯರೂಪಕ್ಕೆ ತಂದಿದ್ದೇವೆ. ಇನ್ನು ಜೈಲಿನಲ್ಲಿ ವೇಜಸ್ ಕೊಡುತ್ತಾ ಇರುವುದು ಬಹಳ ಕಮ್ಮಿ ಆ ವೇಜಸ್‌ನ್ನು ಇನ್‌ಕ್ರೀಸ್ ಮಾಡಬೇಕೆಂದು ನೆನ್ನೆತಾನೆ ಹೇಳಿದೆ. ಸದ್ಯಕ್ಕೆ ಅಷ್ಟು ಮಾಡೋಣ. ಇನ್ನು ಕೆಲವು ಇಂಡಸ್ಟ್ರೀಸ್ ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡೋಣ. ಎಲ್ಲಾ ಕಡೆ ಲೆದರ್ ಇಂಡಸ್ಟ್ರೀಸ್ ಮತ್ತು ಕಾರ್‌ಪೆಂಟರಿಗೆ ಬಹಳ ಸ್ಕೋಪ್ ಇದೆ. ಜಮಖಾನ ಮಾಡುವ ಏರ್ಪಾಡು ಹೆಚ್ಚುಹೆಚ್ಚಾಗಿ ಮಾಡಿಸೋಣ : ಜೈಲಿನಲ್ಲಿ ಬಹಳ ಕೀಳುಮಟ್ಟದ ಆಹಾರ ಕೊಡುತ್ತಿದ್ದಾರೆ ಎಂದು ಹೇಳಿದರು. ಅದನ್ನು ವೆರಿಫೈ ಮಾಡಿಸುತ್ತೇನೆ. ಆಹಾರದ ತೂಕ ಕೂಡ they have increased it from 18 to 24 ounces.

ಶ್ರೀ ಟಿ. ಆರ್ ಶಾಮಣ್ಣ.—The prisoners earn a lot of skill. ಅವರು ರಿಲೀಸ್ ಆದಮೇಲೆ ಏನು ಮಾಡುತ್ತೀರಿ ?

ಶ್ರೀ ಡಿ. ದೇವರಾಜ್ ಅರಸ್.—ಅವರಿಗೆ ಕುಶಲ ಕೆಲಸ ಮಾಡುವುದು ಬರಲಿ ಎಂದು ನಾವು ಮಾಡಿಸುತ್ತಿದ್ದೇವೆ. ರಿಲೀಸ್ ಆಗಿ ಬಂದರೆ ಎಂಪ್ಲಾಯ್‌ಮೆಂಟ್ ಕೊಡಿಸೋಣ, ಇಲ್ಲದೆ ಹೋದರೆ ಕುಶಲ ಕೆಲಸ ಮಾಡುವುದಕ್ಕೆ ಬಂಡವಾಳ ಒದಗಿಸೋಣ. We must think of these things and act in that direction. ಈಗಾಗಲೇ ನಾನು ಎರಡೂಮುಕ್ಕಾಲು ಗಂಟೆಗಳ ಸಮಯವನ್ನು ತೆಗೆದುಕೊಂಡಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಜೈಲ್ ವಾರ್ಡನ್‌ಗಳಿಗೆ ಕೂಡ ಎಲ್ಲ ಸೌಲಭ್ಯಗಳನ್ನು ಒದಗಿಸಿ ಕೊಡಬೇಕು.

ಶ್ರೀ ಡಿ. ದೇವರಾಜ ಅರಸ್.—ವಾರ್ಡನ್‌ಗಳಿಗೆ ಸರಿಯಾಗಿ ಬಟ್ಟೆ ಕೊಡುತ್ತಿಲ್ಲ ಎಂಬುದಾಗಿ ಮಾನ್ಯ ಸದಸ್ಯರು ಹೇಳಿದರು. ಅದನ್ನೆಲಾ ಸರಿಪಡಿಸೋಣ. ತುಂಗಭದ್ರಾ ಬೋರ್ಡಿನ ಬಗ್ಗೆ ಮಾನ್ಯ ಸದಸ್ಯರಾದ ಸಿಂಗ್ ಅವರು ಹೇಳುತ್ತಾ ಅಲ್ಲಿಗೆ ಚೀಫ್ ಇಂಜಿನಿಯರ್‌ನ್ನು ನೇಮಕ ಮಾಡಬೇಕು, ನೀರನ್ನು ಬಿಡುವಾಗ ಮತ್ತು ವರ್ಕಿಂಗ್ ಟೇಬಲ್‌ನ್ನು ತಯಾರು ಮಾಡುವಾಗ ಎಲ್ಲರನ್ನೂ ಗಮನಕ್ಕೆ ತೆಗದುಕೊಂಡಿಲ್ಲ ಎಂಬುದಾಗಿ ಹೇಳಿದರು. I shall bear in mind. There are many other points. The hon. Members will pardon me if I am not able to answer all points. I have tried to answer particular points.

ಶ್ರೀ ಬಿ. ಇ. ರಾಮಯ್ಯ.—ಆಂಧ್ರ ಮತ್ತು ಮೈಸೂರು ಗಡಿಯ ವಿಷಯದಲ್ಲಿ ಸರ್ಕಾರದ ಉದ್ದೇಶ ಏನಿದೆ, ಸರ್ಕಾರದ ಪಾಲಿಸಿ ಏನು ಎಂಬುದನ್ನು ಹೇಳಬೇಕು ?

ಶ್ರೀ ಡಿ. ದೇವರಾಜ ಅರಸ್.—ಸಧ್ಯಕ್ಕೆ ಬಾರ್ಡರ್ ಎಲ್ಲಿ ಇದೆಯೋ ಅಲ್ಲಿಯೇ ಇರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಬೆಳಗಾಂ ನಗರದ ಕೆಲವರು ಬೆಳಗಾಂ ನಗರವನ್ನು ವಿಭಜನೆ ಮಾಡುವುದನ್ನು ವಿರೋಧಿಸಿ ಮಹಾರಾಷ್ಟ್ರ ಅಸೆಂಬ್ಲಿ ಬಳಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಮತ್ತು ಮೈಸೂರು ಮತ್ತು ಮಹಾರಾಷ್ಟ್ರದ ಗಡಿ ಬಗ್ಗೆ ಮಾತುಕತೆ ನಡೆಸಲು ತಮ್ಮನ್ನು ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ಶ್ರೀ ವಿ. ಪಿ. ನಾಯಕ್ ಅವರನ್ನು ಪ್ರಧಾನ ಮಂತ್ರಿಗಳು ಕರೆದಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಆದಕಾರಣ ಪ್ರಧಾನಮಂತ್ರಿಗಳು ಅದರ ಬಗ್ಗೆ ಏನಾದರು ಪತ್ರ ಬರೆದಿದ್ದಾರೆಯೋ ಎಂಬುದನ್ನು ತಿಳಿಸಬೇಕು ?

ಶ್ರೀ ಡಿ. ದೇವರಾಜ ಅರಸ್.—ಕೇಂದ್ರಸರ್ಕಾರದಿಂದ ಅಂಥಾದ್ದು ಏನೂ ಕಾಗದ ಬಂದಿಲ್ಲ. ಅಂಥಾದ್ದು ಏನಾದರು ಬಂದರೆ ತಮ್ಮ ಬಳಿ ಮಾತುಕತೆ ನಡೆಸಿ ನಂತರ ಹೋಗುತ್ತೇನೆ. I am not going to hide anything. You can rest assured. Let us face each problem as and when it comes. That is my way of approach. Now we have other pressing problems economic problems. Let us concentrate on them completely instead of diverting our minds to other problems. Let us not divert our mind from the immediate pressing problem. Such diversion may suit a few but I am not good at that art. I always look at things straight. There is what is called emotional diversion. Sometimes it suits politicians to divert the mind of the public. We are always good at diverting our minds to motional problems rather than tackle economic problems. That is why we are halting in our progress at every stage. ಆದ್ದರಿಂದ ಇಷ್ಟು ಹೇಳಿ ನಮ್ಮ ಈ ಸಭೆಯ ಮಾನ್ಯ ಸದಸ್ಯರು ಹಾಗೂ ಮಾನ್ಯ ಅಧ್ಯಕ್ಷರು ಇಷ್ಟು ಕಾಲ ಸಾವಧಾನವಾಗಿ ನಾನು ಹೇಳಿದ ಮಾತನ್ನೆಲ್ಲಾ ಲಾಲಿಸಿದ್ದಕ್ಕೆ ಮತ್ತು ನಾನು ಇಷ್ಟು ಮಾತನಾಡಲು ಸಮಾಧಾನಕರವಾದಂಥ ವಾತಾವರಣವನ್ನು ನೀವೆಲ್ಲಾ ಕಲ್ಪಿಸಿಕೊಟ್ಟಿದ್ದಕ್ಕೆ ತಮ್ಮೆಲ್ಲರನ್ನೂ ವಂದಿಸುತ್ತೇನೆ ಮತ್ತು ಅಧ್ಯಕ್ಷರನ್ನು ವಂದಿಸುತ್ತೇನೆ. ಕೊನೆಯದಾಗಿ ಒಂದು ಮನವಿಯನ್ನು ಮಾನ್ಯ ಸದಸ್ಯರಲ್ಲಿ ಮಾಡಿ ಕೊಂಡು ನನ್ನ ಮಾತನ್ನು ಮುಗಿಸುತ್ತೇನೆ. ಸರ್ಕಾರದ ರೀತಿ ನೀತಿ ಮತ್ತು ಕಾರ್ಯಕ್ರಮಗಳಲ್ಲಿ ಏನಾದರು ಲೋಪದೋಷಗಳಿದ್ದರೆ ಅದನ್ನು ಯಾವಾಗಲೂ ಹೇಳುವುದಕ್ಕೆ ತಮಗೆ ಅಧಿಕಾರವಿದೆ. ಲೋಪದೋಷಗಳಿದ್ದರೆ ಅದನ್ನು ಹೇಳಲಿ. ಅದರಿಂದ ನನಗೆ ಕೋಪವಿಲ್ಲ. ಏಕೆಂದರೆ ನಮ್ಮ ಬೆನ್ನು ನಮಗೆ ಕಾಣುವುದಿಲ್ಲ. ಅದಕ್ಕಾಗಿ ಎಲ್ಲೆಲ್ಲಿ ಏನೇನು ಲೋಪದೋಷಗಳು ನಡೆದಿವೆ ಎಂಬುದನ್ನು ನಮಗೆ ತೋರಿಸಿಕೊಡಬೇಕು. ಆ ಲೋಪದೋಷಗಳು ವೈಯಕ್ತಿಕವಾಗಿಯೇ ಇರಲಿ, ಸಾರ್ವತ್ರಿಕ ವಾಗಿಯೇ ಇರಲಿ, ಅವನ್ನು ಈ ಸಭೆಯಲ್ಲಿ ಹೇಳುವುದಕ್ಕೆ ಮುಂಚೆ ಮಾನ್ಯ ಸದಸ್ಯರು ಸಾಧ್ಯವಾದರೆ ನಮ್ಮಲ್ಲಿಗೆ ಬಂದು ಕೇಳಿದರೆ ಸಂತೋಷ. ಆಗ ನಾವು ಯಾವುದನ್ನು ಮರೆಮಾಚದೆ, ಏತಕ್ಕಾಗಿ ಆ ಕೆಲಸ ನಡೆದಿದೆ ಎಂದು ಹೇಳುವುದಕ್ಕೆ ಹಿಂತೆಗೆಯುವುದಿಲ್ಲ. ನಾವು ವಿವರಣೆ ಕೊಟ್ಟಮೇಲೂ ಕೂಡ ನಾವು ಮಾಡಿರುವುದು ದುರುದ್ದೇಶದಿಂದ ಎಂಬುದು ತಮಗೆ ಮನವರಿಕೆಯಾದರೆ, ಅದನ್ನು ಮಾಡಿದ್ದು ಸರಿಯಲ್ಲ ಎಂದು ಹೇಳುವುದಕ್ಕೆ ನಿಮಗೆ ಅಧಿಕಾರವಿದೆ. ಕ್ರಿಟಿಸೈಜ್ ಮಾಡಬಹುದು. ಮುಖ್ಯವಾಗಿ ಇಂಡಿವಿಜುಯಲ್ ವಿಚಾರ ಬಂದಾಗ, ದಯಮಾಡಿ ಅದರ ಬಗ್ಗೆ ನನ್ನ ಪ್ರಾರ್ಥನೆ ಏನೆಂದರೆ, ಅದನ್ನು ವೆರಿಫೈ ಮಾಡಿ ಆಮೇಲೆ ಅದನ್ನು ಸಭೆಯಲ್ಲಿ ಹೇಳಿದರೆ ಅದರಿಂದ ಸರ್ವರಿಗೂ ಕ್ಷೇಮ ಮತ್ತು ನಮಗೂ ಉಪಯೋಗವಾಗುತ್ತದೆಂದು ಹೇಳುತ್ತೇನೆ. ನಾವುಗಳು ಸದಸ್ಯರಾಗಿ ಪ್ರಮಾಣವಚನ ಸ್ವೀಕಾರ ಮಾಡಿದ್ದೇವೆ; ಮತ್ತು ಮಂತ್ರಿಗಳಾಗಿ ಪ್ರಮಾಣವಚನ ಸ್ವೀಕಾರ ಮಾಡಿದ್ದೇವೆ. ಒಬ್ಬ ವ್ಯಕ್ತಿಗೂ ಇನ್ನೊಬ್ಬ ವ್ಯಕ್ತಿಗೂ ತಾರತಮ್ಯ ಇಲ್ಲದಂತೆ ಸರ್ಕಾರದ ಕೆಲಸ ನಡೆಸ ಬೇಕು, ಕೆಲವೊಂದು ವೈಷಮ್ಯ ಇಲ್ಲದ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಬೇಕು ಎಂಬುದಾಗಿ ನಾವು ಪ್ರಮಾಣವಚನ ಸ್ವೀಕಾರ ಮಾಡಿದ್ದೇವೆ. ನ್ಯಾಯ ಮತ್ತು ನೀತಿಯನ್ನು ಎತ್ತಿ ಹಿಡಿಯುತ್ತೇವೆಂದು ಪ್ರಮಾಣವಚನ ತೆಗೆದುಕೊಂಡಿದ್ದೇವೆ. ಅದೇ ರೀತಿ ನಡೆಯುವುದಕ್ಕೆ ನಾವು ಸರ್ವತಃ ಪ್ರಯತ್ನ ಮಾಡುತ್ತೇವೆಂದು ಮತ್ತೊಮ್ಮೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ಈಗ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರವನ್ನು ಮುಗಿಸಿದ್ದಾರೆ. ಎರಡು ವಿಚಾರಗಳನ್ನು ಸವಿಸ್ತಾರವಾಗಿ ಪ್ರಸ್ತಾಪ ಮಾಡುತ್ತಾ ರೆಂದು ನಾನು ಕಾತುರವಾಗಿದ್ದೆ. ಆದರೆ ಅದರ ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ಮೊದಲನೆಯ ದೆಂದರೆ ಮೈಸೂರು ಮಹಾರಾಜರಿಗೆ ಸಂಬಂಧಪಟ್ಟ ಮೂರು ಅರಮನೆಗಳು ಬೆಂಗಳೂರು, ಮೈಸೂರು ಮತ್ತು ನೀಲಗಿರಿಯಲ್ಲಿ ಏನಿವೆ, ಅವುಗಳ ಮೇನ್‌ಟೆನೆನ್ಸ್‌ಗೆ ಸರ್ಕಾರದವರು ಪ್ರತಿ ವರ್ಷ 70 ಸಾವಿರ ರೂಪಾಯಿಗಳನ್ನು ಕೊಟ್ಟುಕೊಂಡು ಬರುತ್ತಿದ್ದಾರೆ. ಬೆಂಗಳೂರು ಮತ್ತು ನೀಲಗಿರಿಯಲ್ಲಿರುವ ಅರಮನೆಗಳನ್ನು ಹೇಗೆ ಬೇಕಾದರು ಮಹಾರಾಜರು ಸ್ವಂತ ಸ್ವತ್ತಾಗಿ ಉಪಯೋಗಿಸಿಕೊಳ್ಳುವುದಕ್ಕೆ ಕೇಂದ್ರಸರ್ಕಾರದವರು ಆದೇಶ ಕೊಟ್ಟಿರುವುದು ನಿಜವೇ ? ಮತ್ತು ಮೈಸೂರು ಅರಮನೆಯನ್ನು ಮ್ಯೂಸಿಯಂ ಆಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆ ಎಂದು ನಾನು ಕೇಳುತ್ತಿದ್ದೇನೆ ; ಅದೂ ಕೂಡ ನಿಜವೇ ? ಸಮತಾವಾದ ಸಮಾಜವನ್ನು ರಚನೆ ಮಾಡುವ ಬಗ್ಗೆ ಅಡಿಗಲ್ಲಿಟ್ಟಿರುವ ಶ್ರೀಮಾನ್ ದೇವರಾಜ ಅರಸ್ ಅವರು ಇದರ ಬಗ್ಗೆ ಸ್ಪಷ್ಟವಾದ ಹೇಳಿಕೆ

ಕೊಡಬೇಕು ? ಎರಡನೆಯ ಪ್ರಶ್ನೆ ಎಂದರೆ, ನಮ್ಮ ರಾಜ್ಯದಲ್ಲಿ ಜಾತೀಯತೆ ಇರಬಾರದು, ಅದನ್ನು ತೊಡೆದುಹಾಕಬೇಕು, ಎಲ್ಲ ವರ್ಗದ ಜನರಿಗೂ ಆಡಳಿತದಲ್ಲಿ ಮತ್ತು ಅಧಿಕಾರದಲ್ಲಿ ಸಮನಾದ ಹಕ್ಕುಗಳಿರಬೇಕು ಎಂದು ವಾದ ಮಾಡುವ ನೀವು, ಮೈಸೂರು ರಾಜ್ಯದಲ್ಲಿ ಒಕ್ಕಲಿಗರು, ಲಿಂಗಾಯಿತರು, ಕ್ರಿಶ್ಚಿಯನರು, ಮುಸಲ್ಮಾನರು, ಬ್ರಾಹ್ಮಣರು ಇನ್ನೂ ಮುಂತಾದ ಜನಾಂಗದವರು ಏನಿದ್ದಾರೆ, ಅವರ ಪ್ರಜಾಸಂಖ್ಯೆಗೆ ಅನುಗುಣವಾಗಿ ಸರ್ಕಾರದಲ್ಲಿ ಒಂದನೇ ದರ್ಜೆಯಿಂದ ಹಿಡಿದು ನಾಲ್ಕನೇ ದರ್ಜೆಯವರೆಗೆ ಕೆಲಸಗಳನ್ನು ಕೊಡಲಾಗಿದೆಯೇ ಅಥವಾ ಯಾವ ಯಾವ ಜಾತಿಯವರು ಯಾವ ಯಾವ ದರ್ಜೆಗಳಲ್ಲಿ ಎಷ್ಟೆಷ್ಟು ಜನ ಇದ್ದಾರೆಂಬ ಪಟ್ಟಿಯನ್ನು ಈ ಸಭೆಗೆ ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಜನಾಂಗದವರಿಗೆ ಬಿಟ್ಟರೆ, ಬೇರೆ ಜನಾಂಗದವರಿಗೆ ಜಾತಿ ಆಧಾರದ ಮೇಲೆ ಕೆಲಸಗಳನ್ನು ಕೊಡುತ್ತಿಲ್ಲ ಮತ್ತು ಆ ರೀತಿ ಕೊಡುವುದಕ್ಕಾಗುವುದಿಲ್ಲ ಅಲ್ಲದೆ ಯಾವ ಯಾವ ಜನಾಂಗದವರು ಸರ್ಕಾರೀ ಹುದ್ದೆಗಳಲ್ಲಿ ಎಷ್ಟೆಷ್ಟು ಜನರಿದ್ದಾರೆಂಬ ಬಗ್ಗೆ ಪಟ್ಟಿಯನ್ನು ಇಟ್ಟಿಲ್ಲ.

ಎರಡನೆಯ ಪ್ರಶ್ನೆಗೆ ಉತ್ತರ ಕೊಡುವುದಾದರೆ, 1950ನೇ ಇಸವಿಯಲ್ಲಿ ಎಲ್ಲ ಸಂಸ್ಥಾನಗಳು ಭಾರತ ಸರ್ಕಾರಕ್ಕೆ ವಿಲೀನವಾದ ಮೇಲೆ, ಕೇಂದ್ರ ಸರ್ಕಾರಕ್ಕೂ ಸಂಸ್ಥಾನಗಳ ಸರ್ಕಾರಗಳಿಗೂ ಏನು ತೀರ್ಮಾನವಾಗಿತ್ತೋ ಅದರಂತೆ ಹೋಗಲಾಗುತ್ತಿದೆ. ಆ ಒಂದು ತೀರ್ಮಾನದ ಪ್ರಕಾರ ರಾಜರುಗಳು ಅರಮನೆ ಸ್ವತ್ತನ್ನು ಅನುಭವಿಸಿಕೊಂಡು ಬರತಕ್ಕದ್ದು, ಆದರೆ ಅದನ್ನು ಪರಭಾರೆ ಮಾಡಬಾರದೆಂದು ತೀರ್ಮಾನವಾಗಿತ್ತು. ಅದರಂತೆ ಅವರು ವಂಶೀಯವಾಗಿ ಅನುಭವಿಸಿಕೊಂಡು ಬರುತ್ತಿದ್ದರು. ಆದರೆ ಇತ್ತೀಚೆಗೆ ಕೇಂದ್ರಸರ್ಕಾರದವರು ರಾಜಧನವನ್ನು ರದ್ದು ಮಾಡಿದ ಮೇಲೆ ರಾಜರುಗಳು ತಮ್ಮ ಸ್ಥಿತಿಗತಿಗಳ ಬಗ್ಗೆ ಕೇಂದ್ರಸರ್ಕಾರದೊಡನೆ ವ್ಯವಹಾರ ನಡೆಸಿದ್ದಾರೆ. ತಮ್ಮ ಜೀವನೋಪಾಯಕ್ಕಾಗಿ ಒಂದು ಮಾರ್ಗವನ್ನು ಮಾಡಿಕೊಳ್ಳುವ ಬಗ್ಗೆ ರಾಜರುಗಳು ಕೇಂದ್ರಸರ್ಕಾರದೊಡನೆ ವ್ಯವಹಾರ ನಡೆಸುತ್ತಿದ್ದಾರೆ.

3-00 P. M.

ಎರಡು ವರ್ಷಗಳಿಂದ ಇದು ವ್ಯವಹಾರ ನಡೆಯುತ್ತಿತ್ತು. ಇನ್‌ಎಲಿಯನಬಿಲಿಟಿ ಕ್ಲಾಜ್ ಪ್ರಕಾರ ಅದನ್ನು ಪರಭಾರೆ ಮಾಡಬಾರದು, ಅದ್ದರಿಂದ ಆ ಬಗ್ಗೆ ಏನು ಮಾಡಬೇಕು, ನಿಮ್ಮ ಅಭಿಪ್ರಾಯ ಹೇಳಿ ಎಂದು ಕೇಳಿದ್ದರು. ಅವರ ಅಭಿಪ್ರಾಯದಲ್ಲಿ ಅದನ್ನು ಯಾರಿಗೂ ಕೊಡಬಾರದು, ಅದು ಇದ್ದಹಾಗೆಯೇ ಇರಬೇಕೆಂದು ಹೇಳಿದ್ದಾರೆ. ಆಮೇಲೆ ಕೇಂದ್ರ ಸರ್ಕಾರದವರು ಅವರಿಗೆ ಪತ್ರ ಬರೆದು ನಿಮ್ಮ ಅಭಿಪ್ರಾಯ ಹೇಗೇ ಇದ್ದರೂ ಅದನ್ನು ಕೊಡಲೇ ಬೇಕಾಗುತ್ತದೆ, ನಾವು ಅದನ್ನು ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದರು. ಆ ಮೇಲೆ ರಾಜ್ಯಪಾಲರ ಆಳ್ವಿಕೆಯಲ್ಲಿ ಅರಮನೆಗಳ ಪರಭಾರೆಗೆ ಒಪ್ಪಿಗೆ ಕೊಟ್ಟಿದ್ದರು. ಮತ್ತು ಅದನ್ನು ಮಾಜಿ ರಾಜರು ಮಾರಬೇಕಾಗಿದ್ದರೆ ಅದನ್ನು ಸರ್ಕಾರಕ್ಕೇ ಕೊಡಬೇಕು ಎಂದು ಅವರು ತೀರ್ಮಾನ ಕಳುಹಿಸಿದ್ದರು. ಆ ರೆಕಾರ್ಡ್ ಇದೆ. ಆ ಮೇಲೆ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಪುನಃ ಈ ವಿಷಯದ ಬಗ್ಗೆ ಕೇಂದ್ರ ಸರ್ಕಾರ ರಾಜ್ಯಸರ್ಕಾರದ ಅಭಿಪ್ರಾಯವನ್ನು ಕೇಳಿದಾಗ ನಾವು ಅದು ನಮಗೆ ನೇರವಾಗಿ ಸಂಬಂಧವಿಲ್ಲ, ಈ ವಿಷಯ ಕೇಂದ್ರ ಸರ್ಕಾರದವರಿಗೂ ಮತ್ತು ಮಹಾರಾಜರಿಗೂ ಸಂಬಂಧಪಟ್ಟ ವಿಷಯ, ನಿಮ್ಮ ನಡುವಿನ ತೀರ್ಮಾನಕ್ಕೆ ನಮ್ಮ ಅಭ್ಯಂತರವಿಲ್ಲ, ನೀವು ಯಾವರೀತಿ ಮಾಡಿದರೂ ಅದಕ್ಕೆ ನಮ್ಮ ಅಭ್ಯಂತರವಿಲ್ಲ ಎಂದು ನಾವು ಹೇಳಿದ್ದೇವೆ. ಮೈಸೂರು ಪಟ್ಟಣದಲ್ಲಿರತಕ್ಕ ಅರಮನೆಯ ಬಗ್ಗೆ ನಾವು ಏನು ಶಿಫಾರಸ್ಸು ಮಾಡಿದ್ದೇವೆ ಎಂದರೆ ಅದನ್ನು ಮಹಾರಾಜರಿಂದ ಯಾರು ಕೊಂಡುಕೊಂಡರೂ ಅದು ಪ್ರಯೋಜನವಾಗುವುದಿಲ್ಲ, ಮತ್ತು ಅದನ್ನು ಬೇರೆಯವರು ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಅದಕ್ಕೆ ಒಂದು ಟ್ರಸ್ಟ್ ಮಾಡಿ ಅದರ ಆಡಳಿತಕ್ಕೆ ಒಳಪಡಿಸಬೇಕೆಂದು ಸೂಚಿಸಿದ್ದೇವೆ. ಟ್ರಸ್ಟಿನ ಒಡೆತನಕ್ಕೆ ಸೇರಿದರೆ ಪರೋಕ್ಷವಾಗಿ ಅದು ಸರ್ಕಾರದ ಹತೋಟಿಯಲ್ಲಿಯೂ ಇರುತ್ತದೆ. ಅದ್ದರಿಂದ ಆ ಅರಮನೆಯನ್ನು ಒಂದು ಶೋ ಪೀಸಾಗಿ ಇಡಬೇಕು ; ಅದನ್ನು ಹೊರಗಡೆ ದೇಶದ ಪ್ರವಾಸಿ ಜನರು ಬಂದು ನೋಡಿ ಇದು ಬಹಳ ಉತ್ತಮವಾದ ಕಲೆ ಎಂದು ಹೇಳಿದ್ದಾರೆ. ಅದು ಒಳ್ಳೆಯ ಪ್ರವಾಸಿ ಆಕರ್ಷಣೆ ಆಗುತ್ತದೆ. ಅದ್ದರಿಂದ ಅದನ್ನು ಹಾಗೆ ಮಾಡುವುದು ಒಳ್ಳೆಯದು ಎಂದು ನಾವು ಸಲಹೆ ಕೊಟ್ಟಿದ್ದೇವೆ.

MADAM SPEAKER.—I now put the Demands to the vote of the House. The question is :

"That a sum not exceeding Rs. 5,94,23,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 10 'Genaral Administration'."

"That a sum not exceeding Rs. 10,84,00,000 inclusive of the sum granted 'on account', be granted to the Government to defray the charges which will come in course of payment during the year for the period ending 31st day of March 1973, in respect of Demand No. 13 'police'."

"That a sum not exceeding Rs. 17,05,00,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 29, 'I.N E. and D. works (Commercial)'."

"That a sum not exceeding Rs. 4,51,70,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973 in respect of Demand No. 30 'I.N.E. and D. Works (Non-Commercial)'."

"That a sum not exceeding Rs. 35,12,80,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 45-'Capital Outlay on Irrigation, Navigaion, Embankment and Drainage Works (Commercial)'."

"That a sum not exceeding Rs. 96,00,000 inclusive of the sum granted 'on account', be granted to the Government to defray the chargs which will come in course of payment during the financial year for the period ending 31st day of March 1973, in respect of Demand No. 46, 'Capital outlay on I.N.E. and D. Works (Non-Commercial)'."

"That a sum not exceeding Rs. 1,04,50,000 inclusive of the sum granted 'on account' be granted to the Government to defray the charges which will come in course of payment during the financial year for the period ending 31st day of March 1973, in respect of Demand No. 12, 'Jails'."

The motions were adopted.

DEMAND No. 23 (34) Co-operation

MADAM SPEAKER.—Now, the Hon. Minister for Co-operation may move the motion for demands for grants.

Sri A. SHANKAR ALVA (Minister for Co-operation).—On the recommendation of the Governor, I beg to move :

> " That a sum not exceeding Rs. 3,20,22,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 23 'Co-operation'."

MADAM SPEAKER.—Motion moved :

> " That a sum not exceeding Re. 3,20,22,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 23, 'Co-operation'."

Hon. Member Sri Kagodu Thimmappa to initiate the debate.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ ಮಾನ್ಯ ಸಹಕಾರ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಸಹಕಾರ ಇಲಾಖೆಯ ಬೇಡಿಕೆಯನ್ನು ನಾನು ವಿರೋಧಿಸುತ್ತಾ ನನ್ನ ವಿರೋಧವನ್ನು ಪುಷ್ಟೀಕರಿಸುವ ದೃಷ್ಟಿಯಿಂದ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ, ನಮ್ಮ ರಾಷ್ಟ್ರದಲ್ಲಿ ಸಹಕಾರ ಚಳುವಳಿ ಬಹಳ ಹಿಂದಿನಿಂದ ಶತಮಾನಗಳಿಂದ ನಡೆದು ಬಂದಿದೆ. ಆದರೆ ಈ ಸಹಕಾರ ಚಳುವಳಿ ನಡೆದುಬಂದ ದೀರ್ಘವಾದ ಕಲಾವಧಿಯನ್ನು ನಾವು ನಿರೀಕ್ಷಣೆ ಮಾಡಿ ನೋಡಿದರೆ ಅದರಿಂದ ಎಷ್ಟರಮಟ್ಟಿನ ಒಂದು ಅನುಕೂಲ ಆಗಬೇಕಾಗಿತ್ತೋ ಅಷ್ಟು ಅನುಕೂಲ ಆಗಿಲ್ಲ ಎನ್ನತಕ್ಕಂಥಾದ್ದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಸಹಕಾರ ಸಂಘಗಳು ಗ್ರಾಮಾಂತರ ಪ್ರದೇಶದ ಜನರ ಆರ್ಥಿಕ ಮಟ್ಟವನ್ನು ಸುಧಾರಿಸುವ ದೃಷ್ಟಿಯಿಂದ ವ್ಯವಸಾಯಗಾರರು ತಮ್ಮ ಕಸಬನ್ನು, ತಮ್ಮ ವೃತ್ತಿಯನ್ನು ಲಾಭಕರವಾಗಿ ಮಾಡಿಕೊಳ್ಳುವ ದೃಷ್ಟಿಯಿಂದ ತಮ್ಮ ನೆರವನ್ನು ಯಾವ ಮಟ್ಟದಲ್ಲಿ ನೀಡಬೇಕಾಗಿತ್ತೋ ಆ ಮಟ್ಟದಲ್ಲಿ ನೀಡುತ್ತಾ ಇಲ್ಲ. ರೈತರಿಗೆ ಸಹಕಾರ ಸಂಘ ಮತ್ತು ಪಂಚಾಯಿತಿ ಎರಡು ಕಣ್ಣುಗಳು ಇದ್ದಹಾಗೆ. ಇವೊತ್ತು ಆ ಕಣ್ಣುಗಳು ಕುರುಡು ಆಗಿವೆ. ಇವೊತ್ತು ಯಾವ ಒಂದು ಮೂಲಭೂತವಾದ ಆರ್ಥಿಕ ವ್ಯವಸ್ಥೆಯ ಕ್ರಮವನ್ನು ಸಹಕಾರ ಸಂಘಗಳು ಪಡೆದುಕೊಂಡಿವೆಯೋ ಅವುಗಳು ಇವೊತ್ತು ಅತ್ಯಂತ ಕೆಟ್ಟ ಸ್ಥಿತಿಯಲ್ಲಿ ನಡೆಯುತ್ತಿವೆ. ಅದಕ್ಕೆ ಮೂಲಭೂತವಾಗಿ ಸರ್ಕಾರವೂ ಕೂಡ ಹೊಣೆಗಾರಿಕೆಯಾಗಿದೆ. ಈ ಸಹಕಾರಿ ಕ್ಷೇತ್ರದಲ್ಲಿ ನಾವು ಏನು ಒಂದು ಒಳ್ಳೆಯ ವ್ಯವಸ್ಥೆಯನ್ನು ಕಾಣಬೇಕಾಗಿತ್ತೋ ಅದನ್ನು ಕಾಣುವುದಕ್ಕೆ ಆಗುತ್ತಾ ಇಲ್ಲ. ಈ ದಿವಸ ಆಗತಕ್ಕಂಥಾ ರೀತಿ ನೀತಿಗಳನ್ನು ನೋಡಿದರ ಸಹಕಾರಿ ಸಂಘಗಳ ಅಂಧೋಳನದಲ್ಲಿ ಜನಗಳು ಏನು ಒಂದು ಆಶೆಯನ್ನು ಇಟ್ಟುಕೊಂಡಿದ್ದರೋ ಅದನ್ನು ಕಳೆದುಕೊಳ್ಳತಕ್ಕಂಥಾ ಪರಿಸ್ಥಿತಿ ಬಂದಿದೆ. ಮೂಲ ಭೂತವಾಗಿ ಸರ್ಕಾರದ ಆಡಳಿತ ಒಂದು ಕಡೆ, ಇನ್ನೊಂದು ಕಡೆ ಜನರು ಪ್ರಾಮಾಣಿಕವಾಗಿ ಇದರಲ್ಲಿ ಭಾಗವಹಿಸತಕ್ಕದು. ಇವು ದೊಡ್ಡ ಪ್ರಶ್ನೆಗಳಾಗಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥಾ ಜನರು ತಮ್ಮ ಸೌಲಭ್ಯಗಳನ್ನು ಪಡೆಯಬೇಕಾದರೆ ಅತ್ಯಂತ ಹತ್ತಿರ ಸಂಸ್ಥೆಗಳು ಎಂದರೆ ಸಹಕಾರ ಸಂಘಗಳು. ಸಹಕಾರ ಸಂಘಗಳಲ್ಲಿ ಎಲ್ಲಿ ನೋಡಿದರೂ ಕೂಡ ಹಣದ ದುರುಪಯೋಗ, ಅಧಿಕಾರದ ದುರುಪಯೋಗ ಈ ಪೆಟ್ಟುಗಳಿಗೆ ಒಳಗಾಗಿವೆ. 4 ಸಹಕಾರ ಸಂಘಗಳನ್ನು ತೆಗೆದುಕೊಂಡರೆ 3 ಸಹಕಾರ ಸಂಘಗಳು ಹಣದ ದುರುಪಯೋಗದ ಅಪಾದನೆಗೆ ಒಳಗಾಗಿವೆ. ಇದರಿಂದ ಇವುಗಳ ಆಡಳಿತ ವ್ಯವಸ್ಥೆ ಎಷ್ಟು ಕೆಟ್ಟಿದೆ ಎಂಬುದನ್ನು ಸೂಕ್ಷ್ಮವಾಗಿ ನೋಡಬಹುದು. ಇಂಥಾ ಪರಿಸ್ಥಿತಿ ಸಹಕಾರ ಸಂಘಗಳಲ್ಲಿ ಆಗಬೇಕಾದರೆ ಯಾವುದೇ ಲೋಪದೋಷಗಳು ಆಗಿದ್ದರೂ ಅವುಗಳನ್ನು ಕಂಡುಹಿಡಿಯದಿದ್ದರೆ ಯಾವ ಒಂದು ಉದ್ದೇಶದಿಂದ ಈ ಸಹಕಾರಿ ಅಂಧೋಳನ ಪ್ರಾರಂಭವಾಗಿದೆಯೋ ಆ ಅಂಧೋಳನಕ್ಕೆ ಕೊಡಲಿಯ ಏಟು ಹಾಕಿದಂತಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರದ ಗಮನ

(ಶ್ರೀ ಕಾಗೋಡು ತಿಮ್ಮಪ್ಪ)

ವನ್ನು ಸೆಳೆಯುವುದಾದರೂ ಕೂಡ ನಮ್ಮ ಸಹಕಾರಿ ಚಳುವಳಿ ಯಾವ ದಿಶೆಯಲ್ಲಿ ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎಂಬುದನ್ನು ಪರೀಕ್ಷೆ ಮಾಡಿ ನೋಡಿದಾಗ ಅವು ಹೇಗೆ ನಡೆಯುತ್ತಿವೆ ಎಂದರೆ, ಕೊಟ್ಟಿರುವ ಹಣವನ್ನು ಪ್ರಾಮಾಣಿಕವಾಗಿ ವಿತರಣೆ ಮಾಡುವುದಿಲ್ಲ; ಸಹಕಾರ ಸಂಘಗಳಿಗೆ ಬಂದಿರತಕ್ಕ ಹಣದಲ್ಲಿ ದುರುಪಯೋಗ ಮಾಡುವ ಪ್ರಕರಣಗಳು ಇವೆಯೆಂದು ಕಂಡುಬಂದರೂ ಕೂಡ ಅಧಿಕಾರಿಗಳು ಕೂಡ ಸಹಕಾರ ಸಂಘಗಳ ಮೇಲೆ ಎಷ್ಟರಮಟ್ಟಿಗೆ ಹತೋಟಿಯನ್ನು ಇಟ್ಟುಕೊಳ್ಳಬೇಕೋ ಅಷ್ಟರ ಮಟ್ಟಿನ ಹತೋಟಿಯನ್ನು ಪ್ರಾಮಾಣಿಕವಾಗಿ ಇಟ್ಟುಕೊಂಡಿಲ್ಲ. ಸಹಕಾರ ಸಂಘಗಳಲ್ಲಿ ಹಣ ದುರುಪಯೋಗವಾದದ್ದು 5 ವರ್ಷ 10 ವರ್ಷಗಳ ಮೇಲೆ ಬೆಳಕಿಗೆ ಬರುತ್ತವೆ. ಸರ್ವೇ ಸಾಮಾನ್ಯವಾಗಿ ಆಡಿಟ್ ಆದಂತಹ ವರ್ಷದಲ್ಲಿಯೇ ಹಣ ದುರುಪಯೋಗವಾಗಿರುವುದು ಕಂಡು ಬರುತ್ತಿದೆ. ಹಾಗಾದರೆ ಪ್ರತಿವರ್ಷವೂ ಕೂಡ ಸಹಕಾರ ಸಂಘಗಳ ಆಡಿಟ್‌ಅನ್ನು ಏತಕ್ಕೆ ಮಾಡುತ್ತೀರಾ ಇದನ್ನು ಯಾರು ಆಡಿಟ್ ಮಾಡುತ್ತಾರೆ? ಆಡಿಟ್ ಮಾಡಿದಂತಹ ವರ್ಷದಲ್ಲಿ ಹಣ ದುರುಪಯೋಗ ಆಗಿದ್ದರೆ ಆಡಿಟ್ ಏತಕ್ಕೆ ಮಾಡಬೇಕು ಎನ್ನುವ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಹಾಗಾದರೆ ಸಹಕಾರ ಇಲಾಖೆಯಲ್ಲಿ ಇರತಕ್ಕ ಸೂಪರ್‌ವೈಜರ್ ಆಗಲೀ, ಆಡಿಟರ್ ಆಗಲಿ ಯಾವರೀತಿ ಕೆಲಸ ಮಾಡುತ್ತಾರೆ, ಅವರ ಮೇಲೆ ಯಾವ ರೀತಿಯ ಹಿಡಿತವನ್ನು ಇಟ್ಟುಕೊಂಡಿದ್ದಾರೆ ಎನ್ನುವ ಪ್ರಶ್ನೆಯನ್ನು ಕೇಳಬೇಕಾಗಿದೆ. ನಮ್ಮ ತಾಲ್ಲೂಕಿನಲ್ಲಿ

(MR. DEPUTY SPEAKER in the Chair)

ಕೆಳದಿಯಲ್ಲಿ ಒಂದು ಸೊಸೈಟಿ ಇದೆ. ಅಲ್ಲಿ 30 ಸಾವಿರ ರೂಪಾಯಿ ಈಗಾಗಲೇ ಮುಳುಗಿ ಹೋಗಿದೆ. ಕಳೆದ 5—6 ವರ್ಷಗಳಿಂದ ಇದು ನಡೆದು ಬಂದಿದೆ. ಪ್ರತಿಯೊಂದು ವರ್ಷದಲ್ಲಿಯೂ ಆಡಿಟ್ ಆಗಿದೆ. ಹೀಗೆ ಆಡಿಟ್ ಆಗಿದ್ದರೂ ಏಕೆ ಅದನ್ನು ಪತ್ತೆ ಮಾಡಿಲ್ಲ? ಇದಕ್ಕೆ ಕಾರಣವೇನೆಂದರೆ, ನಿಮ್ಮ ಆಡಿಟರ್ಸ್ ಕೂಡ ಆ ಸೊಸೈಟಿಗಳಿಗೆ ಹೋಗುವುದಿಲ್ಲ. ಅಲ್ಲಿರತಕ್ಕ ಸ್ಟಾಕನ್ನು ಮತ್ತು ಹಣವನ್ನು ಆಡಿಟರುಗಳು ಖುದ್ದಾಗಿ ಪರಿಶೀಲನೆ ಮಾಡುವುದಿಲ್ಲ. ಅದರ ಬದಲು ಅವರು ಯಾವುದೋ ಒಂದು ಜಿಲ್ಲಾ ಕೇಂದ್ರದಲ್ಲಿ ಕುಳಿತುಕೊಂಡು ರಿಜಿಸ್ಟರುಗಳನ್ನು ತರಿಸಿಕೊಂಡು ಆಡಿಟ್ ಮಾಡುತ್ತಾರೆ. ಯಾರೂ ಸೆಕ್ರೆಟರಿಯವರೋ ಅಥವಾ ಅಧ್ಯಕ್ಷರೋ ಕಾಗದ ಪತ್ರಗಳನ್ನು ತಂದುಕೊಟ್ಟಿದ್ದನ್ನು ಆಡಿಟ್ ಮಾಡಿ ರಿಪೋರ್ಟು ಬರೆಯುತ್ತಾರೆಂದು ಕಾಣುತ್ತದೆ. ಹೀಗೆ ಅದರ ಇಂಥ ಸೊಸೈಟಿಗಳ ಪರಿಸ್ಥಿತಿ ಏನಾಗಬಹುದೆಂಬುದನ್ನು ತಾವು ಯೋಚನೆ ಮಾಡಬೇಕು. ನಮ್ಮ ರಾಜ್ಯದಲ್ಲಿ 19 – 20 ಸಾವಿರದಷ್ಟು ಸಹಕಾರ ಸಂಘಗಳು ಇವೆ. ಆದರೆ ಅವುಗಳು ನಡೆದುಕೊಂಡು ಹೋಗತಕ್ಕ ರೀತಿಯು ಏನೂ ತೃಪ್ತಿಕರವಾಗಿಲ್ಲ. ಅದರಲ್ಲಿ ಕನಿಷ್ಟಪಕ್ಷ 50 ಪರ್‌ಸೆಂಟ್ ಸೊಸೈಟಿಗಳು ಹಣ ದುರುಪಯೋಗದ ಅಪಾದನೆಗೆ ಒಳಗಾಗಿವೆ. ಈ ಇಲಾಖೆಯು ಇವತ್ತು ಮೂರು ಕೋಟಿಗಿಂತಲೂ ಹೆಚ್ಚು ಹಣವನ್ನು ಇದಕ್ಕೋಸ್ಕರ ಖರ್ಚು ಮಾಡುತ್ತಿದೆ. ಅಲ್ಲಿ ಅಗತ್ಯವಾದಂತಹ ಸುಪರ್‌ವೈಸರುಗಳು ಇದ್ದಾರೆ, ಆಡಿಟರ್ಸ್ ಇದ್ದಾರೆ—ಎಲ್ಲಾ ಇದ್ದಾರೆ. ಆದರೂ ಸರಿಯಾಗಿ ನಡೆಯುವುದಿಲ್ಲ. ಪ್ರತಿಯೊಂದು ತಾಲೂಕು ಮಟ್ಟದಲ್ಲಿಯೂ ಅಸಿಸ್ಟಾಂಟ್ ರಿಜಿಸ್ಟ್ರಾರ್ ಇದ್ದಾರೆ. ಅದರ ಜೊತೆಗೆ ಇನ್ನಿತರ ಸಿಬ್ಬಂದಿವರ್ಗಗಳು ಎಷ್ಟೋ ಇವೆ. ಇಷ್ಟು ಇದ್ದರೂ ಈ ಸಹಕಾರೀ ಸಂಘಗಳ ಮೇಲೆ ನೇರವಾದಂತಹ ಹತೋಟಿಯನ್ನು ಇಟ್ಟುಕೊಳ್ಳದೆ ಹೋದರೆ ಇದಕ್ಕೆ ಯಾರು ಹೊಣೆ? ಇವೊತ್ತಿನ ದಿವಸ ಸಹಕಾರಿ ಸಂಘಗಳಲ್ಲಿ ಹಣದ ದುರುಪಯೋಗವಾಗಿದ್ದರೆ ಅದಕ್ಕೆ ನಿಮ್ಮ ಸೊಸೈಟಿಗಳ ರಿಜಿಸ್ಟ್ರಾರವರು, ಸೂಪರ್‌ವೈಸರ್ಸ್ ಮತ್ತು ಇತರ ಅಧಿಕಾರಿಗಳೇ ಕಾರಣವೆಂದು ಹೇಳುತ್ತೇನೆ.

ಒಂದು ವರ್ಷದಲ್ಲಿ ಎಷ್ಟು ಸೊಸೈಟಿಗಳು ಸರಿಯಾಗಿ ವಸೂಲು ಮಾಡುತ್ತಿದೆ, ಮತ್ತು ಎಷ್ಟು ಸೊಸೈಟಿಗಳು ಲುಕ್ಸಾನುಗಳಲ್ಲಿ ನಡೆಯುತ್ತಿವೆ ಎಂಬುದನ್ನು ಪರಿಶೀಲನೆ ಮಾಡಬೇಕು. ಇದನ್ನು ಪೂರ್ಣವಾಗಿ ಆಲೋಚನೆ ಮಾಡಬೇಕು. ಇವೊತ್ತಿನ ದಿವಸ ಇದೇ ಪರಿಸ್ಥಿತಿಯನ್ನು ಬೆಳೆಯುವುದಕ್ಕೆ ಬಿಟ್ಟರೆ ಇಡೀ ಸಹಕಾರ ಚಳವಳಿಯೇ ಕಳಚಿ ಬೀಳತಕ್ಕ ಪರಿಸ್ಥಿತಿ ಬರುತ್ತದೆ. ಇವೊತ್ತಿನ ದಿವಸ ಈ ಸಹಕಾರೀ ಚಳವಳಿಯಲ್ಲಿ ಎಷ್ಟು ಜನರು ಪಾಲ್ಗೊಂಡಿದ್ದಾರೆ ಅಂದರೆ ಸುಮಾರು ಒಂದು ಸಾವಿರ ಜನರಲ್ಲಿ ಕೇವಲ 140—150 ಜನರು ಮಾತ್ರ ಪಾಲ್ಗೊಂಡಿದ್ದಾರೆ. ಅಂದರೆ ಸುಮಾರು ನೂರಕ್ಕೆ 60—70 ರಷ್ಟು ಜನರನ್ನು ಸೇರಿಸಿ ಇದನ್ನು ವಿಸ್ತರಿಸಬೇಕಾಗಿದೆ. ಈಗಾಗಲೇ ನೂರಕ್ಕೆ 3 ರಷ್ಟು ಜನ ಎಲಿ ಪಾಲ್ಗೊಂಡಿದ್ದಾರೆಯೋ, ಅಲ್ಲಿಯೇ ಇಷ್ಟು ದುವ್ಯ್ಕಯ ನಡೆದದ್ದಾದರೆ ಇನ್ನು ಬಾಕಿ

ಉಳಿದ 70 ಪರ್‌ಸೆಂಟ್ ಪ್ರದೇಶಗಳಿಗೂ ಇದನ್ನು ಮುಟ್ಟಿಸುವಾಗ ಅವರಿಗೆ ಇದರಲ್ಲಿ ಹೇಗೆ ವಿಶ್ವಾಸ ಬರುತ್ತದೆ? ಇವತ್ತು ಗ್ರಾಮಾಂತರ ಪ್ರದೇಶಗಳ ಸಹಕಾರೀ ಸಂಸ್ಥೆಗಳಾಗಲೀ, ಅಥವಾ ನಗರ ಪ್ರದೇಶದಲ್ಲಿರತಕ್ಕ ಸಹಕಾರೀ ಸಂಸ್ಥೆಗಳಾಗಲಿ, ಇವುಗಳಿಂದ ಜನರಿಗೆ ನೇರವಾಗಿ ಪ್ರಯೋಜನ ಸಿಗಬೇಕಾದರೆ, ಸಹಕಾರೀ ಚಳವಳಿಯಲ್ಲಿ ನಂಬಿಕೆ ಬರುವ ರೀತಿಯಲ್ಲಿ ಈ ಸಂಸ್ಥೆಗಳು ನಡೆಯಬೇಕು. ಹಾಗೆ ಮಾಡಿದರೆ ಮಾತ್ರ ನಾವು ಏನು ಒಂದು ಉದ್ದೇಶವನ್ನು ಇಟ್ಟುಕೊಂಡು ಇದನ್ನು ಮಾಡುತ್ತೇವೆಯೋ, ಆ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಾಗುತ್ತದೆ. ಸಾಮಾನ್ಯ ಜನರಿಗೆ ಇವತ್ತು ಈ ಸಹಕಾರೀ ಸಂಘಗಳು ಎರಡು ಕಣ್ಣು ಇದ್ದಹಾಗೆ. ಆ ಕಣ್ಣುಗಳ ದೃಷ್ಟಿಯನ್ನು ನಾವು ದೂರ ಒಯ್ಯಬೇಕು. ಆದ್ದರಿಂದ ಈ ಸಹಕಾರೀ ಪದ್ಧತಿಯ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಪ್ರತಿ ವರ್ಷವು ಏನೊಂದು ಹಣದ ದುರುಪಯೋಗವಾಗುತ್ತದೆ, ಅದನ್ನು ತಪ್ಪಿಸಲು ನಿಮ್ಮ ಸಿಬ್ಬಂಧಿವರ್ಗವನ್ನು ದುರಸ್ಥಿಪಡಿಸಿ, ಅವರ ಮೇಲೆ ನೇರವಾದ ಹತೋಟಿಯನ್ನು ಇಟ್ಟುಕೊಂಡು, ಅಧಿಕಾರಿಗಳು ಪದೇ ಪದೇ ಅಲ್ಲಿಗೆ ಭೇಟಿ ಕೊಟ್ಟು, ಅವರ ಮೇಲೆ ಸಂಪೂರ್ಣವಾದ ಹತೋಟಿಯನ್ನು ಇಟ್ಟುಕೊಳ್ಳುವುದಕ್ಕೆ ಕಡ್ಡಾಯವಾದ ನಿರ್ದೇಶನ ತಾವು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಇವೊತ್ತಿನ ದಿವಸ ಸಹಕಾರೀ ಸೊಸೈಟಿಗಳು ಜಾಸ್ತಿಯಾಗುತ್ತಾ ಇವೆ. ಆದರೆ ಹಾಗೆಯೇ ಬಾಕಿಗಳು ಕೂಡ ಏರುತ್ತಾ ಇವೆ. ಸುಮಾರು 160 ಕೋಟಿ ರೂಪಾಯಿಯಷ್ಟು ಇಂತಹ ಸೊಸೈಟಿಗಳಿಂದ ಬಾಕಿ ಬರಬೇಕಾಗಿದೆ. ಯಾವುದೋ ಮುಖಾಂತರ ಹಣವನ್ನು ತಂದು ನಾವು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಹಣವನ್ನು ತಂದು ಒದಗಿಸುತ್ತಿದ್ದೇವೆ. ಆದರೆ ಕೊಟ್ಟ ಹಣವನ್ನು ಸರಿಯಾದ ಕಾಲಕ್ಕೆ ವಸೂಲು ಮಾಡದಿದ್ದರೆ ಏನು ಪ್ರಯೋಜನ? ಆಯಾ ಸೊಸೈಟಿಗಳು ಸಕಾಲದಲ್ಲಿ ಕೊಟ್ಟ ಸಾಲಗಳನ್ನು ವಾಪಸ್ಸು ಪಡೆಯದೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಣವು ವಾಪಸ್ಸು ಬರಬೇಕಾಗಿದೆ. ಇದನ್ನು ಯಾರು ತಾನೆ ಮೆಚ್ಚುತ್ತಾರೆ? ಆದ್ದರಿಂದ ಸಹಕಾರೀ ಸಂಸ್ಥೆಗಳಿಗೆ ಎಷ್ಟು ಪ್ರಾಮಾಣಿಕತೆಯಿಂದ ನಾವು ಹಣವನ್ನು ಕೊಡುತ್ತೇವೋ, ಅಷ್ಟೇ ಪ್ರಾಮಾಣಿಕತೆಯಿಂದ ಅದನ್ನು ಸಕಾಲದಲ್ಲಿ ವಸೂಲು ಮಾಡುವುದಕ್ಕೂ ಪ್ರಯತ್ನ ಮಾಡಬೇಕು. ಇವೊತ್ತಿನ ದಿವಸ ಸಹಕಾರಿ ಸಂಘಗಳಲ್ಲಿ ಏನಾಗಿದೆಯೆಂದರೆ ಸರ್ವೆಸಾಧಾರಣವಾಗಿ ಹಳ್ಳಿಗಳಲ್ಲಿ ಜನರ ಹತ್ತಿರ ಯಾವಾಗ ದುಡ್ಡು ಇರುತ್ತದೆ, ಆವಾಗ ಅವರಿಂದ ಕೊಟ್ಟ ಸಾಲವನ್ನು ಸರಿಯಾಗಿ ವಸೂಲು ಮಾಡುವುದಿಲ್ಲ. ಸಾಲ ತೆಗೆದುಕೊಂಡ ಜನರು ಅನೇಕ ಸಂದರ್ಭಗಳಲ್ಲಿ ದುಡ್ಡು ವಾಪುಸ್ಸು ಕೊಡಬೇಕೆಂದು ತಿರುಗಾಡುತ್ತಿದ್ದರೂ ಕೂಡ ಅವರಿಂದ ದುಡ್ಡು ತೆಗೆದುಕೊಳ್ಳುವವರು ಇಲ್ಲದೆ, ಅವರಲ್ಲಿ ಈ ದುಡ್ಡು ಖರ್ಚಾಗಿ ಹೋಗುತ್ತದೆ. ಆದರೆ ಮತ್ತೆ ಯಾವಾಗ ಅವರಲ್ಲಿ ದುಡ್ಡು ಇಲ್ಲವೋ ಆಗ ಕೇಳಿದರೆ ಇವರಿಗೆ ಕೊಟ್ಟ ದುಡ್ಡು ಹೇಗೆ ತಾನೆ ಬರುವುದಕ್ಕೆ ಸಾಧ್ಯ? ರೈತರ ಹತ್ತಿರ ಜನವರಿ, ಫೆಬ್ರುವರಿ ಅಥವಾ ಮಾರ್ಚಿ ತಿಂಗಳಲ್ಲಿ ಹೆಚ್ಚಾಗಿ ದುಡ್ಡು ಇರುತ್ತದೆ. ಆ ಸಮಯದಲ್ಲಿ ವಸೂಲು ಮಾಡುವುದಕ್ಕೆ ಏರ್ಪಾಡು ಮಾಡಬೇಕಾಗಿದೆ. ಆದ್ದರಿಂದ ಈ ಸಹಕಾರಿ ಸಂಘಗಳಲ್ಲಿ ವಸೂಲಾತಿ ಕ್ರಮವನ್ನು ಬದಲಾಯಿಸಿ ಆದಷ್ಟು ಜಾಗ್ರತೆಯಾಗಿ ವಸೂಲು ಮಾಡುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅದೇ ರೀತಿ ಇವತ್ತು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಮತ್ತು ಗ್ರಾಮ ಸೇವಾ ಸಹಕಾರ ಸಂಘಗಳು ಸಹ ನಮ್ಮಲ್ಲಿ ಇವೆ. ಇವುಗಳಿಂದ ಕೆಲವರಿಗೆ ಯಾವ ಉದ್ದೇಶಕ್ಕಾಗಿ ಸಾಲವನ್ನು ಕೊಡುತ್ತಾರೋ, ಆ ಉದ್ದೇಶಕ್ಕಾಗಿ ಅದನ್ನು ಉಪಯೋಗಿಸುತ್ತಾ ಇಲ್ಲ. ಅದರಲ್ಲಿಯೂ 5 ಎಕರೆ ಮತ್ತು ಅದಕ್ಕಿಂತ ಕಮ್ಮಿ ಹೋಲ್ಡಿಂಗ್ಸ್ ಇರತಕ್ಕಂತಹ ಜನರು ಏನಿದ್ದಾರೆ, ಅವರಲ್ಲಿ ಸುಮಾರು 43 ಭಾಗದ ಜನರು ಕೊಟ್ಟಿರತಕ್ಕಂತಹ ಸಾಲ ಏನಿದೆ, ಅದನ್ನು ದುರುಪಯೋಗಪಡಿಸಿಕೊಂಡಿದ್ದಾರೆಯೆಂದು ಕೇಂದ್ರ ಸರ್ಕಾರದ ವರದಿಯಿಂದ ಗೊತ್ತಾಗುತ್ತದೆ. ನಮ್ಮ ರಾಜ್ಯದಲ್ಲಿ 5 ಎಕರೆಗಿಂತ ಕಡಿಮೆ ಜಮೀನು ಹೊಂದಿರತಕ್ಕವರು ಶೇಕಡಾ 34ರಷ್ಟು ಜನ ಇದ್ದಾರೆ. ಅವರಿಗೂ ಕೊಟ್ಟಿರತಕ್ಕಂತಹ ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂಬುದನ್ನು ನಾವು ನೋಡುತ್ತಿದ್ದೇವೆ. ಅದೇ ಪ್ರಕಾರ ಇವತ್ತು ಷಾರ್ಟ್ ಟರ್ಮ್ ಲೋನನ್ನು ನಾವು ಸಾಮಾನ್ಯವಾಗಿ ವ್ಯವಸಾಯಕ್ಕೋಸ್ಕರ ಕೊಡತಕ್ಕದ್ದು. ಆದರೆ ಹಾಗೆ ಕೊಟ್ಟರೂ ಅದನ್ನು ಆ ಉದ್ದೇಶಕ್ಕಾಗಿ ಉಪಯೋಗಿಸುತ್ತಾ ಇಲ್ಲ. ಸಾಮಾನ್ಯವಾಗಿ ರೈತನಿಗೆ ಎಲ್ಲದಕ್ಕೂ ಹಣದ ಅವಶ್ಯಕತೆ ಇದ್ದೇ ಇರುತ್ತದೆ. ಅವನಿಗೆ ಎತ್ತು ಬೇಕು, ಬೀಜ ಬೇಕು, ಗೊಬ್ಬರಬೇಕು ಮತ್ತು ವ್ಯವಸಾಯ ಸಾಮಗ್ರಿಗಳು ಬೇಕು. ಇವುಗಳಿಗೆಲ್ಲಾ ಹಣ ಬೇಕಾಗುತ್ತದೆ. ಆದ್ದರಿಂದ ರೈತನು ಯಾವ ಬಾಬಿಗೆ ಹಣ ಕೇಳುತ್ತಾನೋ ಆ ಬಾಬಿಗೆ ಸಾಲ ಕೊಡುವ ವ್ಯವಸ್ಥೆ ಈ ಸಹಕಾರ ಸಂಘಗಳಲ್ಲಿ ಇರಬೇಕು. ಆದ್ದರಿಂದ ಈ ರೀತಿ ಯಾವ್ಯಾವ ಉದ್ದೇಶಕ್ಕಾಗಿ ಅವನು ಕೇಳುತ್ತಾನೆ, ಆ ಉದ್ದೇಶಕ್ಕೆ

(ಶ್ರೀ ಕಾಗೋಡು ತಿಮ್ಮಪ್ಪ)

ಸಕಾಲದಲ್ಲಿ ಅವನಿಗೆ ಹಣವನ್ನು ಒದಗಿಸಿದರೆ ಈ ರೀತಿ ದುರುಪಯೋಗ ಮಾಡುವ ಸಂದರ್ಭ ಬರುವುದಿಲ್ಲ. ಆದ್ದರಿಂದ ಸರ್ಕಾರದವರು ರೈತರಿಗೆ ಸಕಾಲದಲ್ಲಿ ಸಹಕಾರ ಸಂಘಗಳ ಮೂಲಕ ಒಳ್ಳೆಯ ಕಾರ್ಯಗಳಿಗೋಸ್ಕರ ಸಾಲ ಕೊಡುವ ವ್ಯವಸ್ಥೆ ಮಾಡಬೇಕು.

ಇನ್ನೊಂದು ಪ್ರಶ್ನೆ. ನಮ್ಮಲ್ಲಿ ಸಹಕಾರ ಸಂಘಗಳ ಜೊತೆಯಲ್ಲಿ ಕೆಲವು ಬ್ಯಾಂಕ್‌ಗಳಿವೆ. ಅವುಗಳಲ್ಲಿ ಅಪೆಕ್ಸ್ ಬ್ಯಾಂಕ್, ಸೆಂಟ್ರಲ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮತ್ತು ಇಂಟರ್ ಮೀಡಿಯರೀಸ್ ಇವೆ. ಇವತ್ತು ಸರ್ಕಾರದವರು ರಿಜರ್ವ್ ಬ್ಯಾಂಕಿನಿಂದ ಸೇಕಡ 4ರಷ್ಟು ಸಾಲವನ್ನು ತೆಗೆದುಕೊಂಡಿದ್ದಾರೆ, ಇವತ್ತು ಸಹಕಾರ ಸಂಘಗಳ ಮೂಲಕ ಸಾಲ ಪಡೆಯಬೇಕಾದರೆ ಸೇಕಡ 9½ಯಷ್ಟು ಬಡ್ಡಿ ಕೊಡಬೇಕಾಗುತ್ತದೆ. ಕೆಲವರು ನಮ್ಮ ಸಂಸ್ಥೆಗಳಿಗೆ ಹಾಗೇಯೇ ಕೊಡುತ್ತಿದ್ದಾರೆ. ಇದು ಬಹಳ ಜಾಸ್ತಿ. ಯಾವ ಪ್ರಮಾಣದರದಲ್ಲಿ ರಿಜರ್ವ್ ಬ್ಯಾಂಕಿನಿಂದ ಬಡ್ಡಿಗೆ ತರುತ್ತಾರೋ, ಸಾಲ ಮಾಡುತ್ತಾರೋ, ಆ ಬಡ್ಡಿಗಿಂತ ಒಂದು, ಎರಡು ರೂಪಾಯಿಗಳಷ್ಟು ಜಾಸ್ತಿ ಮಾಡಬಹುದು, ಸೇಕಡ 4.5ರಷ್ಟು ಬಡ್ಡಿ ಡಿ.ಸಿ.ಸಿ. ಬ್ಯಾಂಕ್ ಮತ್ತು ಸೆಂಟ್ರಲ್ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿಗೆ ಹೋಗುತ್ತದೆ. ಇದರಲ್ಲಿ ಮಧ್ಯವರ್ತಿ ಜನರೇ ಹೆಚ್ಚಿಗೆ ಬಡ್ಡಿ ತೆಗೆದುಕೊಳ್ಳುವ ಕೆಲಸವಾಗಬಾರದು. ರಿಜರ್ವ್ ಬ್ಯಾಂಕಿನಿಂದ ಕೊಡುವ ಬಡ್ಡಿ ದರದಲ್ಲಿ ಸೇಕಡ ಒಂದು ಅಥವಾ 2ರಷ್ಟು ಜಾಸ್ತಿ ಮಾಡಿ ಜನರಿಗೆ ಸಾಲ ತಲುಪಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. DEPUTY SPEAKER.—I am inclined to listen to the hon. Member for a longer time but the time at the disposal of this House is only 135 minutes, which has to be distributed among 15 members. It is not possible to give even 8 minutes to each member. I therefore request the hon. member to finish his speech within one minute.

ಶ್ರೀ ಕಾಗೋಡ ತಿಮ್ಮಪ್ಪ.—ಇನ್ನು ಬೆಂಗಳೂರು ನಗರದ ವಿಷಯವನ್ನು ನಾನು ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಬೆಂಗಳೂರು ನಗರದಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ 200 ಕ್ಕೂ ಹೆಚ್ಚಿಗೆ ಸೊಸೈಟಿಗಳು ಜನ್ಮ ತಾಳಿವೆ. ಕೆಲವು ಸೊಸೈಟಿಗಳು ಸೈಟುಗಳನ್ನು ಪಡೆದುಕೊಂಡು ಖಾಸಗೀ ಲೇಔಟ್ ಮಾಡಿಕೊಂಡಿದ್ದಾರೆ. ಇವತ್ತು ಹೌಸಿಂಗ್ ಬೋರ್ಡಿನವರು ಅಲ್ಲಿ ಕೆಲವರಿಗೆ ಅನುಮತಿ ಕೊಟ್ಟು ಜಮೀನು ಪಡೆಯುವ ಸಲುವಾಗಿ ಪ್ಲಾನಿಂಗ್ ವಗ್ಗೈರೆ ಮಾಡುವುದಕ್ಕೆ ಸರ್ಕಾರದಿಂದ ಅನುಮತಿಯನ್ನು ಪಡೆಯದೆ ಹಳೆಯ ಮನೆಗಳನ್ನು ಕಟ್ಟುತ್ತಿದ್ದಾರೆ. ಸರ್ಕಾರ ಅದನ್ನು ತಡೆಹಿಡಿದಿದ್ದಾರೆಂಬ ಒಂದು ಸರ್ಕ್ಯುಲರನ್ನು ಇಷ್ಯೂ ಮಾಡಿದ್ದಾರೆ. ಒಂದು ವೇಳೆ ಹೌಸಿಂಗ್ ಬೋರ್ಡಿನವರು ಅಥವಾ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು ಇದಕ್ಕೆ ಅವಕಾಶ ಕೊಟ್ಟು ಅನುಮತಿ ಕೊಟ್ಟಿದ್ದಾರೆಂದರೆ, ಆಗ ಅಲ್ಲಿ ಲೇಔಟ್, ಪ್ಲಾನ್, ಎಸ್ಟಿಮೇಟ್ ಮಾಡಿ ಆ ಸೈಟುಗಳನ್ನು ಪಡೆದುಕೊಳ್ಳಬೇಕು. ಏಕೆಂದರೆ ಸಹಕಾರ ಸಂಘಗಳಲ್ಲಿ ಹೆಚ್ಚಿಗೆ ಕಾರ್ಮಿಕರೂ ಹಾಗೂ ನೌಕರರೂ ಇದ್ದಾರೆ. ಬಡ ಜನರೂ ಸಹ ಅನೇಕ ಮಂದಿ ಇದ್ದಾರೆ. ಸರ್ಕಾರಿ ಕಛೇರಿಯಲ್ಲಿ ಕೆಲಸ ಮಾಡುವ ನೌಕರರೂ ಹೆಚ್ಚು ಪ್ರಯೋಜನವನ್ನು ಹೊಂದಿರತಕ್ಕ ಸೊಸೈಟಿಗಳೂ ಇವೆ. ಅಲ್ಲಿಯೂ ಸಹ ಸೈಟುಗಳನ್ನು ಮಾಡಿಕೊಂಡಿದ್ದಾರೆ. ಅಂತಹವರಿಗೆ ಸರ್ಕಾರದವರು ಅನುಮತಿಯನ್ನು ಕೊಟ್ಟರೆ ಸಹಕಾರ ಸಂಘಗಳ ಜವಾಬ್ದಾರಿ ಕಡಿಮೆಯಾಗುತ್ತದೆ. ಆದ್ದರಿಂದ ಕೆಲವು ಸೊಸೈಟಿಗಳ ಕೋರಿಕೆಯನ್ನು ತಾವು ಪರಾಂಬರಿಸಿದರೆ ಒಳ್ಳೆಯದು. ಅದಕ್ಕಾಗಿ ಅವರಿಗೆ ಕೂಡಲೇ ಅನುಮತಿಯನ್ನು ನೀಡಬೇಕೆಂದು ಕೇಳಿಕೊಂಡು ಅಧ್ಯಕ್ಷರು ಬಹಳ ತಾಳ್ಮೆಯಿಂದ ನನಗೆ ಇಷ್ಟು ಸಮಯವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri H. LINGA REDDY (Kurugodu).—Mr. Deputy Speaker, Sir, I would like to offer my comments on the Co-operation Department. I only request the Government not to follow the footsteps of the previous Government. The entire Co-operative Act is ill-conceived, ill-drafted and deserves to be scrapped at once. I request the Minister kindly to appoint a Committee consisting of members who are well experienced in co-operative movement and see that a new Act comes into force immediately; otherwise the whole cooperative movement in our State

would be a failure. The bye-laws of all Societies are subject to the approval of Registrar of Co-operative Societies and the Government. This being so, what is the use of Government nominating Directors and the Shareholders electing their Directors? The cream of the society will be elected as the Directors. It is not fair that the election of directors should be approved by the Registrar of Co-operative Societies. If everything is to be controlled by the Registrar, what is the use of having elected Directors. They do not seem to have confidence in the elected directors. If it is the intention of the Government to control the societies in this manner, let them scrap the Act and manage the affairs of the societies themselves.

Recently, the Government had authorised the Kampli Sugar Factory Director to reinstate a person who had gone in writ petition to the High Court. The person concerned did withdraw his writ petition. He has been taken on service. Now they are unable to pay his salary because the Government nominee opposed his reinstatement when all other Board of Directors have passed a resolution to that effect. Because the nominee of the Government has opposed the resolution, a reference has been made by the Factory to the Government seeking clarification in the matter. Till today nothing has been heard by the Government. I request the Government to settle this matter immediately. The previous Government had appointed 18 Directors as against 3 Directors which the Act contemplates. In Gowribidanur Sugar Factory, the Government had appointed 33 directors in order to have a majority. I plead with the Government not to introduce politics in the co-operative field. The previous Government had introduced politics. Nepotism aud favouritism were the order of the day.

In the Mysore State Khadi Board, the President has appointed his own relations and he is doing things in his own way. It is hightime this Government take note of his actions and see that the Khadi Board is immediately superseded and a person who can do some service to the State is appointed.

The success of the co-operative movement depends upon the persons managing the societies but not upon the persons in authority who are misusing their powers. Take the case of certain schemes which the Government has sponsored. The Land Mortgage Bank Well Scheme is an important scheme sponsored by the Government. Under this Scheme, Rs. 5,000 will be sanctioned for a well. Out of this amount, the Bank will credit Rs. 1,000 towards share capital. Out of this Rs. 4,000, he has to meet his journey expens s which comes to nearly Rs. 500, towards purchase of crowbars and implements, he spends about Rs. 2,500 and he has to pay Rs. 1,000 to his creditors, Ultimately, he will be having only Rs. 1,000 to dig a well. You can just imagine how a raiyat can dig a well for Rs. 1,000. Unless the Co-operative Department gives him loan free of interest, I am afraid, he cannot dig a well. The money given to him as a loan goes as waste. The Government has given credit to the farmers to the tune of Rs. 10 crores. The recovery

(SRI H. LINGA REDDY)

position is indeed very bad. The position is certainly bad because the Directors grant benami loans. Some of the farmers after getting the loans sanctioned, they lend the money to others at 18% or 30% interest. Every President has become millioneers to-day. It is high time that the Government should make a note of it and their assets and liabilities are probed into and some action may be taken against these Presidents and Secretaries.

3-30 P.M.

The Marketing Societies lend money to those who have no stock. They give short term, long term and medium loans. Benami loans are also being sanctioned. The entire money of these Societies will be lost. The principles for which these Societies are started will be negatived. Instead of service to the people, they are swindling the public money. The officials of the Co-operative Department must not be kept in one place for a long period. They must be transferred from one District to another. If that is done, there is some chance of minimising corruption. There should be a separate Agency forming part of the Co-operative Department. Otherwise the entire mal-practices will be suppressed, and nothing will come out. One of my hon. friends here was telling that the audit work in the Co-operative Department is not done on a scientific way. They check the accounts here and there and they do not verify even the vouchers. There is no use of having such audit. There is a lacuna in the Co-operative Act. It is high time that the hon. Minister will take note of it and see that all the loop holes are plugged.

The purpose for which the Banks and Financial Institutions are started not really served. They do not really do good to the borr ower. The people are not so happy about these Banking Institutions, So many such institutions are coming up. The Reserve Bank gives money at 2½ per cent. These people give at 9½ per cent. If any person do not pay in time, he will have to pay 15 per cent. The rate of interest is very high. There is no common pool regarding the rate of interest charged in the Appex Bank, Land Mortgage Bank and the Marketing Societies. Now Sugar and Fertilizers are being entrusted to the large scale Societies. The Sales Depots are in District Headquarters. The fertilizers are not reaching the poor people. Some fertilizers and other things will cross the borders and go to the neighbouring States. The accounts are being manipulated before the closing year. It is high time that the Co-operative Authorities should take note of it and see that the balance amount is kept in Treasuries or in a Bank. so that it may not be possible for anybody to manipulate accounts and all that. The Reserve Bank made a statement regarding the affairs of the Co-operative Department. The statement is published in the Deccan Herald. It is stated that " no progress has been made. They are

politically motivated. There is nepotism and favouritism and manipulation of accounts. " Inspite of all these the Government has not taken note of it. Several representations were made in this regard by the Public of Bellary even at the time of Dharmaveera and the then Chief Minister of Mysore. The then Chief Minister held out a promise that he would do something in the matter. But nothing had been done so far. So far as advancing loans is concerned, the Societies are charging high rate of interest. It is a burden upon the poor ryots. The Bank Authorities are insisting upon Rs. 2 for every loan. Whereever the ryot goes, he has to pay more in the form of interest and in the form of other things. If that is so, what kind of relief is there from the Co operative Department to a poor ryot ? They advance money for the construction of buildings for the factory. The way of granting the loans to the public is misused by the persons in authority. The Mining Society in Bellary has become defunct. Rs. 5 lakhs in the from of Share capital and the money invested by the share-holders have been lost. But no action has been taken by the Government. Another factory at Sirguppa for the manufacture of Kandasari sugar has also become defunct. Another factory at Athiya has also become defunct. For both these factories liquidators have been appointed. But no action has been taken so far. The Liquidator appointed drew the salary of Rs. 250 till the year 1957. When I moved the matter with the Appex Bank, it was learnt that not a single pie has been collected. The amount invested was to the tuue of Rs. 25,000. When I asked the Secretary to get the information as to how many Societies have become defunct and to whom the Liquidators have been appointed, he furnished the information that nearly 30 to 40 Societies have become defunct and the amount involved is about 5 to 6 lakhs of rupees. We have to take note of it. The societies are being closed one by one due to mismanagement and misappropriation of funds. The Liquidators appointed for the purpose of collecting the dues etc., are not doing their work properly. They should collect the amount within one or two years. Even in the case of Benami loans advanced and not recovered, the Government has not taken action so far. I request the Government to see that immediate action is taken in the matter. I had been to Amsterdom, Switzerland and other places and studied the co-operative system that has been adopted there. The system they have adopted is working quite alright. They are having only 3 or 5 directors if the factories are big, otherwise they will be having only 1 or 2 directors. They are paid something unlike our honorary directors or Presidents nominated or elected. Our people misuse the powers. The principle of co-operation is quite good. But still our people out of self-interest or out of some other various reasons mis-use the power entrusted to them. There are a number of misappropriation cases in our country. The Government must see that such things are not repeated atleast hereafter. The appointment of Hon. Director must be eliminated and a whole time director must be appointed in some of these Co-operative Societies. If he is paid he will have some

(SRI H. LINGA REDDY)

interest and the Government also will have some hold. With these few words, I thank the Chair for having allowed me to speak on this subject.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಪತಿಗಳೇ, ಈ ದಿನ ನಮ್ಮ ಮುಂದಿಟ್ಟಿರುವ ಸಹಕಾರಿ ಇಲಾಖೆ ಬೇಡಿಕೆ ಬಗ್ಗೆ ಕೆಲವು ಮಾತುಗಳನ್ನು ಆಡುವುದಕ್ಕೆ ಅಪ್ಪಣೆ ಬೇಡುತ್ತೇನೆ. ನಮ್ಮದೇಶದಲ್ಲಿ ಸಹಕಾರಿ ಪದ್ಧತಿ ಪ್ರಕಾರ ಸಹಕಾರ ಚಳವಳಿ ಇಂಟರ್‌ನ್ಯಾಷನಲ್ ಕೋ-ಅಪರೇಟಿವ್ ಪ್ರಿನ್ಸಿಪಲ್ಸ್ ಏನಿದೆ ಅದಕ್ಕನುಗುಣವಾಗಿ ನಡೆಯದೆ ಸರಕಾರಿ ಇಲಾಖೆಯಾಗಿ ನಡೆಯುತ್ತಿರುವುದು ಬಹಳ ಶೋಚನೀಯವಾದ ವಿಚಾರ. It is an Organisation where the principle is each for all and all for each and not everything for self. ಈ ಒಂದು ಮುಖ್ಯವಾದ ಧ್ಯೇಯವನ್ನು ಬಿಟ್ಟು everything for self ಎನ್ನುವಂತೆ ಕಾರ್ಯ ರೂಪಕ್ಕೆ ಬರುತ್ತಿದೆ. ಈ ಆರ್ಗನೈಜೇಷನ್ನಿನಲ್ಲಿ ಸರಕಾರಿ ಕೈವಾಡ ಒಂದು ಕಡೆ ಇದ್ದರೆ ಮತ್ತೊಂದು ಕಡೆ ಪುಡಾರಿಗಳು ಪುಡಾರಿತನ ಬೆಳೆಸಲು ಇದು ಒಂದು ಕೇಂದ್ರ ಜಾಗವಾಗಿದೆ. ಮೊನ್ನೆ ನಡೆದ ಚುನಾವಣೆಯಲ್ಲಿ ಇದಕ್ಕೆ ಖಚಿತವಾದ ದಾಖಲೆಯಿದೆ. ಕೆಲವು ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷರುಗಳು ಚುನಾವಣೆಗಾಗಿ ಬ್ಯಾಂಕಿನ ಹೆಚ್ಚು ಹಣ ಉಪಯೋಗ ಮಾಡಿಕೊಂಡಿದ್ದಾರೆ. ಪ್ರಿಂಟಿಂಗ್, ಪೆಟ್ರೋಲು ಮುಂತಾದುವುಗಳನ್ನು ಇನ್‌ಸ್ಟಿಟ್ಯೂಷನ್ನಿಗೆ ಖರ್ಚುಹಾಕಿ ಚುನಾವಣೆಯ ಖರ್ಚನ್ನು ಗಿಟ್ಟಿಸಿದ್ದಾರೆ. ಕೋ-ಆಪರೇಷನ್ನನ್ನು ಕೆಲವರು ತಮ್ಮ ತೊಂದರೆಗಳನ್ನು ನೀಗಿಕೊಳ್ಳಲು ವ್ಯರ್ಥವಾಗಿ ಬಳಸಿಕೊಳ್ಳುತ್ತಿದ್ದಾರೆ. ಇದು ತಪ್ಪದೆ ಇರುವುದು ಶೋಚನೀಯ ವಿಚಾರ.

ಹಿಂದೆ ಮಾತನಾಡಿದ ಶ್ರೀ ರೆಡ್ಡಿಯವರು ಕೋ-ಆಪರೇಷನ್ ಆಕ್ಟ್ ರಚಿಸಿ ಬಹಳ ದಿವಸ ಆಗಿದೆ, ಅದರಲ್ಲಿ ಅನೇಕ ಮಾರ್ಪಾಟು ಆಗಬೇಕಾಗಿದೆ, ಈ ಆಕ್ಟು ತಿದ್ದುಪಡಿಯಾಗಬೇಕಾದ್ದು ಅತ್ಯಾವಶ್ಯಕ ಎಂದು ಹೇಳಿದರು. ಜೊತೆಗೆ ರೂಲ್ಸ್ ಕೂಡ ಬದಲಾಯಿಸಬೇಕಾಗಿದೆ. ಆದಷ್ಟು ಬೇಗ ಆಕ್ಟ್ ಮತ್ತು ರೂಲ್ಸ್ ಈ ಕಾಲಕ್ಕನುಗುಣವಾಗಿ ಜನರ ಹಿತದೃಷ್ಟಿಯಿಂದ ಬದಲಾಯಿಸಬೇಕಾದ್ದು ಅತ್ಯಗತವಾಗಿದೆ. ಇದರ ಬಗ್ಗೆ ಸಾಕಾದಷ್ಟು ಗಮನ ಸಹಕಾರಿ ಮಂತ್ರಿಗಳು ಕೊಡುವರೆಂದು ನಂಬಿದ್ದೇನೆ. ಈ ಕೋ-ಅಪರೇಷನ್ನಿನಲ್ಲಿ ಅನೇಕವಾಗಿ ಹಣ ವ್ಯಯವಾಗುತ್ತಿದೆ. ಆದರೆ ಅದಕ್ಕೆ ತಕ್ಕಂತೆ ಸಹಾಯವಾಗುತ್ತಿಲ್ಲ. ಈಗ ಒಂದು ಕೋ-ಆಪರೇಟಿವ್ ಯೂನಿಯನ್ನಿದೆ. ಇದರ ಖರ್ಚಿಗೆ ಎಲ್ಲಾ ಕೋ-ಆಪರೇಟಿವ್ ಸೊಸೈಟಿಗಳೂ ತಮ್ಮ ಅನುಕೂಲಕ್ಕಿಲ್ಲದಿದ್ದರೂ ಒಂದು ಭಾಗವನ್ನು ತಾವು ಸಂಪಾದನೆ ಮಾಡಿರುವುದರಲ್ಲಿ ಕೊಡಬೇಕು. ಆ ಯೂನಿಯನ್ನಿನಲ್ಲಿ ನಡೆಯುವ ಕೆಲಸ ವರ್ಷಕ್ಕೊಂದು ಸಲ ಕೋ-ಆಪರೇಟರ್ಸ್ ಡೇ ಮಾಡುವರು ಮತ್ತು ಸಣ್ಣ ಪುಟ್ಟ ಸಹಾಯವನ್ನು ಮಾಡಬಹುದು. ಆ ಯೂನಿಯನ್ನಿನಿಂದ ಸರಿಯಾದ ಕೆಲಸವಾಗುತ್ತಿಲ್ಲ. ಸಹಕಾರ ಸಂಘಗಳಿಗೆ ಅದರಿಂದ ಅನುಕೂಲವಾಗದೆ ಅದಕ್ಕೆ ಬದಲಾಗಿ ಕೆಲವರಿಗೆ ಅಧಿಕಾರ ಸಿಕ್ಕಲು ಆ ಯೂನಿಯನ್ ಆಗಿದೆ.

ಕೋ-ಅಪರೇಟಿವ್ ಆಡಿಟ್ ಮತ್ತು ಇಲಾಖೆಯನ್ನು ಬೇರ್ಪಡಿಸಬೇಕೆಂದು ಅನೇಕರು ಒತ್ತಾಯ ಮಾಡುತ್ತಿದ್ದಾರೆ. ಆಡಿಟ್ ಮಾಡುವ ಶಾಖೆ ಸ್ವತಂತ್ರವಾಗಿರಬೇಕು. ಎಗ್ಸಿಕ್ಯೂಟಿವ್ ಮತ್ತು ಆಡಿಟ್ ಒಂದೇ ಕಡೆ ಸೇರಿಸಿದರೆ ಏನಾಗಬೇಕೋ ಅದನ್ನು ಸಾಧಿಸುವುದಕ್ಕಾಗುವುದಿಲ್ಲ. ಆದುದರಿಂದ ಆಡಿಟ್ಟನ್ನು ಎಗ್ಸಿಕ್ಯುಟಿವ್‌ನಿಂದ ಬೇರೆ ಮಾಡಬೇಕು, ಇದು ಅಗತ್ಯ.

ಹಿಂದೆ ಮಾತನಾಡಿದ ಮಿತ್ರರು ಹೇಳಿದಹಾಗೆ ಸರಕಾರದವರು ತಮ್ಮ ಅಧಿಕಾರ ಚಲಾವಣೆಯಲ್ಲಿ ಸಾಲಗಳನ್ನು ಸರಿಯಾಗಿ ವಸೂಲುಮಾಡಲು ಗಮನಕೊಡುತ್ತಿಲ್ಲ. ಸೊಸೈಟಿ ಉದ್ಧಾರವಾಗಬೇಕಾದರೆ ವಸೂಲಿ ಸರಿಯಾಗಿ ಆಗಬೇಕು. ಯಾವ ಸೊಸೈಟಿ ತೆಗೆದುಕೊಂಡರೂ ತೆಗೆದುಕೊಂಡ ಸಾಲ ಕೊಡಬೇಕಾಗಿಲ್ಲ ಎಂದು ಭಾವನೆ ತೆಗೆದುಕೊಂಡವರಿಗೆ ಇರುವ ಹಾಗೆ ಕಾಣುವುದು. ಕೊಡಬೇಕು, ತೆಗೆದುಕೊಳ್ಳಬೇಕು. ಹೀಗೆ ಮಾಡಿದರೆ ಹೆಚ್ಚು ಅನುಕೂಲವಾಗುವುದು. ತೆಗೆದುಕೊಂಡವರು ವಾಪಸು ಕೊಡದಿದ್ದರೆ ಸದಸ್ಯರಿಗೆ ಅನುಕೂಲವಾಗುವುದಿಲ್ಲ. ಆದುದರಿಂದ ಸಾಲ ತೆಗೆದುಕೊಳ್ಳುವಾಗ ಇರುವ ಆಸಕ್ತಿ ಕೊಡುವಾಗಲೂ ಇರುವಂತೆ ತಕ್ಕ ಕ್ರಮ ತೆಗೆದುಕೊಂಡಿಲ್ಲ, ತೆಗೆದುಕೊಳ್ಳಬೇಕು, ಇದಕ್ಕೆ ಗಮನ ಸಾಕಷ್ಟು ಕೊಡಬೇಕು.

ಈಗ ಸೊಸೈಟಿಗಳ ಸ್ಥಾಪನೆ ಆಗುತ್ತಲೇ ಇದೆ. ಆದರೆ ಬೇಗ ಮುಚ್ಚುವ ಪರಿಸ್ಥಿತಿ ಬರುತ್ತಿದೆ. ಅನೇಕ ಸೊಸೈಟಿಗಳು ಹೀನಸ್ಥಿತಿಯಲ್ಲಿವೆ. ಹೆಸರಿಗೆ ಕೆಲವು ಇವೆಯೇ ಹೊರತು ಸದಸ್ಯರಿಗೆ

ಅವುಗಳಿಂದ ಅನುಕೂಲವಾಗುತ್ತಿಲ್ಲ. ಮಲ್ಟಿ ಪರ್ಪಸ್ ಸೊಸೈಟಿಗಳೆಂದು ಮಾಡಿದರು. ಆದರೆ ಮಿಸ್‌ಅಪ್ರೋಪ್ರಿಯೇಷನ್ ಆಗಿ ಅವುಗಳನ್ನು ಮುಚ್ಚಬೇಕಾಯಿತು. ಸೊಸೈಟಿಗಳಲ್ಲಿ ಸಾಲ ಸಿಕ್ಕಬೇಕಾದರೆ ಡೈರೆಕ್ಟರುಗಳ ಬಾಲ ಹಿಡಿಯಬೇಕು. ಸಾಲ ಕೊಡಬೇಕಾದರೆ ಪ್ರಯಾರಿಟಿ ಪ್ರಕಾರ ಕೊಡುವ ಕ್ರಮವಿಲ್ಲ. ಡೈರೆಕ್ಟರು ತಮ್ಮ ಇಷ್ಟ ಬಂದಹಾಗೆ ಸಾಲ ಕೊಡುವುದನ್ನು ತಪ್ಪಿಸಬೇಕು. ನಿಜವಾಗಿಯೂ ಇದರಿಂದ ಪ್ರತಿಫಲ ಸಿಕ್ಕಬೇಕಾದರೆ ಅನುಕೂಲವಾಗಬೇಕಾದರೆ ಬಡ್ಡಿ ದರ ಕಡಿಮೆ ಮಾಡಬೇಕು. ಈಗ ಸೇಕಡ 11ರಿಂದ ಹದಿಮೂರು ರೂಪಾಯಿಗಳವರೆಗೆ ಬಡ್ಡಿ ವಸೂಲು ಮಾಡಲಾಗುತ್ತಿದೆ. ಅನೇಕ ವಿಧವಾದ ಸಾಲಗಳಿಗೆ ಅನೇಕ ರೀತಿ ಇದೆ, ಧೀರ್ಘಾವಧಿ ಸಾಲಕ್ಕೆ ಒಂದು ಬಡ್ಡಿ ದರ, ರಿಸರ್ವ್‌ಬ್ಯಾಂಕ್ ಸಾಲಕ್ಕೆ ಒಂದು ದರ ಹೀಗೆ ಬೇರೆ ಬೇರೆ ಬಡ್ಡಿ ದರ ಇರುವುದು ಅನುಕೂಲವಲ್ಲ. ಕೋ-ಅಪರೇಟಿವ್ ಸ್ಟೋರ್ಸ್ ಸಮರ್ಪಕವಾಗಿ ನಡೆಯುತ್ತಿಲ್ಲ. ಕಾರಣ ಸರಿಯಾಗಿ ಕೋ-ಅಪರೇಟಿವ್ ಪ್ರಿನ್ಸಿಪಲ್ಸ್ ಪಾಲಿಸುತ್ತಿಲ್ಲ. ಕೊಳ್ಳುವಾಗ ಬೇಕಾದ ಸಾಮಾನುಗಳನ್ನು ಕೊಳ್ಳದೆ ಹೆಚ್ಚು ಕಮಿಷನ್ ಬರುವ ಕಡೆ ಡೈರೆಕ್ಟರುಗಳು ಹೆಚ್ಚು ಸಾಮಾನು ತಂದು ಡೆಡ್ ಸ್ಟಾಕ್ ಅನೇಕವಾಗಿದೆ, ಇದರಿಂದ ಸಹಕಾರ ಸಂಘಗಳು ಹೀನಸ್ಥಿತಿಗೆ ಬಂದಿವೆ. ಜೊತೆಗೆ ಆರ್ಗನೈಜೇಷನ್ ಹೆಚ್ಚು ಬಂಡವಾಳ ಕಟ್ಟಡಗಳಮೇಲೆ ಹಾಕಬಾರದು. ಮತ್ತು ತ್ರೀ ಟೈರ್ಸ್ ಅಥವ ಟುಟೈರ್ಸ್ ಇರಬೇಕೇ ಎಂಬುದನ್ನು ಯೋಚನೆ ಮಾಡಬೇಕು. ಸೇಕಡ 4 ರಂತೆ ಸಾಲ ತೆಗೆದುಕೊಂಡು ಕನ್‌ಸ್ಯೂಮರ್ಸ್‌ಗೆ ಸೇಕಡ 8 ರಿಂದ 11ರ ವರಿಗೆ ವಿಧಿಸುವರು. ಇದರಿಂದ ಸಹಾಯವಾಗುವುದಿಲ್ಲ. ಆದುದರಿಂದ ತ್ರೀ ಟೈರ್ಸ್ ಇರುವುದನ್ನು ಟು ಟೈರ್ಸ್‌ಗೆ ಬದಲಾಯಿಸಿದರೆ ಬಹಳ ಕಷ್ಟವಾಗುವುದು. ಯಾವ ಬಡ್ಡಿ ದರದಲ್ಲಿ ಪಡೆಯುವರು ಯಾವ ದರದಲ್ಲಿ ಕೊಡಬೇಕು ಎಂಬುದನ್ನು ಆಲೋಚಿಸಿ ಆದಷ್ಟು ಕಡಮೆ ದರದಲ್ಲಿ ಸಾಲ ಸಿಕ್ಕುವಂತೆ ಮಾಡಬೇಕೆಂದು ಹೇಳುತ್ತೇನೆ.

† ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಸನ್ಮಾನ್ಯ ಅಧ್ಯಕ್ಷರೇ, ಸಹಕಾರ ಶಾಖೆಯ ಮಂತ್ರಿಗಳ ಬೇಡಿಕೆಯನ್ನು ಅನುಮೋದಿಸಲು ಬಹಳ ಸಂತೋಷವಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಸಮಾಜ ಕಟ್ಟಬೇಕು, ಜನರಿಗೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅನುಕೂಲವಾಗಬೇಕು, ಈ ಸಂಬಂಧವಾಗಿ ಸ್ವಾತಂತ್ರ್ಯ ದೊರೆಯಬೇಕು, ದೇಶವು ಸ್ವಾವಲಂಬಿಯಾಗಬೇಕು. ಹಾಗಾಗಬೇಕಾದರೆ ಅದು ಸಹಕಾರ ಸಂಘಗಳಿಂದ ಸಾಧ್ಯ ಎಂಬುದನ್ನು ಅರಿತು ಸಹಕಾರಿ ರಂಗಕ್ಕೆ ಮಹತ್ವ ಕೊಟ್ಟು ಸಹಕಾರಿ ಸಂಘಗಳನ್ನು ಸ್ಥಾಪಿಸಲಾಗುತ್ತಿದೆ. ದುರ್ಬಲರನ್ನು ಒಟ್ಟುಗೂಡಿಸಿ ಸಬಲರನ್ನು ಎದುರಿಸಲು ಸಹಕಾರಿ ಚಳವಳಿ ಅವಶ್ಯಕವಾಗಿದೆ. ಆದರೆ ಇದರ ಉದ್ದೇಶ ಸಫಲವಾಗಿದೆಯೇ ಎಂದರೆ ಬಹಳ ನಿರಾಶೆಯಾಗಿದೆ. ಶರಾವತಿ ಕರ್ಮಕಾಂಡ ಭಯಂಕರವಾಗಿದೆ. ಈಗ ವ್ಯವಸಾಯಗಾರರು ಮುಂತಾದ ಬಡವರಿಗೆ ಹೆಚ್ಚು ಬಡ್ಡಿ ವಿಧಿಸಿ ಸಾಲ ಕೊಡುತ್ತಿದ್ದಾರೆ. ಇದನ್ನು ಗಮನಿಸಿ ಬಡವರಿಗೆ ಅನುಕೂಲವಾಗದಂಥ ಕಾರ್ಯಕ್ರಮ ಹಾಕದಿದ್ದರೆ ಇನ್ನೂ ಭಯಂಕರ ಪರಿಸ್ಥಿತಿ ಪ್ರಾಪ್ತವಾಗುವುದು. ಅಲ್ಲದೆ ಇರುವ ಆಡಿಟ್ ಸೆಲ್, ಅಡ್ಮಿನಿಸ್ಟ್ರೇಷನ್ ಇಲಾಖೆ ಗೇರಪ್ ಮಾಡಲು ಕ್ರಮ ತೆಗೆದುಕೊಳ್ಳಬೇಕು. ಇಂದಿನ ಆಡಿಟ್ ವ್ಯವಸ್ಥೆ ಸರಿಯಾಗಿಲ್ಲ. ಅದನ್ನು ಸರಿಪಡಿಸಬೇಕು.

ಸಹಕಾರ ಸಂಘಗಳ ಕೆಲಸವನ್ನು ಸುಧಾರಿಸದೇ ಹೋದರೆ ಅವುಗಳನ್ನು ಮುಚ್ಚಿ ಬಿಡುವುದು ಸೂಕ್ತ ಎಂದು ಈ ಪ್ರಸಂಗದಲ್ಲಿ ಹೇಳಬಯಸುತ್ತೇನೆ. ಸಹಕಾರ ಸಂಘಗಳಲ್ಲಿ ರಾಜಕೀಯ ಹೆಚ್ಚಾಗಿ ಅವುಗಳಿಗೆ ಕ್ಷಯ ರೋಗ ಹುಟ್ಟಿದಂತಾಗಿದೆ. ಅದನ್ನು ನಿವಾರಣೆ ಮಾಡಬೇಕಾದರೆ ಅದಕ್ಕೆ ಯೋಗ್ಯ ಚಿಕಿತ್ಸೆ ಆಗಬೇಕಾಗಿದೆ. ಸಹಕಾರ ಸಂಘಗಳಲ್ಲಿ ಕೊಡತಕ್ಕ ಸಾಲ ನೋಡಿದರೆ ಅದನ್ನು ಒಕ್ಕಲಿಗರು ತೆಗೆದುಕೊಳ್ಳುತ್ತಾರೆಯೇ ಎಂದು ಸಂಶಯ ಬರುತ್ತದೆ. ಅಲ್ಲಿ ಶೇಕಡಾ 50 ರಷ್ಟು ಬಿನಾಮಿ ಪತ್ರಗಳು ಇರುತ್ತವೆ. ನಿಜವಾದ ಸಾಲ ಎಷ್ಟು ತೆಗೆದುಕೊಂಡಿದ್ದಾರೆ ಎನ್ನುವುದಕ್ಕೆ ಲೆಕ್ಕಪತ್ರ ಸಿಕ್ಕುವುದಿಲ್ಲ. ಅವುಗಳನ್ನು ವಸೂಲು ಮಾಡುವ ಪದ್ಧತಿ ಬಹಳ ಭಯಂಕರ. ವರ್ಷದ ಕೊನೆಯಲ್ಲಿ ಸಹಕಾರ ಸಂಘದ ಚೇರ್‌ಮನ್‌ರು ಸಾಹುಕಾರರನ್ನು ಹಿಡಿದು ಸಾಲಪತ್ರಗಳಿಗೆ ಸಹಿ ತೆಗೆದುಕೊಂಡು ಇಟ್ಟುಕೊಂಡಿರುತ್ತಾರೆ. ಬ್ಯಾಂಕ್‌ನಿಂದ ಹಣ ಬಂದ ತಕ್ಷಣ ತಿಂಗಳಿಗೆ 40 ರೂಪಾಯಿ 50 ರೂಪಾಯಿ ಬಡ್ಡಿಯನ್ನು ಸಾಹುಕಾರರಿಗೆ ಕೊಡಬೇಕು. ಸಾಹುಕಾರರಿಂದ ಈ ರೀತಿ ಬೇಕಾದಷ್ಟು ಶೋಷಣೆಯಾಗುತ್ತಿದೆ. ಬೇನಾಮಿ ಸಾಲಪತ್ರಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ವರ್ಷದ ಕೊನೆಯಲ್ಲಿ ಈ ರೀತಿ ಅಡ್ಜಸ್ಟ್‌ಮೆಂಟ್ ಮಾಡಿ ಫಲಕ ತೆಗೆದುಕೊಳ್ಳುವ ಪದ್ಧತಿ ಬಹಳ ದಿವಸಗಳಿಂದ ನಡೆದುಬಂದಿದೆ. ಬೆಳಗಾಂ ಜಿಲ್ಲೆಗೆ ಈ ರೀತಿಯ ಫಲಕ ಸಿಕ್ಕಿದೆ. ಈ ರೀತಿ ಅಡ್ಜಷ್ಟಮೆಂಟ್ ಫಲಕಗಳನ್ನು ಹೆಚ್ಚು ಕೊಡದಿದ್ದರೆ ಬಹಳ ಸಂತೋಷವಾಗುತ್ತಿತ್ತು. ಬೆಳಗಾಂ ಡಿ. ಸಿ. ಸಿ. ಬ್ಯಾಂಕ್ ಚುನಾವಣೆಗೂ ಮತ್ತು ಇತರ ಬ್ಯಾಂಕ್ ಚುನಾವಣೆಗೂ ಬಹಳ ವ್ಯತ್ಯಾಸ ಇದೆ. ಈ ಬ್ಯಾಂಕ್‌ನಲ್ಲಿ ಮೂರು ವರ್ಷಕೊಮ್ಮೆ, ಎರಡು ವರ್ಷಕೊಮ್ಮೆ ರಿಟೈ

(ಶ್ರೀ ಆರ್. ಎಸ್. ಪಾಟೀಲ್)

ರಾದ ಸದಸ್ಯರುಗಳು ಇರುತ್ತಾರೆ. ಜಿಲ್ಲೆಯಲ್ಲಿ ಎಲ್ಲಾ ಸಹಕಾರ ಸಂಘಗಳು ಮತ ಹಾಕಿ ಆರಿಸಿ ಕಳುಹಿಸಬೇಕು. ಆದರೆ ಛೇರ್‌ಮನ್ ಅವರನ್ನು ತೆಗೆದುಹಾಕುವುದಕ್ಕೆ ಆಗುವುದಿಲ್ಲ. ಅವರ ಹೈಹ್ಯಾಂಡೆಡ್‌ನೆಸ್ ಸಾಯುವ ತನಕ ಇದೆ. ನಮ್ಮ ಜಿಲ್ಲೆಗೆ ಮಾಡಲ್ ರೂಲ್ಸ್ ಅನ್ವಯಿಸಬೇಕು. ಸ್ಪೆಷಲ್ ಕನ್‌ಸಿಡರೇಷನ್ ಬೇಡ. ಯೋಗ್ಯ ಆಡಳಿತ ಬೇಕಾದರೆ, ಪ್ರಾಮಾಣಿಕ ಆಡಳಿತ ಬೇಕಾದರೆ ಎಲ್ಲಾ ಜಿಲ್ಲೆಗಳಿಗೂ ಅನ್ವಯಿಸುವ ನಿಯಮಾವಳಿಯನ್ನೇ ನಮ್ಮ ಜಿಲ್ಲೆಗೂ ಅನ್ವಯಿಸಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಬೆಳಗಾಂ ಜಿಲ್ಲೆಯಲ್ಲಿ ಜನತಾ ಬಜಾರ್ ಆಗಿತ್ತು. ಜನತಾ ಬಜಾರ್ ಛೇರ್‌ಮನ್ ಬದಲಿ ಆದರು. ಛೇರ್‌ಮನ್‌ರು ಬದಲಿ ಆದ ತಕ್ಷಣ ರೆಜಲ್ಯೂಷನ್ ಪಾಸ್ ಮಾಡಿ ಸೂಪರ್‌ಸೀಡ್ ಮಾಡಿ ಎಂದು ಹೇಳಿದರೂ ಇದುವರೆಗೂ ಏನೂ ಮಾಡಲಿಲ್ಲ. ಅಲ್ಲಿನ ವ್ಯವಹಾರ ಭೀಕರ ಆಗಿರಬಹುದು. ಎಷ್ಟು ಲಾಸ್ ಆಗಿದೆ ಎಂದು ಊಹೆಗೂ ನಿಲುಕಲಾರದಂಥ ಪ್ರಶ್ನೆ ಯಾಗಿದೆ. ಇದರ ಬಗ್ಗೆ ಯೋಗ್ಯ ತನಿಖೆ ಆಗಬೇಕು. ಇದರೊಳಗೆ ನಮ್ಮ ಪಕ್ಷಕ್ಕೆ ಸಂಬಂಧಿಸಿದವರೇ ಇರಲಿ, ಅಥವಾ ಮತ್ತೊಂದು ಪಕ್ಷಕ್ಕೆ ಸಂಬಂಧಿಸಿದವರೇ ಇರಲಿ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಒಂದು ಅವಕಾಶವನ್ನು ಕಳೆದುಕೊಂಡರೆ ಅಲಕ್ಷ್ಯ ಅಪ್ರಾಮಾಣಿಕತೆ, ದುರ್ವ್ಯವಹಾರ ನಡೆಸಿದ ಲಕ್ಷಾಂತರ ರೂಪಾಯಿ ಎತ್ತಿಹಾಕಿದ ಜನರ ಮೇಲೆ ಕ್ರಮ ತೆಗೆದುಕೊಳ್ಳದೇ ಹೋದರೆ ಜನತೆಗೆ ಕೊಟ್ಟ ಆಶ್ವಾಸನೆಯನ್ನು ಇಡೇರಿಸುವುದರಲ್ಲಿ ನಾವು ಹಿಂದೆ ಬಿದಿದ್ದವ್ದೇವೆಂದಾಗುತ್ತದೆ. ಸಹಕಾರ ಸಂಘದ ಆಡಿಟರ್ ಸೊಸೈಟಿಗಳಿಗೆ ಬಂದು ಲೆಕ್ಕ ಪತ್ರಗಳ ತಪಾಸ ಮಾಡಿದ ನಂತರ ತಮಗೆ ವರದಿ ಕಳುಹಿಸುತ್ತಾರೆ. ವರದಿ ಕಳುಹಿಸಿದಮೇಲೆ ಅದರಲ್ಲಿ ಎಷ್ಟು ದುರ್ವ್ಯವಹಾರ ನಡೆದಿದೆ, ಎಷ್ಟು ಭ್ರಷ್ಟಾಚಾರ ನಡೆದಿದೆ, ಎಷ್ಟು ಎತ್ತಿ ಹಾಕಿದ್ದಾರೆ, ಎಷ್ಟು ದುರುಪಯೋಗವಾಗಿದೆ ಎಂದು ಸೊಸೈಟಿಗಳ ಪರವಾಗಿ ವರದಿ ಬಂದಿರಬಹುದು. ಎಷ್ಟು ಸೊಸೈಟಿಗಳ ವಿಷಯದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಂಡಿದ್ದೀರಾ ಎಂದು ಈ ಸಭೆಗೆ ತಿಳಿಸಿದರೆ ಬಹಳ ಉಪಕಾರವಾಗುತ್ತದೆ. ಆಡಿಟ್ ಎಫೆಕ್ಟೀವ್ ವರ್ಕ್ ಮೇಲೆ ಎನ್ನುವ ಒಂದು ಕಾರಣದಿಂದ ನಮ್ಮ ಸೊಸೈಟಿಗಳು ಅವ್ಯವಹಾರದಲ್ಲಿ ಮುಳುಗಿವೆ ಎಂದರೆ ಅದು ಅತಿಶಯೋಕ್ತಿ ಆಗಲಾರದು. ಇದರ ಮೇಲೆ ಯೋಗ್ಯವಾದ ನಿಗಾ ಇಡಬೇಕು. ಅಲ್ಲಿ ಯೋಗ್ಯ ಚಟುವಟಿಕೆ ಆಗುವಂತೆ ಮಾಡಬೇಕು. ಪೀಪಲ್ಸ್ ಪಾರ್ಟಿಸಿಪೇಷನ್ ಅದಕ್ಕೆ ದುಷ್ಟಶಕ್ತಿಗಳನ್ನು ಸೇರಿಸಿ ಸಮಾಜ ಮತ್ತು ದೇಶದ ಹೆಲ್ತ್‌ನ್ನು ಕೆಡಿಸಿಬಿಟ್ಟಿದ್ದಾರೆ. ಅದನ್ನು ಯಾವ ರೀತಿ ಆರೋಗ್ಯ ಯುತವಾಗಿ ಹೊಸ ಸರಕಾರ ಬಂದಮೇಲೆ ಮಾಡುತ್ತದೆ ಎಂದು ಜನತೆ ಕಾತುರದಿಂದ ಕಾದು ನೋಡುತ್ತಿದೆ. ಅಲ್ಲಿ ಪ್ರಾಮಾಣಿಕತೆಯಿಂದ ಕೆಲಸ ಕಾರ್ಯಗಳು ನಡೆಯುವಂತೆ ಮಾಡದೇ ಹೋದರೆ, ಇದೇ ಒಂದು ಪರಿಸ್ಥಿತಿ ಕಾಂಟಿನ್ಯೂ ಮಾಡಿಕೊಂಡು ಹೋದರೆ ಸಂಘ ಸಂಸ್ಥೆ ಮೇಲೆ ಇರತಕ್ಕ ವಿಶ್ವಾಸ ಹೋಗಿ ಸಂಘದ ವ್ಯವಹಾರವನ್ನು ಸರಕಾರ ನೋಡದೆ ಕಣ್ಣುಮುಚ್ಚಿಕೊಂಡು ಕೂತಿದೆ ಎನ್ನುವ ಭಾವನೆ ಜನರಲ್ಲಿ ಮಾಡಿದರೆ ನಮ್ಮ ಮೇಲೆ ಮತ್ತು ನಿಮ್ಮ ಮೇಲೆ ಇರುವ ವಿಶ್ವಾಸ ಹೋಗಿ ಯಾವ ಸರಕಾರ ಬಂದರೆ ಅಷ್ಟೇ ಎನ್ನುವ ಭಾವನೆ ಬರುತ್ತದೆ. ಆದುದರಿಂದ ಜನರಲ್ಲಿ ಆ ತರಹದ ಭಾವನೆ ಬಾರದಂತೆ ತಾವು ನೋಡಿಕೊಳ್ಳಬೇಕೆಂದು ಅಧ್ಯಕ್ಷರ ಮುಖಾಂತರ ಮಂತ್ರಿಗಳನ್ನು ವಿನಂತಿಮಾಡಿಕೊಳ್ಳುತ್ತೇನೆ. ಅಧ್ಯಕ್ಷರು ಕೊನೆ ಘಳಿಗೆಯಲ್ಲಿ ಮಾತನಾಡಲು ಅವಕಾಶ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಎರಡು ಮೂರು ಸಲಹೆಗಳನ್ನು ತಮ್ಮ ಮುಂದೆ ಇಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ನಡೆಯತಕ್ಕ ಚುನಾವಣೆ ಪದ್ಧತಿಯನ್ನೇ ಬದಲಾವಣೆ ಮಾಡಿದರೆ ನಮ್ಮ ಜಿಲ್ಲೆಗೆ ಒಂದು ಉಪಕಾರ ಮಾಡಿದಂತಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್‌ವಾಳ್).—ಅಧ್ಯಕ್ಷರೇ, ಸಹಕಾರ ಚಳುವಳಿ ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಬರುವ ಮೊದಲು ನಮ್ಮ ಹಳ್ಳಿಯ ಜನರನ್ನು ಸುಲಿಗೆ ಮಾಡುತ್ತಿದ್ದ ಸಾಹುಕಾರರಿಂದ ಬಡವರಿಗೆ ರಕ್ಷಣೆ ನೀಡುವುದಕ್ಕೆ ಆರಂಭವಾಯಿತು. ಆದರೆ ಈಗ ಈ ಚಳುವಳಿಯು ಕ್ಷೇತ್ರ ಬಹಳ ವಿಸ್ತಾರವಾಗಿದೆ. ವಿಸ್ತಾರವಾಗುವುದರ ಜೊತೆಯಲ್ಲಿ ಹಿಂದೆ ಈ ಚಳುವಳಿಯನ್ನು ಯಾವ ವರ್ಗಗಳಿಗೆ ಸಹಾಯ ಮಾಡಲು ಪ್ರಯತ್ನ ಮಾಡಿದರೋ ಅದಕ್ಕಿಂತಲೂ ಆಳವಾಗಿ ಈ ಚಳುವಳಿ ಈಗ ಹೋಗಿದೆ. ಇಪ್ಪತ್ತು ನಿರ್ಗತಿಕರಾದಂಥ ಅನೇಕ ಮಂದಿ ಷೆಡ್ಯೂಲ್ ಟ್ರೈಬ್ಸ್ ಮತ್ತು ಷೆಡ್ಯೂಲ್‌ಕ್ಯಾಸ್ಟ್ ಜನರು ಭೂಮಿ ಇಲ್ಲದೆ ಕೂಲಿಗಾರರು, ಕೆಲಸಗಾರರು ಭೂಮಿ ಇಲ್ಲದ ರೈತರು ಇದರೊಳಗೆ ಸೇರಿಕೊಂಡಿದ್ದಾರೆ.

ಆದರೆ ಸಹಕಾರಿ ಸಂಸ್ಥೆಗಳ ಮುಂದಾಳುತನ ಶ್ರೀಮಂತ ವರ್ಗದಲ್ಲೇ ಇದೆ. ಹರಿಜನ ಮತ್ತು ಗಿರಿಜನರಲ್ಲಿ ಕೆಲವೇ ಮಂದಿ ನಾಯಕತ್ವದಲ್ಲಿ ಇದ್ದಾರೆ. ಅವರ ಕೈಯಲ್ಲಿ ಸಹಕಾರಿ ಸಂಸ್ಥೆಗಳ

ಆಡಳಿತ ಬಂದಿಲ್ಲ. ಬಹುಶಃ ಇನ್ನೂ ಅನೇಕ ವರ್ಷಗಳವರೆಗೆ ಇವರ ಕೈಯ್ಯಲ್ಲಿ ಆಡಳಿತಬರುವಹಾಗೆ ಕಾಣುವುದಿಲ್ಲ. ಏತಕ್ಕೆಂದರೆ ಅವರು ಇನ್ನೂ ಆ ಮಟ್ಟಕ್ಕೆ ಬಂದಿಲ್ಲ. ಈವೊತ್ತು ಯಾರ ಸಲುವಾಗಿ ಈ ಸಹಕಾರಿ ಸಂಸ್ಥೆಗಳು ಕೆಲಸ ಮಾಡಬೇಕೋ ಆರೀತಿ ಮಾಡದೇ ಅವರನ್ನು ಶೋಷಣೆ ಮಾಡುವ ಸಂಸ್ಥೆಗಳಾಗಿ ನಡೆಯುತ್ತಾ ಇರುವುದು ಕಂಡು ಬರುತ್ತಾ ಇದೆ. ಈಗ ನಮ್ಮ ರಾಜ್ಯದಲ್ಲಿರುವ ಅನೇಕ ಸಂಸ್ಥೆಗಳ ಕೆಲಸ ಬಡಜನತೆಗೆ ಸಹಾಯವಾಗುವ ರೀತಿಯಲ್ಲಿ ಇಲ್ಲ. ಅವರು ಯಾವರೀತಿ ಕೆಲಸಮಾಡುತ್ತಾರೆ ಎನ್ನುವುದನ್ನು ಪರಿಶೀಲನೆ ಮಾಡಿದರೆ ಗೊತ್ತಾಗುತ್ತದೆ. ನಿಜವಾಗಿಯೂ ಈ ವೊತ್ತು ಸಮಾಜವಾದವನ್ನು ರಚನೆ ಮಾಡಬೇಕಾದರೆ ನಮ್ಮ ದೇಶವನ್ನು ಪರಿವರ್ತನೆ ಮಾಡುವ ಉಪಕರ್ಣವಾಗಿ ಸಹಕಾರ ಚಳುವಳಿಯನ್ನು ಉಪಯೋಗಿಸಿ ಮೂಲಭೂತವಾದ ಬದಲಾವಣೆಗಳನ್ನು ಮಾಡಬೇಕು. ಈಗ ಸಹಕಾರಿ ಸಂಸ್ಥೆಗಳು ಮಧ್ಯವರ್ತಿಗಾರರ ದಳ್ಳಾಳಿಗಳು ಮಾಡುವ ಕೆಲಸ ಕಾರ್ಯಗಳ ಸಂಸ್ಥೆಗಳಾಗಿ ಉಳಿದಿವೆ. ಈ ಸಹಕಾರ ಸಂಸ್ಥೆಗಳು ಉತ್ಪಾದಕರ ಮತ್ತು ಬಳಕೆದಾರರ ಸಂಸ್ಥೆಗಳಾಗಿ ಅವರ ಹಿತವನ್ನು ಸಾಧಿಸಬೇಕು.

4-00 P.M.

ಇನ್ನು ಹರಿಜನ ಮತ್ತು ಗಿರಿಜನರ ಸಹಕಾರ ಸಂಘಗಳ ಸೊಸೈಟಿ ಬಗ್ಗೆ ಅನೇಕ ಸದಸ್ಯರು ಅನೇಕ ಪ್ರಶ್ನೆಗಳನ್ನು ಕೇಳಿದ್ದಕ್ಕೆ ಮಾನ್ಯ ಸಚಿವರ ಒಂದೇ ಒಂದು ಉತ್ತರ ಎಲ್ಲಿ ಹಣ ವಾಪಸ್ಸು ಬರಲಿಲ್ಲವೋ ಅಲ್ಲಿ ಇನ್ನು ಮುಂದೆ ಸರ್ಕಾರದ ಸಹಾಯವನ್ನು ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ ಎಂದು. ನಮ್ಮ ರಾಜ್ಯದಲ್ಲಿರುವ ಎಷ್ಟೋ ಸಂಘಗಳಲ್ಲಿ ಎಷ್ಟೋ ಹಣ ಬಾಕಿ ಉಳಿದಿದೆ. ಎಷ್ಟೋ ಸಂಘಗಳು ನಿಷ್ಪ್ರಯೋಜಕವಾಗಿವೆ. ಇದನ್ನು ಪರಿಶೀಲನೆ ಮಾಡಿ ನೋಡಬೇಕು. ಈ ಸೊಸೈಟಿಗಳಲ್ಲಿ ಹಣ ಪಡೆದವರು, ಮನೆ ಕಟ್ಟಿದ್ದು ನಮ್ಮ ಜಿಲ್ಲೆಯಲ್ಲಿ ನಮ್ಮ ಕಣ್ಣಿಗೆ ಕಾಣುವುದಿಲ್ಲ. ಕಾರಣ ಅವರು ಹಣವನ್ನು ತೆಗೆದುಕೊಂಡು ಬೇರೆ ರೀತಿಯಾಗಿ ವಿನಿಯೋಗಿಸಿಕೊಂಡಿದ್ದಾರೆ. ಆದುದರಿಂದ ನನ್ನ ಒಂದು ಸಲಹೆ ಏನೆಂದರೆ ಇನ್ನು ಮುಂದಾದರೂ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನವರಿಗೆ ಮನೆ ಕಟ್ಟುವುದಕ್ಕೆ ಏನು ಖರ್ಚು ಮಾಡುತ್ತಿರೋ ಆ ಹಣವನ್ನು ಅವರಿಗೆ ಸಿಗುವ ರೀತಿಯಲ್ಲಿ ಬೇರೆ ಏನಾದರೂ ವ್ಯವಸ್ಥೆ ಮಾಡಿ· ಅವರಿಗೆ ನೇರವಾಗಿ ಸಿಗುವ ಹಾಗೆ ಯಾವುದಾದರೂ ಬೇರೆ ಏಜೆನ್ಸಿ ಮುಖಾಂತರ ಮಾಡಿಕೊಡಬೇಕು. ಅವರಿಗೆ ಮೀಸಲಾಗಿಟ್ಟ ಹಣವನ್ನು ರಾಜಕಾರಣಿಗಳ ಪ್ರಭಾವದಿಂದ ಮಧ್ಯವರ್ತಿ ದಳ್ಳಾಳಿಯವರ ಕೈಗೆ ಸಿಕ್ಕಿಸದೆ ನೇರವಾಗಿ ಇವರಿಗೆ ತಲುಪುವಂತೆ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ.

ಇನ್ನು ಹರಿಜನ ಮತ್ತು ಗಿರಿಜನರಿಗೆ ಭೂಮಿ ಕೊಡುವುದಾಗಲಿ ಮನೆ ಕಟ್ಟಿಕೊಡುವುದಾಗಲಿ ಸಹಕಾರಿ ಸಂಘಗಳ ಮೂಲಕ ಸಾಧ್ಯವಾಗದಿದ್ದರೆ ಬೇರೆ ಏಜೆನ್ಸಿಯವರ ಮೂಲಕವಾಗಿಯಾಗಲಿ ಅವರಿಗೆ ಒದಗಿಸುವ ವ್ಯವಸ್ಥೆಯನ್ನು ಮಾಡಿಕೊಡಬೇಕು.

ಇನ್ನು ನಮ್ಮಲ್ಲಿ ಅಗ್ರಿಕಲ್‌ಚರಲ್ ಪ್ರೊಡ್ಯೂಸರ್ಸ್ ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿಗಳು ಇವೆ. ಅವುಗಳು ನಮ್ಮಲ್ಲಿರತಕ್ಕಂಥ ಪ್ರೈವೇಟ್ ದಳ್ಳಾಳಿಗಳು ಮಾಡುವುದಕ್ಕಿಂತ ಹೆಚ್ಚಿನ ಕೆಲಸ ಮಾಡುತ್ತಾ ಇಲ್ಲ. ಉತ್ಪಾದಕರಿಗೂ ಗ್ರಾಹಕರಿಗೂ ನೇರ ಸಂಬಂಧ ಕಲ್ಪಿಸುವ ಕೆಲಸ ಸೊಸೈಟಿಯವರ ಕೈಯಲ್ಲಿ ಆಗುವುದಿಲ್ಲ. ಅವರಲ್ಲಿ ರೈತರು ಯಾವುದಾದರೂ ದವಸವನ್ನು ಇಟ್ಟರೆ ಅವರಿಗೆ ಸ್ವಲ್ಪ ಅಡ್ವಾನ್ಸ್ ಕೊಟ್ಟು ಮಾರಾಟ ಆದಮೇಲೆ ಬಾಕಿ ಹಣ ಕೊಡುತ್ತಾರೆ. ಈ ಸೊಸೈಟಿಯವರು ಪ್ರೈವೇಟ್ ಮರ್ಚೆಂಟ್ಸ್ ಜೊತೆಯಲ್ಲಿ ಕಾಂಪಿಟ್ ಮಾಡುವುದಕ್ಕಾಗುವುದಿಲ್ಲ. ಹೀಗಿರುವುದರಿಂದ ಈ ಅಗ್ರಿಕಲ್‌ಚರ್ ಪ್ರೊಡ್ಯೂಸರ್ಸ್ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಗಳು ನಿರುಪಯುಕ್ತ ಆಗುವ ಸ್ಥಿತಿಯಲ್ಲಿವೆ ಎಂದು ನನ್ನ ಗಮನಕ್ಕೆ ಬಂದಿದೆ. ನಮ್ಮ ಸೌತ್ ಕೆನರಾದಲ್ಲೂ ಈ ರೀತಿ ಒಂದು ದೊಡ್ಡ ಅಗ್ರಿಕಲ್‌ಚರಲ್ ಮಾರ್ಕೆಟಿಂಗ್ ಸೊಸೈಟಿ ಇದೆ. ಅಲ್ಲಿ ರೈತರಿಗೆ ಅಡಿಕೆಗೆ ನ್ಯಾಯವಾದ ಬೆಲೆ ಸಿಗುತ್ತಾ ಇಲ್ಲ. ಮಾಲಿನ ಮಾಲೀಕರಿಗೆ ಗೊತ್ತಿಲ್ಲದೇ ಮಾರಾಟ ಮಾಡುವ ವ್ಯವಸ್ಥೆ ಮಾಡುತ್ತಿದ್ದಾರೆ. ಅಡಿಕೆಗೆ ಮಾರುಕಟ್ಟೆ ಕಂಡುಹಿಡಿದು ಉತ್ತಮ ಬೆಲೆಗೆ ಮಾರಾಟ ಮಾಡುವ ಪ್ರಯತ್ನ ಆಗಬೇಕು. ನಾನು ಹೇಳುವುದು ಏನೆಂದರೆ ಬತ್ತ ಇದ್ದರೆ ಅದನ್ನು ಅಲ್ಲೇ ಅಕ್ಕಿ ಮಾಡಿಸಿ ಅಲ್ಲೇ ಕನ್‌ಸ್ಯೂಮರ್ಸ್‌ಗೆ ಮಾರಾಟ ಮಾಡುವ ವ್ಯವಸ್ಥೆ ಮಾಡಿದರೆ ಇದರಿಂದ ರೈತರಿಗೆ ನ್ಯಾಯ ಬೆಲೆ ಸಿಕ್ಕುತ್ತದೆ. ಈ ರೀತಿ ಮಾಡುವ ಹಾಗೆ ಸರ್ಕಾರದವರು ಏರ್ಪಾಡು ಮಾಡಿಕೊಟ್ಟರೆ ರೈತರಿಗೆ ನ್ಯಾಯ ಬೆಲೆ ಸಿಕ್ಕಿದಂತಾಗುತ್ತದೆ ಎಂದು ಹೇಳುತ್ತೇನೆ. ನ್ಯಾಯವಾಗಿ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಗಳಿಂದ ರೈತರು ಪ್ರಯೋಜನ ಪಡೆಯುವುದಕ್ಕೆ ಸಾಧ್ಯವಾಗಬೇಕು. ಇವನ್ನು ದಳ್ಳಾಳಿಗಳ ಸಂಸ್ಥೆಗಳಾಗಿ ಉಳಿಸಿದರೆ ಪ್ರಯೋಜವಾಗುವುದಿಲ್ಲ ಎಂದು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ.

(ಶ್ರೀ ಬಿ. ವಿ. ಕಕ್ಕಿಲಾಯ)

ಇನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕೋ-ಆಪರೇಟಿವ್ ಸೊಸೈಟಿ ಒಂದು ಮಂಗಳೂರಿನಲ್ಲಿ ಇದೆ. ಈ ಸೊಸೈಟಿಗೆ ಸರ್ಕಾರದ ಸಹಾಯಧನ ಬಂದಿದೆ. ಈ ಸೊಸೈಟಿಯಲ್ಲಿ ಸರ್ಕಾರ ಧನ ಸಹಾಯ ಕೊಟ್ಟಿದ್ದನ್ನು ಅಲ್ಲಿದ್ದಂಥ ಡೈರಕ್ಟರುಗಳು ಸಾಲವಾಗಿ ತಮ್ಮೊಳಗೆ ಹಂಚಿಕೊಂಡು ದೊಡ್ಡ ದೊಡ್ಡ ವ್ಯಾಪಾರಸ್ಥರಾಗಿದ್ದಾರೆ. ಅವರು ಸಾಲ ಪಡೆದದ್ದನ್ನು ವರ್ಷಾನಗಟ್ಟಲೆ ವಾಪಸ್ಸು ಕೊಡದೆ ಆ ಸೊಸೈಟಿಗಳು ಮುಳುಗುವ ಸ್ಥಿತಿಯಲ್ಲಿವೆ. ಅವರು ಯಾರೇ ಆಗಲಿ ಅವರಿಂದ ಎಷ್ಟು ಹಣ ಬರಬೇಕೋ ಅದನ್ನು ವಸೂಲ್ಮಾಡುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಮತ್ತು ಅವರಿಂದ ಹಣವನ್ನು ವಸೂಲ್ಮಾಡಿಕೊಂಡು ಡೈರಕ್ಟರ್‌ಷಿಪ್‌ನಿಂದ ಕಿತ್ತು ಹಾಕಿ ಅಂತಹ ಸೊಸೈಟಿಗಳನ್ನು ಲಾಭದಾಯಕವಾಗಿ ನಡೆಸುವುದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ನಮ್ಮ ಜಿಲ್ಲೆಯ ಅನುಭವ ಹೇಳಬೇಕಾದರೆ ನಮ್ಮ ಸೌತ್ ಕೆನರಾ ಜಿಲ್ಲೆಯಲ್ಲಿ ಹೋಲ್ ಸೇಲ್ ಕೋ-ಆಪರೇಟೀವ್ ಸೊಸೈಟಿಯವರು ಮಂಗಳೂರಿನಲ್ಲಿ ಜನತಾ ಬಜಾರ್ ನಡೆಸುತ್ತಿದ್ದಾರೆ. ಅದು ಮಾಯಾ ಬಜಾರ್ ಆಗಿದೆ ಎಂದು ಹೇಳಬೇಕಾಗಿದೆ. ಸುಮಾರು 7 ಲಕ್ಷ ರೂಪಾಯಿಯಷ್ಟು ಹಣ ಮಾಯವಾಗಿದೆ. ಅದಕ್ಕೆ ಲೆಕ್ಕಾಚಾರವೇ ಇಲ್ಲ. ಇದರ ಬಗ್ಗೆ ದೂರು ಕೂಡ ಬಂದಿದೆ. ಇದರ ಬಗ್ಗೆ ತನಿಖೆ ನಡೆಸಬೇಕು. ಇದಕ್ಕೆ ಕಾರಣರಾದವರು ಯಾರೇ ಇರಲಿ ತನಿಖೆ ನಡೆಸಬೇಕು. ಅಲ್ಲಿ ಸ್ಟೋರ್ಸ್ ಮುಖ್ಯಾಧಿಕಾರಿಗಳಿಗೆ ಗೊತ್ತಿದ್ದರೂ ಅವರು ಇದರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳುವುದಕ್ಕೆ ತಯಾರಾಗಿಲ್ಲ ಎಂದು ಕಂಡುಬರುತ್ತದೆ. ಜನತಾ ಬಜಾರ್ ಅಧ್ಯಕ್ಷರು ಸಕ್ಕರೆಯನ್ನು ರೈಲಿನಲ್ಲಿ ತೆಗೆದುಕೊಂಡು ಬಂದು ಲಾರಿಯಲ್ಲಿ ತಂದಿದ್ದೇವೆ ಎಂದು ಹೇಳಿ ಬಿಲ್ ಮಾಡಿ ಜಾಸ್ತಿ ಫ್ರೈಟ್ ಮಾಡಿ ಹೊಡೆದುಕೊಂಡಿದ್ದಾರೆ. ಈ ದುರ್ವ್ಯವಹಾರದಲ್ಲಿ ಇನ್ನೊಂದು ಉದಾಹರಣೆ ಹೇಳುವುದಾದರೆ ನಮ್ಮಲ್ಲಿ ವ್ಯಾಪಾರಕ್ಕೆ ಬೇಕಾದ ವಸ್ತುಗಳು ಇಲ್ಲಿ ಸಿಕ್ಕುವುದಿಲ್ಲ ಎಂದು ಹೇಳಿ ವಿಮಾನದಲ್ಲಿ ಬಾಂಬೆಗೆ ಹೋಗಿ 4 ದಿವಸ ಮಜಾ ಮಾಡಿ ಭತ್ಯ ಮತ್ತು ಅಲ್ಲಿ ಕಾರ್‌ನಲ್ಲಿ ಓಡಾಡುವ ಖರ್ಚು ವಗೈರೆ ಎಲ್ಲವನ್ನೂ ಸೇರಿಸಿ ಜನತಾ ಬಜಾರಿನ ಮೇಲೆ ಹಾಕುತ್ತಾರೆ. ಆ ರೀತಿಯಾಗಿ ಈವೊತ್ತಿನ ದಿವಸ ಜನತಾ ಬಜಾರ್ ಕೆಲವೇ ಜನರ ಲಾಭಕ್ಕೆ ಮೀಸಲಾಗಿ ಇದ್ದ ಹಾಗೆ ಇದೆ. ಪೀಠೋಪಕರಣಗಳನ್ನು ತಯಾರು ಮಾಡಿ ಆಫೀಸಿಗೆ ಕೊಟ್ಟರೆ ಅಧ್ಯಕ್ಷರು ಅದನ್ನು ಮನೆಗೆ ಸಾಗಿಸಿ ಉಪಯೋಗಿಸಿಕೊಳ್ಳುತ್ತಾರೆ. ಅವರು ಪಾಪ ಅನೇಕ ಸಂಸಾರಗಳನ್ನು ನಡೆಸುವ ಭಾರ ಹೊತ್ತವರು. ಇದನ್ನು ವಿಚಾರ ಮಾಡಿ ನೋಡಿ. ಅಂಥಾದ್ದೇನಾದರೂ ಇದ್ದರೆ ತೀವ್ರ ಕ್ರಮ ತೆಗೆದುಕೊಳ್ಳಿ. ಅವರು ಯಾವ ರಾಜಕಾರಿಣಿಯೇ ಆಗಲಿ ಎಷ್ಟೇ ಇನ್‌ಫ್ಲೂಯೆನ್ಸ್ ಇರಲಿ ಇದರ ಬಗ್ಗೆ ತನಿಖೆ ನಡೆಸುವುದಕ್ಕೆ ಏರ್ಪಾಡು ಮಾಡಿ. ಆ ರೀತಿ ತನಿಖೆ ನಡೆಸುವುದಕ್ಕೆ ಯಾರನ್ನಾದರೂ ಕಳುಹಿಸಿದರೂ ಕೂಡ ಅಲ್ಲಿ ಮೋತಿಮಹಲ್‌ನಲ್ಲಿ ಅವರಿಗೆ ಮಜಾ ಮಾಡಿಸಿ, ಊಟ ಹಾಕಿಸಿ, ಕ್ಯಾಬರೆ ತೋರಿಸಿ ಅವ್ಯವಹಾರಗಳನ್ನು ಮುಚ್ಚಿಬಿಡುತ್ತಾರೆ. ಅಲ್ಲದೆ ಅದರ ಬಿಲ್‌ನ್ನು ಕೂಡ ಜನತಾ ಬಜಾರಿನ ಲೆಕ್ಕಕ್ಕೆ ಸೇರಿಸಿ ಬಿಡುತ್ತಾರೆ. ಆದುದರಿಂದ ಇದನ್ನು ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನೊಂದು ವಿಚಾರ ಬೆಂಗಳೂರು ಸಿಟಿ ಒಳಗೆ ಒಂದು ಐಡಿಯಲ್ ಹೋಮ ಹೌಸಿಂಗ್ ಸೊಸೈಟಿ ಇದೆ. ಹೆಸರು ಚೆನ್ನಾಗಿದೆ. ನನ್ನ ಗಮನಕ್ಕೆ ಬಂದಿರುವ ಹಾಗೆ ಆ ಸೊಸೈಟಿಯಲ್ಲಿ ಗೌರ್ನರ್‌ಗೆ ಸಂಬಂಧಪಟ್ಟವರು, ರಾಷ್ಟ್ರಾಧ್ಯಕ್ಷರಿಗೆ ಸಂಬಂಧಪಟ್ಟವರು, ಮಂತ್ರಿಗಳಿಗೆ ಸಂಬಂಧಪಟ್ಟವರು, ಸೆಕ್ರೆಟರಿಗಳಿಗೆ ಸಂಬಂಧಪಟ್ಟವರು ಇಂತಹ ದೊಡ್ಡ ದೊಡ್ಡ ಮಹನೀಯರುಗಳು ಡೈರಕ್ಟರಾಗಿ ಇದ್ದಾರೆ. ಅವರು ಏನು ಮಾಡಿದ್ದಾರೆ ಎಂದರೆ ಮುಜರಾಯಿ ಜಮೀನುಗಳನ್ನು ದುಬಾರಿ ಬೆಲೆಕೊಟ್ಟು ತೆಗೆದುಕೊಂಡು ಸರ್ಕಾರಕ್ಕೆ ಬರಬೇಕಾದ ಸ್ಟಾಂಪ್ ಡ್ಯೂಟಿಯನ್ನು ವಂಚಿಸಿ ಒಂದು ಲಕ್ಷ ರೂಪಾಯಿಯಷ್ಟು ಸೊಸೈಟಿಗೆ ಮೋಸ ಮಾಡಿದ್ದಾರೆ. ಈ ಸೊಸೈಟಿ ಈವೊತ್ತು ಯಾವ ಸ್ಥಿತಿಯಲ್ಲಿದೆ ಎಂದರೆ ದುಡ್ಡು ಕೊಟ್ಟವರಿಗೆ ಸೈಟೂ ಇಲ್ಲ, ದುಡ್ಡೂ ಇಲ್ಲದಂತಾಗಿದೆ. ಆದುದರಿಂದ ಈ ಐಡಿಯಲ್ ಹೋಮ್ಸ್ ಕೋ-ಆಪರೇಟಿವ್ ಸೊಸೈಟಿ ಬಗ್ಗೆ ವಿಚಾರ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ನಮ್ಮ ಸಹಕಾರಿ ಸಂಸ್ಥೆಗಳು ಕನ್‌ಸ್ಯೂಮರ್ ಇಂಡಸ್ಟ್ರೀಸ್ ಪ್ರಾರಂಭ ಮಾಡಬೇಕು. ಅಮುಲ್ ಇತ್ಯಾದಿ ವಸ್ತುಗಳನ್ನು ತಯಾರು ಮಾಡುವಂಥ ಸಹಕಾರಿ ಸಂಸ್ಥೆಗಳು ಲಾಭದಾಯಕವಾಗುವ ರೀತಿಯಲ್ಲಿ ಮಹಾರಾಷ್ಟ್ರದಲ್ಲಿ ಮತ್ತು ಬೇರೆ ಕಡೆ ಕೆಲಸ ಮಾಡುತ್ತಿವೆ. ನಮ್ಮ ಮೈಸೂರು ರಾಜ್ಯದಲ್ಲಿ ಅದೇ ರೀತಿ ಜನರಿಗೆ ಉಪಯುಕ್ತವಾಗುವಂಥ, ಅಗತ್ಯ ವಸ್ತುಗಳನ್ನು ತಯಾರು ಮಾಡುವಂಥ ಕೈಗಾರಿಕೆಗಳನ್ನು ಸಹಕಾರ ಸಂಸ್ಥೆಗಳ ಮೂಲಕ ನಡೆಸಬೇಕು. ರಿಸರ್ವ್ ಬ್ಯಾಂಕಿ

ಅಥವಾ ಬೇರೆ ಬ್ಯಾಂಕುಗಳಿಂದ ಸಾಲವನ್ನು ಪಡೆದು ಏಕೆ ಇಂಥ ಸೊಸೈಟಿಗಳನ್ನು ಪ್ರಾರಂಭ ಮಾಡಬಾರದು ? ಸರ್ಕಾರದವರು ಇದರ ಕಡೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮಲ್ಲಿ ನಿರುದ್ಯೋಗಿ ಇಂಜಿನಿಯರುಗಳಿದ್ದಾರೆ, ಕಾರ್ಮಿಕರು ಇದ್ದಾರೆ, ಟೆಕ್ನೀಷಿಯನ್ಸ್ ಇದ್ದಾರೆ. ಅವರನ್ನೆಲ್ಲ ಉಪಯೋಗಿಸಿಕೊಂಡು ಸಣ್ಣ ಸಣ್ಣ ಕೈಗಾರಿಕೆಗಳನ್ನು ಸಹಕಾರ ಸಂಘಗಳ ಮುಖಾಂತರ ಏಕೆ ಪ್ರಾರಂಭ ಮಾಡಬಾರದು? ಇಂಥ ಸಂಸ್ಥೆಗಳನ್ನು ಸಹಕಾರ ರಂಗದಲ್ಲಿ ಪ್ರಾರಂಭ ಮಾಡುವುದಲ್ಲದೆ ದೊಡ್ಡ ಇಂಡಸ್ಟ್ರಿಯಲ್ ಕೋ-ಆಪರೇಟಿವ್ಸ್ ಕೂಡ ತಾವು ರಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಹಕಾರ ಸಂಘಗಳಲ್ಲಿ ದುಡಿಯುವಂಥ ನೌಕರರ ವಿಚಾರವನ್ನು ಕೂಡ ಸ್ವಲ್ಪ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ಹಿಂದೆ ಒಂದು ಕಮಿಟಿ ಮಾಡಿದ್ದರು. ಅದು ಆಗಿ ಬಹಳ ವರ್ಷವಾಯಿತು. ಈಗ ಪರಿಸ್ಥಿತಿ ಬದಲಾವಣೆಯಾಗಿದೆ. ಆಹಾರ ಧಾನ್ಯಗಳು ಮತ್ತು ಪ್ರತಿಯೊಂದು ನಿತ್ಯ ಜೀವನಕ್ಕೆ ಬೇಕಾದ ವಸ್ತುಗಳ ಬೆಲೆ ಜಾಸ್ತಿಯಾಗಿದೆ. ಆದುದರಿಂದ ಸಹಕಾರ ಸಂಸ್ಥೆಗಳಲ್ಲಿ ದುಡಿಯುವಂಥ ನೌಕರರ ಸಂಬಳ ಮತ್ತು ಇತರ ಅನುಕೂಲತೆಗಳು ಏನಿರಬೇಕು, ಯಾವ ಸ್ಕೇಲಿನಲ್ಲಿ ಇರಬೇಕು ಇದನ್ನೆಲ್ಲ ತೀರ್ಮಾನ ಮಾಡುವುದಕ್ಕೆ ಸೆಕೆಂಡ್ ಪೇ ಕಮಿಟಿ ರಚನೆ ಮಾಡಬೇಕು. ಅನೇಕ ಸಹಕಾರ ಸಂಸ್ಥೆಗಳಲ್ಲಿ ದುಡಿಯುವಂಥ ಕಾರ್ಮಿಕರನ್ನು ಡಿಸ್‌ಮಿಸ್ ಮಾಡುವುದು, ರಿಟ್ರೆಂಚ್ ಮಾಡುವುದು, ಎಷ್ಟೋ ರೀತಿಯಲ್ಲಿ ಕಿರುಕುಳ ಕೊಡುವುದು ನಡೆಯುತ್ತಿದೆ. ಇದರ ಬಗ್ಗೆ ಕೂಡ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಾಗ ಅವುಗಳ ಬಗ್ಗೆ ಕೂಡಲೇ ಪರಿಶೀಲಿಸಿ ಪರಿಹಾರ ಮಾಡಿ ಸೌಹಾರ್ದ ವಾತಾವರಣ ಸಹಕಾರ ಸಂಘಗಳಲ್ಲಿ ಇರುವ ಹಾಗೆ, ಕಾರ್ಮಿಕರ ಸಹಕಾರ ಆಡಳಿತ ವರ್ಗಕ್ಕೆ ಸಿಕ್ಕುವ ರೀತಿಯಲ್ಲಿ ಆಡಳಿತ ವರ್ಗ ಮತ್ತು ನೌಕರರ ನಡುವೆ ಸಹಕಾರದ ವಾತಾವರಣ ಇರುವ ಹಾಗೆ ಮಾಡಿ ಸಹಕಾರಿ ಸಂಸ್ಥೆಗಳು ಐಡಿಯಲ್ ಆಗಿ, ಅಚ್ಚುಕಟ್ಟಾಗಿ ನಡೆಯುವಂತೆ ನೋಡಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿ ಇಷ್ಟು ಸಮಯ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಸಹಕಾರ ಮಂತ್ರಿಗಳು ಮಂಡಿಸಿದಂಥ ಮಾಗಣಿಗೆ ಬೆಂಬಲ ಕೊಡುತ್ತ, ಕೆಲವೊಂದು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ಇಂಡಿಯಾದೇಶದಲ್ಲಿ ಸಹಕಾರ ಚಳುವಳಿಯ ಉದ್ದೇಶವೆಂದರೆ ಸಾಲದ ಶೂಲಕ್ಕೆ ಸಿಕ್ಕಂಥ ರೈತರಿಗೆ ಅದರಿಂದ ವಿಮುಕ್ತಗೊಳಿಸಿ, ಒಕ್ಕಲುತನ ಸುಧಾರಣೆ ಮಾಡುವ ಸಲುವಾಗಿ ಸಹಕಾರ ಚಳುವಳಿಯು ಉದ್ಭವವಾಯಿತು. ಈ ದಿಸೆಯಲ್ಲಿ ಸಹಕಾರಿ ಚಳುವಳಿ ಸುಮಾರು ಅರ್ಧ ಶತಮಾನಕ್ಕಿಂತಲೂ ಮುಂದೆ ಬಂದು ಅನೇಕ ತರಹ ಒಕ್ಕಲುತನದ ಸುಧಾರಣೆಯಲ್ಲಿ ಸಾಧನೆಯನ್ನು ಸಾಧಿಸಿದ್ದರೆ ತಪ್ಪಲ್ಲ. ಈ ಹೊತ್ತಿನ ದಿವಸ ಸಹಕಾರಿ ಚಳುವಳಿಯಲ್ಲಿ ಅನೇಕ ಕಡೆಗೆ ಲೋಪದೋಷಗಳಿವೆ. ಲೋಪದೋಷಗಳಿವೆ ಎಂದ ತಕ್ಷಣ ಈ ಚಳುವಳಿಯನ್ನು ಹೀನಾಯಮಾನವಾಗಿ ಟೀಕಿಸುವುದು ಅಷ್ಟೊಂದು ಸೂಕ್ತವಲ್ಲವೆಂದು ನನ್ನ ಭಾವನೆ. ಸಹಕಾರಿ ಚುಳುವಳಿಯಲ್ಲಿ ಸಹಕಾರಿ ಖಾತೆಯಲ್ಲಿ ಎಲ್ಲಿಯಾದರೂ ಒಬ್ಬ ಅಥವಾ ನಾಲ್ಕೆಂಟು ಕೆಟ್ಟ ಅಧಿಕಾರಿಗಳಿದ್ದರೆ ಎಲ್ಲರೂ ಕೆಟ್ಟವರು ಆಗುವುದಿಲ್ಲ. ಸಹಕಾರಿ ಕ್ಷೇತ್ರದಲ್ಲಿ ಎಲ್ಲಿಯಾದರೂ ಕೆಲವು ಅಧಿಕಾರೇತರ ಪದಾಧಿಕಾರಿಗಳು ಕೆಟ್ಟವರಿದ್ದರೆ ಇಡೀ ಸಂಸ್ಥೆಯ ಪದಾಧಿಕಾರಿಗಳನ್ನು ಟೀಕಿಸುವುದು ಸರಿಯಲ್ಲ. ಈ ದೃಷ್ಟಿಯಿಂದ ಸಹಕಾರ ಚಳುವಳಿಯಲ್ಲಿ ಸಣ್ಣಪುಟ್ಟ ತಪ್ಪುಗಳಿದ್ದರೆ ಅದಕ್ಕೆ ಸರ್ಕಾರವನ್ನು ಟೀಕಿಸುವುದು ಸರಿಯಲ್ಲ.

ಲೋಪದೋಷಗಳು ಎಲ್ಲ ಕಡೆಗೂ, ಸಾಮಾನ್ಯವಾಗಿ ಎಲ್ಲ ಖಾತೆಗಳಲ್ಲಿಯೂ ಆಗುತ್ತಿರುತ್ತವೆ. ಆ ಲೋಪದೋಷಗಳನ್ನು ನಾವು ಪರಿಹರಿಸುವುದು, ಅವುಗಳಿಗೆ ತಕ್ಕ ಸಲಹೆಗಳನ್ನೂ ಸೂಚನೆಗಳನ್ನೂ ಕೊಡುವುದು ಅಧಿಕಾರಿಗಳ, ಶಾಸಕರ ಹಾಗೂ ದೇಶದ ಪ್ರಜೆಗಳ ಕರ್ತವ್ಯ. ಈ ದಿಸೆಯಲ್ಲಿ ಪ್ರತಿಯೊಬ್ಬ ಪ್ರಜೆಯೂ ಕೂಡ ಸಲಹೆ ಸೂಚನೆಗಳನ್ನು ಕೊಡಲಿ. ಸರ್ಕಾರ ಕೂಡ ಅಂಥ ಸಲಹೆ ಸೂಚನೆಗಳನ್ನು ತೆಗೆದುಕೊಂಡು ಗಮನಾರ್ಹವಾದ ಕೆಲವು ಸುಧಾರಣೆಗಳನ್ನು ಮಾಡಲಿ ಎನ್ನುವ ಮಾತನ್ನು ಕೂಡ ನಮ್ಮ ಸಹಕಾರ ಖಾತೆಯ ಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ನಾನು ಸೂಚಿಸಬಯಸುತ್ತೇನೆ. ಈ ಹೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಸಹಕಾರ ಚಳುವಳಿಯಲ್ಲಿ ಅನೇಕ ತರಹ ತಪ್ಪುಗಳು, ದೋಷಗಳು ಕಂಡುಬರುತ್ತಿವೆ. ಇವುಗಳನ್ನು ಸುಧಾರಿಸಲೇಬೇಕು. ಸುಧಾರಿಸದೆ ಹೋದರೆ ಸಹಕಾರಿ ಚಳುವಳಿಯ ಪ್ರಯೋಜನ ಸಿಕ್ಕದೆ ಹೋದೀತು ಎನ್ನುವ ಮಾತನ್ನು ಮರೆಯಲಿಕ್ಕಾಗದು. ನಮ್ಮ ರಾಜ್ಯದಲ್ಲಿ 20 ಸಾವಿರ ಸಹಕಾರ ಸಂಘಗಳಿವೆ ಅವುಗಳಲ್ಲಿ ಸರಿಯಾಗಿ ಕೆಲಸ ಮಾಡದೆ ಡೀಫಂಕ್ಟ್ ಆಗಿರುವ ಸಂಸ್ಥೆಗಳನ್ನು ಮುಚ್ಚಿಸಲೇಬೇಕು.

(ಶ್ರೀ ಬಿ. ಜಿ. ಬಣಕಾರ್)

ಎಲ್ಲೆಲ್ಲಿ ಸಹಕಾರ ಸಂಘಗಳು ಉತ್ತಮವಾಗಿ ಕೆಲಸ ಮಾಡುತ್ತಿವೆ, ಸಮಾಜದ ಸಲುವಾಗಿ, ರೈತರ ಸಲುವಾಗಿ ಕೆಲಸ ಮಾಡುತ್ತಿವೆ ಅಂಥ ಸಹಕಾರ ಸಂಘಗಳಿಗೆ ಉತ್ತೇಜನ ಕೊಡುವಂಥದ್ದು ಸರ್ಕಾರದ ಮಹತ್ವದ ಕೆಲಸ. ಈ 20 ಸಾವಿರ ಸಹಕಾರ ಸಂಘಗಳಲ್ಲಿ ನಮ್ಮ ರಾಜ್ಯದಲ್ಲಿ 8931 ಕ್ರೆಡಿಟ್ ಸಹಕಾರ ಸಂಘಗಳಿವೆ. ಈ ಕ್ರೆಡಿಟ್ ಸಂಘಗಳೇ ಸಹಕಾರ ಚಳುವಳಿಯ ತಳಹದಿ ಎಂದರೆ ತಪ್ಪಲ್ಲ. ಇವನ್ನು ಭದ್ರ ಮಾಡದೆ ಹೋದರೆ ಸಹಕಾರಿ ಸಂಘಗಳ ಚಳುವಳಿಗೆ ಪೆಟ್ಟು ಬಿದ್ದೀತು. ಈ 8931 ಸಹಕಾರಿ ಸಂಘಗಳ ಪರಿಸ್ಥಿತಿಯನ್ನು ನೋಡಿದರೆ, ಅವುಗಳ ಆಡಳಿತ, ಅವುಗಳ ಕಾರ್ಯ ದಕ್ಷತೆ ನೋಡಿದರೆ ಸ್ವಲ್ಪ ಮಟ್ಟಿಗೆ ಚಿಂತಾಜನಕ ಪರಿಸ್ಥಿತಿ ಇದೆ. ನಮ್ಮ ರಾಜ್ಯದಲ್ಲಿ 8308 ಪಂಚಾ ಯತಿಗಳಿವೆ. ಒಂದೊಂದು ಕಡೆ ಒಂದೊಂದು ಪಂಚಾಯತಿ ಸರಹದ್ದಿನಲ್ಲಿ ಎರಡು ಮೂರು ಸಹಕಾರ ಸಂಘಗಳಿವೆ. ಒಂದೇ ಪಂಚಾಯತಿಯ ಹದ್ದಿನಲ್ಲಿ ಒಂದಕ್ಕಿಂತ ಹೆಚ್ಚು ಕ್ರೆಡಿಟ್ ಸಂಘಗಳು ಸ್ಥಾಪನೆ ಮಾಡುವುದನ್ನು ಬಂದ್ ಮಾಡಲೇಬೇಕು. ಒಂದೊಂದು ಪಂಚಾಯಿತಿಗೆ ಒಂದೊಂದು ಸಹಕಾರ ಸಂಘ ಸ್ಥಾಪನೆ ಮಾಡುವ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಆ ಸಂಘಗಳಲ್ಲಿರುವ ಸದಸ್ಯತ್ವವನ್ನು ನೋಡಿದರೆ ಯಾರು ಪದಾಧಿಕಾರಿಗಳಾಗಿರುತ್ತಾರೆ ಅವರಿಗೆ ವಿರೋಧ ಪಡಿಸುವವ ರಿದ್ದಾರೆ, ಯಾವುವೇ ರಾಜಕೀಯ ಪಕ್ಷದವರಿರಲಿ ಒಂದು ಪಕ್ಷದವರು ಮತ್ತೊಂದು ಪಕ್ಷದವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳುವುದಿಲ್ಲ. ಅಪೀಲ್ ಮಾಡಿದರೆ ವರ್ಷಾನುಗಟ್ಟಲೆ ಹೋಗುತ್ತದೆ. ಪ್ರತಿಯೊಂದು ಸಹಕಾರಿ ಸಂಘದಲ್ಲಿಯೂ ಆಯಾ ಪಂಚಾಯಿತಿ ಹದ್ದಿನಲ್ಲಿರುವಂಥ ಪ್ರತಿಯೊಬ್ಬರನ್ನೂ ಸದಸ್ಯರನ್ನಾಗಿ ಮಾಡಿಕೊಳ್ಳಬೇಕು. ಹಾಗೆ ಸದಸ್ಯರನ್ನಾಗಿ ಮಾಡಿಕೊಳ್ಳಲಿಲ್ಲವೆಂದರೆ ಕೇಂದ್ರ ಸಹಕಾರಿ ಬ್ಯಾಂಕಿನಿಂದ ಅದಕ್ಕೆ ಸಹಾಯ ಮಾಡಬೇಡಿ ಎನ್ನುವ ಆದೇಶವನ್ನು ಸರ್ಕಾರ ಕೊಡಬೇಕು. ಸಹಕಾರ ಸಂಘದಲ್ಲಿ 9 ಜನರನ್ನು ಆರಿಸಬೇಕಾಗಿದ್ದರೆ 9 ಜನ ಸದಸ್ಯರು ಯಾರಿರುತ್ತಾರೆ ಅವರು ಆ ಚುನಾವಣೆಯ ಸಲುವಾಗಿ ನಾಮಪತ್ರ ಸಲ್ಲಿಸಿದರು ಎಂದರೆ ಆ 9 ಜನರೂ ಕೂಡ ಕಾರ್ಯಕಾರಿ ಸಮಿತಿಯ ಉಮೇದುವಾರರು. ಅವರೇ ನಾಮ ಪತ್ರಗಳನ್ನು ಸ್ಕ್ರುಟಿನಿ ಮಾಡುವವರು. ಅನೇಕ ಕಡೆ ತಮ್ಮ ನಾಮಪತ್ರಗಳನ್ನು ಇಟ್ಟು ಉಳಿದವರು ಯಾರೇ ಇರಲಿ ಅವನ್ನು ಕಿತ್ತೊಗೆಯುತ್ತಾರೆ ಅಥವಾ ನಾಮಪತ್ರವೇ ಬಂದಿಲ್ಲ ಎಂದು ಹೇಳುವಂಥ ಕ್ರಮ ಅಲ್ಲಲ್ಲಿ ಕಂಡುಬರುತ್ತದೆ. ಇದರ ಬಗ್ಗೆ ಕೇಳಿದರೆ, ನೀವು ಬೇಕಾದರೆ ಅಪೀಲ್ ಹೋಗಿ ಎಂದು ಹೇಳುತ್ತಾರೆ. ಅಪೀಲ್ ಹೋಗಿ ಅದು ತೀರ್ಮಾನವಾಗಬೇಕಾದರೆ ಎರಡು ಮೂರು ವರ್ಷವಾಗುತ್ತದೆ. ಆದುದರಿಂದ ಪಂಚಾಯಿತಿ ಚುನಾವಣೆಗಳಿಗೆ ಯಾವರೀತಿ ರಿಟರ್ನಿಂಗ್ ಆಫೀಸರನ್ನು ತಹಸೀಲ್ದಾರರು ನೇಮಿಸುತ್ತಾರೆ, ಆ ರೀತಿ ಗ್ರಾಮ ಮಟ್ಟದ ಸಹಕಾರ ಸಂಘಗಳಿಗೆ ಕೋ-ಆಪರೇಟಿವ್ ಎಕ್ಸ್ಟೆನ್‌ಷನ್ ಆಫೀಸರ್ ಅಥವಾ ರೆವೆನ್ಯೂ ಅಧಿಕಾರಿಯನ್ನು ನೇಮಿಸಿ ಚುನಾವಣೆಯನ್ನು ಮಾಡಬೇಕು ಎಂದು ಹೇಳುತ್ತೇನೆ.

ಸಹಕಾರ ಸಂಘಗಳ ಚುನಾವಣೆ ಪ್ರತಿ ವರ್ಷ ನಡೆಯುವುದು ಒಳ್ಳೆಯದಲ್ಲ. ಒಂದು ವರ್ಷ ಇತ್ತು ಎಂದರೆ ಚುನಾವಣೆ ಡಿಸ್‌ಪ್ಯೂಟ್ಸ್ ನಡೆದರೆ ಅದರಲ್ಲಿಯೇ ಎರಡು ಮೂರು ವರ್ಷ ಹೋಗುತ್ತದೆ. ಅಷ್ಟರಲ್ಲಿ ಹಳೇ ಡೈರೆಕ್ಟರುಗಳ ಮಂಡಳಿ ಹೋಗಿ ಹೊಸ ಡೈರೆಕ್ಟರುಗಳ ಮಂಡಳಿ ಬಂದಿರುತ್ತದೆ. ಆದುದರಿಂದ ಒಂದು ವರ್ಷದ ಅವಧಿಗೆ ಬದಲಾಗಿ ಮೂರು ವರ್ಷಕ್ಕೆ ಒಮ್ಮೆ ಚುನಾವಣೆಯಾಗಬೇಕೆಂಬ ನಿಯಮವನ್ನು ತರಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ಹಳ್ಳಿಗಳಲ್ಲಿ ಸಹಕಾರ ಸಂಘ ನಡೆಯಬೇಕು ಎಂದರೆ ಕಾರ್ಯದರ್ಶಿ ಸರಿಯಾಗಿ ಕೆಲಸ ಮಾಡಬೇಕು. ಸಹಕಾರ ಸಂಘದ ಕಾರ್ಯದರ್ಶಿಯ ಪರಿಸ್ಥಿತಿಯನ್ನು ನೋಡಿದರೆ ಒಬ್ಬ ಕಾರ್ಯದರ್ಶಿಗೆ 20 ರೂಪಾಯಿ ಪಗಾರ ಕೊಟ್ಟರೆ, ಆತ ಬೇರೆ ಮಾರ್ಗದಿಂದ 50 ರೂಪಾಯಿ ಅಥವಾ ನೂರು ರೂಪಾಯಿಗಳವರೆಗೂ ತೆಗೆಯುತ್ತಾನೆ. 20 ರೂಪಾಯಿ ಪಗಾರ ತೆಗೆದುಕೊಳ್ಳು ವವನು ಯಾವರೀತಿ ಕೆಲಸ ಮಾಡಬಹುದು ? ಆತ ಒಂದು ಹೊಲ, ಅಂಗಡಿ ಇಟ್ಟುಕೊಂಡಿರುತ್ತಾನೆ. ರೈತರಿಗೆ ಸಹಾಯಕವಾಗಿ ಇರಬೇಕು ಎನ್ನುವ ಪರಿಸ್ಥಿತಿ ಬರಬೇಕಾದರೆ ಕಾರ್ಯದರ್ಶಿಗಳಿಗೆ ಒಳ್ಳೆಯ ರೀತಿಯ ಪಗಾರ ಸಿಕ್ಕುವಂತೆ ಕ್ರಮ ಹಾಕಿಕೊಳ್ಳಿರಿ ಎನ್ನುವ ಮಾತನ್ನು ಹೇಳುತ್ತೇನೆ.

ಆಮೇಲೆ ಕನ್‌ಸ್ಯೂಮರ್ಸ್ ಸೊಸೈಟಿಗಳ ಬಗ್ಗೆ ಹೇಳಬೇಕು, ಅನೇಕ ತರಹ ಸಹಕಾರ ಸಂಘ ಗಳನ್ನು ಮಾಡಿದ್ದಾರೆ. ಕ್ರೆಡಿಟ್ ಸೊಸೈಟಿ ಇದ್ದರೂ ಸಹ ಕನ್‌ಸ್ಯೂಮರ್ಸ್ ಸೊಸೈಟಿ ಮಾಡುತ್ತಾರೆ. ವಿವಿಧೋದ್ದೇಶದ ಸೊಸೈಟಿಗಳು ಅನೇಕ ತರಹದ ಕಾರ್ಯ ಮಾಡಬಹುದು. ಕನ್‌ಸ್ಯೂಮರ್ಸ್ ಸೊಸೈಟಿಗಳನ್ನು ಮಾಡುವುದು ಸರಿಯಲ್ಲ. ಪ್ರತಿಯೊಂದು ಭಾಗಕ್ಕೂ ವಿವಿಧೋದ್ದೇ ಶದ ಸಹಕಾರ ಸಂಘಗಳನ್ನು ಸ್ಥಾಪಿಸಿ ಒಳ್ಳೇ ಕೆಲಸಕಾರ್ಯಗಳು ನಡೆಯುವಂತೆ ಕಾರ್ಯಕ್ರಮ ಹಾಕಿಕೊಳ್ಳಿ ಎಂದು ಹೇಳುತ್ತೇನೆ.

ಇನ್ನು ಅರ್‌ಬಿಟ್ರೇಟರ್ಸ್ ಬಗ್ಗೆ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಹೊಟ್ಟೆಗೆ ಇಲ್ಲದವರಿಗೆ ಜೀವನೋಪಾಯಕ್ಕಾಗಿ ಮಾಡಿದ ಹುದ್ದೆಗಳು, ಈ ಅರ್‌ಬಿಟ್ರೇಟರ್ಸ್ ಎಂದು ಕಂಡು ಬರುತ್ತದೆ. ಕೆಲವು ಕಡೆ, 75 ವರ್ಷಕ್ಕೂ ಮೀರಿದವರನ್ನು ಇನ್ನು ಕೆಲವುಕಡೆ, ವಕೀಲರು ಕಣ್ಣು ಕಾಣದಂಥ ವರನ್ನು ನಡೆಯಲಿಕ್ಕೆ ಬಾರದಂಥವರನ್ನು ಆರ್ಬಿಟ್ರೇಟರ್ಸ್ ಆಗಿ ನೇಮಿಸುತ್ತಾರೆ. ಪ್ರಮೋಷನ್‌ಗೆ ಅರ್ಹರಾದ ಅಧಿಕಾರಿಗಳು ಇದ್ದಾರೆ. ಅವರನ್ನು ಸ್ಪೆಷಲ್ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಗಿ ನೇಮಿಸಿ ಆರ್ಬಿಟ್ರೇಷನ್ ಕೇಸನ್ನು ನಡೆಸುವಂತೆ ಮಾಡಿ. ನಮ್ಮ ರಾಜ್ಯದಲ್ಲಿ ಆರ್ಬಿಟ್ರೇಷನ್ ಕೇಸುಗಳು 76,000 ಇವೆ. ಅದಕ್ಕಾಗಿ ಸ್ಪೆಷಲ್ ಅಸಿಸ್ಟೆಂಟ್ ರಿಜಿಸ್ಟ್ರಾರ್‌ಅನ್ನು ನೇಮಿಸಬೇಕೆಂದು ಸಲಹೆ ಕೊಡುತ್ತೇನೆ. ಬೇರೆ ಬೇರೆ ಹುದ್ದೆಗಳಿಗೆ, ಚೀಫ್ ಇಂಜಿನಿಯರ್ಸ್ ಮಾಡಿದ ಹಾಗೆ, ರಿಜಿಸ್ಟ್ರಾರ್ ಫಾರ್ ಕನ್‌ಸ್ಯೂಮರ್ಸ್ ಕ್ರೆಡಿಟ್ ಮಾಡಿ, ರಿಜಿಸ್ಟ್ರಾರ್ ಫಾರ್ ಆಡಿಟ್ ಮಾಡಿ. ಆಡಿಟ್ ಅನ್ನು ಸ್ಪೆಷಲ್ ಡಿಪಾರ್ಟ್‌ಮೆಂಟ್ ಆಗಿ ಮಾಡಿ. ಎಷ್ಟೋ ಸೊಸೈಟಿಗಳು ಆಡಿಟ್ ಆಗಿಲ್ಲ. ಚಿಂತಾಜನಕ ಪರಿಸ್ಥಿತಿ ಯಲ್ಲಿವೆ. ಆಯಾಯ ಜಿಲ್ಲೆಯ ಆಡಿಟರ್ಸ್, ಆ ಜಿಲ್ಲೆಯಲ್ಲಿಯೇ ಇರತಕ್ಕದ್ದು ಅಲ್ಲ. ಅವರನ್ನು ಬೇರೆ ಜಿಲ್ಲೆಗೆ ಹಾಕಬೇಕು. ಕನ್ ಸ್ಯೂಮರ್ಸ್ ಕೋ-ಆಪರೇಟೀವ್ ಯೋಜನೆ ವಿಫಲವಾಗಿದೆ, ಇವುಗಳ ಮೇಲೆ ಸರ್ಕಾರ ಕಂಟ್ರೋಲ್ ಇಲ್ಲ. ಈ ಸಹಕಾರ ತತ್ವ ಶೇಕಡ 75ರಷ್ಟು ವಿಫಲವಾಗಿದೆ. ಎಲ್ಲೆಲ್ಲಿ ಡಿಫಂಕ್ಟ್ ಆಗಿದೆ, ಅಲ್ಲಿ ಸಂಪೂರ್ಣವಾಗಿ ಲಿಕ್ವಿಡೇಟ್ ಮಾಡಿ. ಹಳ್ಳಿಗಳಲ್ಲಿ ಸಹಕಾರ ಸಂಸ್ಥೆಗಳ ಮೇಲೆ ಸರ್ಕಾರದ ಹಿಡಿತ ಇಲ್ಲ. ಮಾರಾಟ ಮಾಡುವಾಗ ಮಾಲ್ ಪ್ರಾಕ್ಟೀಸ್ ಮಾಡುವುದು, ಸಾಲ ಕೊಡುವುದು ಹೆಚ್ಚಾಗಿದೆ. ಇದಕ್ಕೆ ನಿಗಾ ಕೊಡಬೇಕು. ಈ ಕೋ-ಆಪರೇಟೀವ್ ಟ್ರಿಬ್ಯೂನಲ್ ಅನ್ನು ರದ್ದುಪಡಿಸಿ, ಇದರಿಂದ ಯಾವ ತರಹ ಜಡ್ಜ್‌ಮೆಂಟ್ ಸರಿಯಾಗಿ ಸಿಕ್ಕುವುದಿಲ್ಲ. ಇವತ್ತು ಡಿಸ್ಟ್ರಿಕ್ಟ್ ಕೋರ್ಟುಗಳು ಇವೆ. ಡಿಸ್ಟ್ರಿಕ್ಟ್ ಕೋರ್ಟುಗಳಿಗೆ ಆರ್ಬಿಟ್ರೇಟರ್ ಮೇಲೆ ಅಪೀಲು ಹೋಗುವ ಹಕ್ಕನ್ನು ಕೊಡಿರಿ. ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ್).—ಮಾನ್ಯ ಅಧ್ಯಕ್ಷರೇ, ಸಹಕಾರ ಸಚಿವರು ಮಂಡನೆ ಮಾಡಿರತಕ್ಕಂಥ ಈ ಸಹಕಾರ ಖಾತೆಗೆ ಸಂಬಂಧಪಟ್ಟ ಬೇಡಿಕೆಯನ್ನು ವಿರೋಧ ಮಾಡಿ ನಾಲ್ಕು ಮಾತುಗಳನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ಸಹಕಾರಿ ಅಂದೋಳನ ಚಳುವಳಿ ಸತ್ತು ಬಹಳ ವರ್ಷಗಳಾದುವು. ಈ ಮಂತ್ರಿಗಳ ಕಾಲದಲ್ಲಿ, ಅವರ ಅಮೃತ ಹಸ್ತದಿಂದ ಸಮಾಧಿ ಮಾಡಿ ಪೂಜೆ ಸಲ್ಲಿಸುವುದು ಉಳಿದಿದೆ. ಈ ಸಹಕಾರ ಚಳುವಳಿ ಬಹಳ ಒಳ್ಳೆಯ ಉದ್ದೇಶದಿಂದ ಪ್ರಾರಂಭ ವಾಯಿತು. ಆಗಲೇ ಮಾತನಾಡಿರತಕ್ಕಂಥ ಶ್ರೀಮಾನ್ ಬಣಕಾರ್ ಅವರು ಈ ಸಹಕಾರ ಸಂಘ ಗಳನ್ನು ಸರಿಯಾದ ರೀತಿಯಲ್ಲಿ ಬೆಳೆಸಿಕೊಂಡು ಹೋಗಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಬೇರೆ ಸದಸ್ಯರು ಕೂಡ ಈ ಮಾತನ್ನು ಹೇಳಿದ್ದಾರೆ. ಇದು ಒಪ್ಪತಕ್ಕಂಥ ಮಾತು. ಯಾರೋ ಕೆಲವು ಜನ ತಪ್ಪು ಮಾಡಿ, ಬೇಜವಾಬ್ದಾರಿಯಿಂದ ವರ್ತನೆ ಮಾಡಿ, ಈ ಚಳುವಳಿಯನ್ನು ಹಾಳು ಮಾಡಿ ದ್ದಾರೆ. ಅದಕ್ಕಾಗಿ ಇವುಗಳನ್ನು ಮುಚ್ಚಿಬಿಡಿ ಎಂದು ಹೇಳತಕ್ಕಂಥ ಮಾತು ತಪ್ಪಾಗುತ್ತದೆ. ಉದ್ದೇಶ ಒಳ್ಳೆಯದಿದೆ. ಒಬ್ಬ ವ್ಯಕ್ತಿ ಹಿಂದೆ ಸಾಲ ಪಡೆಯಬೇಕಾದರೆ, ಜಮೀನ್ದಾರರ ಮತ್ತು ಬಡ್ಡಿ ವ್ಯವಹಾರಸ್ಥರ ಹತ್ತಿರ ಹೋಗಿ ಆಸ್ತಿಯನ್ನು ಮಕ್ಕಳನ್ನು ಅಡವು ಹಾಕಿ ಸಾಲ ತರತಕ್ಕಂಥದ್ದು ಇತ್ತು. ಒಬ್ಬ ವ್ಯಕ್ತಿ ಇನ್ನೊಬ್ಬರ ಮೇಲೆ ಹಿಡಿತವನ್ನು ಇಟ್ಟುಕೊಳ್ಳಬಾರದು. ಹಣ ಒಂದು ಕಡೆ, ಆಸ್ತಿ ಬಡ್ಡಿ ರೂಪದಲ್ಲಿ ಹೋಗಿ ಶೇಖರಣೆ ಆಗಬಾರದು ಎನ್ನುವ ಉದ್ದೇಶದಿಂದ ಪ್ರಾರಂಭವಾಗಿರುವ ಚಳುವಳಿ ಇದು. ಆದರೆ ಈ ಚಳುವಳಿ ಹೋಗಿ, ಜನರ ಕೈಯಲ್ಲಿ ಅಧಿಕಾರ ಕೊಟ್ಟು ಹಣ ಕೊಟ್ಟರೆ ಅದರ ದುರುಪಯೋಗ ಸಂಪೂರ್ಣವಾಗಿ ದೇಶದಲ್ಲಿ ಆಗಿಯೋಯಿತು. ನಾನು ಮೊದಲೇ ಹೇಳಿದೆ, ಪಾಪ ಈ ಮಂತ್ರಿಗಳಿಗೆ ಏತಕ್ಕೆ ಬೈಯ್ಯಬೇಕು. ತಮ್ಮ ಕಾಲದಲ್ಲಿ ಈ ಇಲಾಖೆ ಎಂದೂ ಬೆಳೆಯುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ನನಗೆ ಗೊತ್ತಿರುವ ಹಾಗೆ, ಮಂತ್ರಿಗಳಿಗೆ ಈ ಖಾತೆಯ ಮೇಲೆ ಹಿಡಿತ ಇಲ್ಲ. ಅವರು ಅಧಿಕಾರಿಗಳು ಹೇಳಿದ ಹಾಗೆ ತಾಳ ಹಾಕುವ ಸ್ವಭಾವ ಇಟ್ಟುಕೊಂಡಿದ್ದಾರೆ ಎನ್ನುವುದು ಬಹಳ ಜನಕ್ಕೆ ಗೊತ್ತಾಗಿದೆ. ತಮ್ಮ ಹಿಡಿತ, ಖಾತೆಯ ಮೇಲೆ, ಅಧಿಕಾರಿಗಳ ಮೇಲೆ ಸೊನ್ನೆ ಎಂದು ಗೊತ್ತಾಗಿದೆ. ನಿಮ್ಮ ಕಾಲದಲ್ಲಿ ಈ ಇಲಾಖೆಯು ಸಮಾಧಿ ಯಾಗುತ್ತದೆ ಎಂದು ಜನ ತೀರ್ಮಾನ ಮಾಡಿದ್ದಾರೆ. ಈ ಸದನದ ಅವಗಾಹನೆಗೆ ಒಂದು ವಿಚಾರ ವನ್ನು ತರುವುದಕ್ಕೆ ಇಚ್ಛೆಪಡುತ್ತೇನೆ. ಬರೀ ಪೊಳ್ಳು ಘೋಷಣೆಯಿಂದ ನೀವು ಸಮಾಜವಾದನ್ನು ತರುವುದಕ್ಕಾಗುವುದಿಲ್ಲ. ಸಹಕಾರ ಸಂಘಗಳನ್ನು ಮೇಲಕ್ಕೆ ಎತ್ತತಕ್ಕ ರೀತಿ ನಿರೂಪಣೆಯನ್ನು ಮಾಡಿ, ಅಧಿಕಾರಿಗಳಲ್ಲಿರತಕ್ಕ ಜಡತ್ವವನ್ನು ಹೋಗಲಾಡಿಸಿ ಅವರಲ್ಲಿ ಜೀವಕಳೆ ತುಂಬುವ ಶಕ್ತಿಯನ್ನು ಮಾನ್ಯ ಸಚಿವರು ಪಡೆದಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ. ಈ ದೃಷ್ಟಿಯಿಂದ ನಿಮ್ಮ ಕಾಲದಲ್ಲಿ ಸಹಕಾರಿ ಚಳುವಳಿ ಸಂಪೂರ್ಣವಾಗಿ ನಾಶವಾಗುತ್ತದೆ ಎಂದು ನಾನು ಮನಗಂಡಿದ್ದೇನೆ. ಲಂಚ ಎನ್ನುವ ಮಾತು ಪ್ರಸ್ತಾಪಮಾಡಿದರೆ, ಪೋಲೀಸ

(ಶ್ರೀ ಎಸ್. ಬಂಗಾರಪ್ಪ)

ಖಾತೆಯಲ್ಲಿ, ಪಿಡಬ್ಲ್ಯೂಡಿ ಇಲಾಖೆಯಲ್ಲಿ ಎಷ್ಟು ಇದೆಯೋ ಅಷ್ಟೇ ಸಹಕಾರ ಇಲಾಖೆಯಲ್ಲಿಯೂ ಇದೆ. ಅದು ನಾಗಾಲೋಟದಿಂದ ಅದು ಓಡುತ್ತಿದೆ. ಲಂಚ ತೆಗೆದುಕೊಳ್ಳುವ ಬಹಳ ಜನ ಅಧಿಕಾರಿಗಳು ನಿಮ್ಮಲ್ಲಿ ಇದ್ದಾರೆ ತಾವು ಕೂಡ ಆ ಲಂಚಕೋರ ಅಧಿಕಾರಿಗಳನ್ನು ಮಟ್ಟ ಹಾಕತಕ್ಕ ಶಕ್ತಿಯನ್ನು ಪಡೆದಿದ್ದೀರಿ ಎಂದು ನಾನು ನಂಬುವುದಿಲ್ಲ. ಅದು ತಮ್ಮಿಂದ ಆಗುವುದಿಲ್ಲ ಎನ್ನುವುದು ನನಗೆ ಗೊತ್ತಿದೆ. ಈ ದೃಷ್ಟಿಯಿಂದ ತಮ್ಮ ಕಾಲದಲ್ಲಿ ಒಳ್ಳೆಯ ಹೆಸರನ್ನು ಪಡೆಯುತ್ತೀರಿ ಎನ್ನುವ ನಂಬಿಕೆ ಈ ಸದನ ಇಟ್ಟುಕೊಳ್ಳುವುದಕ್ಕೆ ಯಾವ ಕಾರಣವೂ ತಮ್ಮಿಂದ ಸಿಕ್ಕಿಲ್ಲ. ತಾವು ಹೇಗಿದ್ದೀರಿ ಎಂದರೆ ಕಾಂಗ್ರೆಸ್ ಅಧ್ಯಕ್ಷರು ಅಥವಾ ಇನ್ನು ಯಾರಾದರೂ ಹೇಳಿದ್ದನ್ನು ಮಾತ್ರ ಮಾಡುವಂತೆ ಕಾಣುತ್ತದೆ. ಮಂತ್ರಿಗಳ ಹತ್ತಿರ ಹುರುಪು ಕಾಣುವುದಿಲ್ಲ ಇಂಥಾದ್ದು ಆಗಿರಬೇಕಾದರೆ ನಿಮ್ಮನ್ನು ನೋಡಿದರೆ ಅಧಿಕಾರಿಗಳು ಹೆಚ್ಚುಕಮ್ಮಿ ಆಗಬೇಕು. ನಿಮ್ಮನ್ನು ನೋಡಿ ಸೊರಗಿ ಇರಬೇಕು. ಇಲ್ಲದಿದ್ದರೆ ಹೆಚ್ಚು ಕಮ್ಮಿಯಾಗುತ್ತದೆ.

4-30 P.M.

Mr. DEPUTY SPEAKER.—The word 'Nimma' means you and usually it refers to the Chair. If the hon. member has any grievance against the Government he may kindly refer it as 'Government'.

ಶ್ರೀ ಎಸ್. ಬಂಗಾರಪ್ಪ.—ಏನು ಮಾತನಾಡಿದರೂ ಅಧ್ಯಕ್ಷರ ಮೂಲಕ ಮಾತನಾಡುತ್ತೇನೆ. ನೀವು ಎಂದರೆ ಸರ್ಕಾರ ನಡೆಸುವವರು. ಆದ್ದರಿಂದ ನಾನು ಹೇಳುತ್ತಾ ಇದ್ದೆ. ಅಧಿಕಾರಿಗಳು ನಿಮ್ಮನ್ನು ನೋಡಿ ಹೆಚ್ಚುಕಮ್ಮಿ ಆಗುತ್ತಿರಬೇಕು. ಒಂದು ಬಿಗಿಯಾದ ನಿಯಮವನ್ನು ಸರ್ಕಾರ ದವರು ತೋರುವುದಾದರೆ, ಬಹಳ ಸಂತೋಷಪಡತಕ್ಕ ವಿಷಯ. ನೇರವಾಗಿ ಮಂತ್ರಿಗಳನ್ನು ಕೇಳುತ್ತೇನೆ, ಇಂಥ ಕಾರ್ಯಕ್ರಮ ಹಾಕಿಕೊಂಡಿದ್ದೀರಾ ಎಂದು. ನೀವು ಸಹಕಾರಿ ಆಂದೋಲನಕ್ಕೆ ಹೊಸ ಪ್ರತಿಭೆ ಮತ್ತು ಚೈತನ್ಯ ಕೊಡುವ ದೃಷ್ಟಿಯಿಂದ ಹೊಸ ಮಾರ್ಪಾಡು ಮಾಡುವುದಕ್ಕೆ ಸಿದ್ಧನಿದ್ದೇನೆಂದು ಈ ವಿಷಯವನ್ನು ಬಡ್ಜೆಟ್ ಅಧಿವೇಶನ ಮುಗಿಯುವುದರೊಳಗೆ ನಿಮ್ಮ ನೀತಿ ನಿರೂಪಣೆಯನ್ನು ದಯಮಾಡಿ ಉತ್ತರದಲ್ಲಿ ಕೊಡೋಣವಾಗಲಿ. ನಿಮ್ಮ ಡಿಪಾರ್ಟ್ ಮೆಂಟಿನವರು ಏನು ವಿವರಣೆಗಳನ್ನು ಸಪ್ಲೈ ಮಾಡಿದ್ದಾರೆ ಅದನ್ನು ಓದುವುದರಿಂದ ಪ್ರಯೋಜನ ವಿಲ್ಲ. ಈ ಬಡ್ಜೆಟ್ ಅಧಿವೇಶನದಲ್ಲಿ ತಮ್ಮ ಡಿಮ್ಯಾಂಡ್ ಬಂದಾಗ ಹೊಸ ನೀತಿಯ ರೂಪುರೇಷೆ ಗಳನ್ನು ನೀವು ನೀಡಬೇಕಾಗಿದೆ. ಈ ಚಳುವಳಿ ಹಾಳು ಆಗದ ಹಾಗೆ ಉಳಿಸಿ ಅದರಿಂದ ನೇರವಾಗಿ ಉಪಯೋಗ ಸಲ್ಲಲು ಏನು ಮಾಡುತ್ತೀರಿ ಎಂದು ತಮ್ಮ ಘೋಷಣೆ ಬರಲಿ. ಅದು ಹಾಗೆ ಹೇಳಿದ್ದೇ ಆದರೆ ನಿಮ್ಮ ಹೆಸರು ಕಾಯಂ ಆಗಿ ಉಳಿಯುತ್ತದೆ. ದಯಮಾಡಿ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ; ಹೊಸ ನೀತಿಯನ್ನು ಈ ದಿವಸ ಹೇಳಬೇಕು. ಕೊ-ಆಪರೇಟೀವ್ ಸೊಸೈಟಿ ಗಳಲ್ಲಿ ಅವ್ಯವಹಾರಗಳು ಭಾರಿ ಪ್ರಮಾಣದಲ್ಲಿ ನಡೆದಿವೆ. ಅದು ತಮಗೆಲ್ಲಾ ಗೊತ್ತಿದೆ. ಇದರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎನ್ನುವ ವಿಷಯ ದಯಮಾಡಿ ಹೇಳಬೇಕು. ಅನೇಕ ಸೊಸೈಟಿಗಳು ಮುಳುಗಿ ಹೋಗಿವೆ. ಕೆಲವು ಸೊಸೈಟಿಗಳು ಒಳ್ಳೆಯವು ಇದ್ದರೂ ಕೂಡ ಅವುಗಳಲ್ಲಿ ರಿಕವರೀಸ್ ಆಗಿಲ್ಲ ಎಂದು ಸರ್ಕಾರದಿಂದ ಹಣ ಪಡೆಯುವುದಕ್ಕೆ ಆಗುತ್ತಾ ಇಲ್ಲ. ಕಾನೂನು ಬದಲಾವಣೆ ಮಾಡಿ ಹಣವನ್ನು ಸರಿಯಾದ ರೀತಿಯಲ್ಲಿ ವಸೂಲು ಮಾಡತಕ್ಕ ಅಧಿಕಾರ ತಮಗೆ ಇರಬೇಕು ಎಂದು ಹೇಳುತ್ತೇನೆ. ಇಷ್ಟು ಕಾಲ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದನೆ ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಅಂದಾನಪ್ಪ (ಹಡಗಲಿ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ಸಹಕಾರ ಖಾತೆ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಪೂರ್ಣವಾಗಿ ಬೆಂಬಲಿಸಿ ನಾಲ್ಕು ಮಾತು ಗಳನ್ನು ಹೇಳಬಯಸುತ್ತೇನೆ. ಅನೇಕ ಮಂದಿ ನಮ್ಮ ವಿರೋಧಪಕ್ಷದ ಸದಸ್ಯರು ಈ ಬೇಡಿಕೆ ಗಳನ್ನು ವಿರೋಧಿಸಿದರೂ ಕೂಡ ಸಹಕಾರಿ ತತ್ವವನ್ನು ವಿರೋಧಿಸಿಲ್ಲ. ಈ ಬೇಡಿಕೆಗಳಲ್ಲಿ ಮುಖ್ಯ ವಾಗಿ ಸಹಕಾರಿ ಖಾತೆ ಸಿಬ್ಬಂದಿ ನಡೆಸಿಕೊಂಡು ಹೋಗುವುದಕ್ಕೆ ಬೇಕಾದ ಖರ್ಚು ಇದೆ. ಈ ಬೇಡಿಕೆಗಳನ್ನು ವಿರೋಧಿಸುವುದರಿಂದ ಸಹಕಾರಿ ಖಾತೆಯನ್ನು ಮುಚ್ಚಬೇಕು ಎಂದು ಅರ್ಥ ವಾಗುತ್ತದೆ. ಇದಕ್ಕೆ ಮುಂಚೆ ವಿರೋಧ ಮಾಡುವುದಕ್ಕೆ ಸಹಕಾರಿ ಖಾತೆ ಬೇಡ ಸಹಕಾರಿ ತತ್ವ ಬೇಡವೆಂದು ಹೇಳಿಬಿಟ್ಟದ್ದರೆ ಅದು ಸರಿಯಾದ ವಾದವಾಗುತ್ತಿತ್ತು. ಒಂದುಕಡೆ ಸಹಕಾರಿ

ತತ್ವಬೇಕು ಕೋ-ಆಪರೇಟಿವ್ ಚಳುವಳಿ ಬೇಕು ಎಂದು ಹೇಳಿ ಇನ್ನೊಂದು ಕಡೆ ಅದನ್ನು ವಿರೋಧ ಮಾಡುತ್ತೇನೆ ಎಂದರೆ ಅದು ಸಹಕಾರವಾದ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಒಳ್ಳೆಯ ರೀತಿಯಲ್ಲಿ ಸಹಕಾರ ಸಂಸ್ಥೆಗಳು ನಡೆಯದೇ ಇರುವುದರಿಂದ ಬೇಡ ಎಂದು ಹೇಳಿದೆ.

ಶ್ರೀ ಸಿ. ಅಂದಾನಪ್ಪ.—ಆ ರೀತಿ ಆಗುವುದು ಆಡಳಿತ ದೋಷ. ಆದರೆ ಸಹಕಾರ ತತ್ತ್ವ ವಿರೋಧ ಮಾಡುವುದಿಲ್ಲ ಸಹಕಾರ ತತ್ವವನ್ನು ಒಪ್ಪಿಕೊಳ್ಳುತ್ತೇವೆ. ಎಲ್ಲಾ ಕಮ್ಯುನಿಸ್ಟ್ ದೇಶಗಳಲ್ಲಿ ಬಂಡವಾಳಶಾಹಿ ದೇಶಗಳಿಂದ ಇಂಗ್ಲೆಂಡು ಅಮೇರಿಕಾ ಮುಂತಾದ ದೇಶಗಳಲ್ಲಿ ಈ ಚಳುವಳಿ ನಡೆಯುತ್ತಿದೆ ಅದನ್ನು ನೋಡಿಕೊಂಡು ಈ ಚಳುವಳಿಯನ್ನು ಪ್ರಾರಂಭ ಮಾಡಿದ್ದೇವೆ. ಆದರೆ ಈ ಚಳುವಳಿ ಮೈಸೂರು ಸಂಸ್ಥಾನದಲ್ಲಿ ಯಾವ ಮಟ್ಟದಲ್ಲಿ ಇದೆ ಎಂದು ತೀರ್ಮಾನ ಮಾಡಿ ಮುಚ್ಚಬೇಕೋ, ಮುಂದುವರಿಸಬೇಕೋ ಎನ್ನುವ ಪರಿಸ್ಥಿತಿ ಇನ್ನೂ ಬಂದಿಲ್ಲ. ಇದು ಎಕ್ಸ್‌ಪರಿಮೆಂಟಲ್ ಸ್ಟೇಜ್‌ನಲ್ಲಿ ಇದೆ ಎಂದು ಬಹುಭಾಗ ಶ್ರೀ ಬಂಗಾರಪ್ಪನವರು ಒಪ್ಪಿಕೊಳ್ಳಬೇಕಾಗುತ್ತದೆ. 5 ವರ್ಷಗಳಲ್ಲಿ ನಡೆದಿರತಕ್ಕಂಥಹ ಶ್ರೀ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿ ಅವರ ಅನುಯಾಯಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು, ಮುಖ್ಯಮಂತ್ರಿಗಳಾಗಿ 5 ವರ್ಷಗಳು ನಡೆಸಿದ್ದರೆ ಆ 10 ವರ್ಷಗಳಲ್ಲಿ ಸಹಕಾರ ಸಂಘಗಳನ್ನು ಮುಚ್ಚಬೇಕಿತ್ತೋ ಏನೋ ಸುದೈವವಶಾತ್ ಆ ಸರ್ಕಾರ ಅಲ್ಲಿಗೆ ನಿಂತು ಹೋಯಿತು.

ಶ್ರೀ ಕೋಣಂದೂರು ಲಿಂಗಪ್ಪ.—ನೀವು ಅವರಿಗೆ ಉತ್ತರಾಧಿಕಾರಿಗಳಾಗಿ ಬಂದಿದ್ದೀರಿ?

ಉಪಸಭಾಪತಿಯವರು.—ಅವರು ಸಭೆಯಲ್ಲಿ ಇಲ್ಲ. ಅವರ ಅನುಕೂಲ ಏನಾದರೂ ಇದ್ದರೆ ಮಾತನಾಡಿ, ಅಡ್ಡಿ ಇಲ್ಲ, ಅವರಿಗೆ ವಿರೋಧವಾಗಿ ಹೇಳುವುದು ಸರಿಯಲ್ಲ.

ಶ್ರೀ ಸಿ. ಅಂದಾನಪ್ಪ.—ನಾನು ವ್ಯಕ್ತಿಯ ಬಗ್ಗೆ ಮಾತನಾಡುತ್ತಿಲ್ಲ. ಅವರ ಸರ್ಕಾರ ಮಾಡಿರತಕ್ಕ ತಪ್ಪುಗಳ ಬಗ್ಗೆ ಮಾತನಾಡುತ್ತೇನೆ. Therefore, I am not referring to individuals.

ಶ್ರೀ ಎಸ್. ಬಂಗಾರಪ್ಪ.—ವ್ಯಕ್ತಿಶಃ ಹೇಳುತ್ತೀರೆಂದು ತಿಳಿದುಕೊಂಡಿಲ್ಲ. ಒಳ್ಳೆಯ ಭಾವನೆಯಿಂದ ಮಾತನಾಡುತ್ತಿದ್ದೀರಿ.

ಶ್ರೀ ಸಿ. ಅಂದಾನಪ್ಪ.—ಅನೇಕ ಮಾನ್ಯ ಸದಸ್ಯರು ಕುಂದುಕೊರತೆಗಳನ್ನು ಹೇಳಿದ್ದಾರೆ. ಬಹುಶಃ ಅದರಲ್ಲಿ ಅನೇಕ ಭಾಗ ಸತ್ಯಾಂಶ ಇದೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಈ ಬೇಡಿಕೆಯನ್ನು ವಿರೋಧಮಾಡಿ.

ಶ್ರೀ ಸಿ. ಅಂದಾನಪ್ಪ.—ಸರ್ಕಾರಿ ಡಿಮ್ಯಾಂಡ್ ಈಗ ಬಂದಿದೆ. ಅದರಲ್ಲಿರತಕ್ಕ ತಪ್ಪುಗಳಿಗೆ ಕುಂದು ಕೊರತೆಗಳಿಗೆ ಈ ಸರ್ಕಾರ ಬಾಧ್ಯರು ಅಲ್ಲ, ಹಿಂದಿನ ಸರ್ಕಾರ ಬಾಧ್ಯರು. ಆದಕಾರಣ ಇದಕ್ಕೆ ಬೆಂಬಲ ಮಾಡುತ್ತೇನೆ ಎಂದು ಮಾನ್ಯ ಸದಸ್ಯರು ಗಮನಿಸಬೇಕು. ಈಗ ಮುಖ್ಯವಾಗಿ ಕೋಆಪರೇಟಿವ್ ಸೆಟ್-ಅಪ್‌ನಲ್ಲಿ ಒಂದನೇ ತಪ್ಪೆಂದರೆ ಡೆಮಾಕ್ರಟಿಕ್ ಸ್ಪಿರಿಟ್ ಇಲ್ಲದಿರುವುದು ಎಂದು ನಾನು ಭಾವಿಸುತ್ತೇನೆ. ಪ್ರತಿಯೊಂದು ಸೊಸೈಟಿಯಲ್ಲಿಯೂ ಸರ್ಕಾರದಿಂದ ನಾಮಕರಣ ಹೊಂದಿದ ಸರ್ಕಾರೀ ಅಧಿಕಾರಿಗಳಿರುತ್ತಾರೆ. ಈ ಕಾರಣದಿಂದ ಪ್ರತಿಯೊಂದು ವ್ಯವಹಾರದಲ್ಲಿಯೂ ಸರ್ಕಾರಿ ಅಧಿಕಾರಿಗಳು ಇಂಟರ್‌ಫಿಯರ್ ಆಗುತ್ತಿದ್ದಾರೆ. ಇದಕ್ಕೆ ಒಂದು ಉದಾಹರಣೆ ಹೇಳಬೇಕೆಂದರೆ, ಮೈಸೂರು ಕೋಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿರುವ ಅಧಿಕಾರಿಗಳನ್ನು ಮತ್ತು ಅವರು ತೆಗೆದುಕೊಳ್ಳುತ್ತಿರುವ ಸಂಬಳವನ್ನು ನೋಡಿದ್ದೇ ಆದರೆ, ಅದನ್ನು ನಡೆಸುತ್ತಿರುವುದು ಅಧಿಕಾರಿಗಳೋ ಅಥವಾ ಅಧಿಕಾರೇತರರೋ ಎಂಬುದು ತಾನಾಗಿಯೇ ಗೊತ್ತಾಗುತ್ತದೆ ದಯವಿಟ್ಟು ಸರ್ಕಾರದವರು ಪ್ರತಿಯೊಂದು ಸಹಕಾರೀ ಕ್ಷೇತ್ರದಲ್ಲಿರುವ ಅಧಿಕಾರಿಗಳನ್ನು ಕಿತ್ತು ಹಾಕಬೇಕು. ಡೆಮಾಕ್ರೆಟಿಕ್ ಸ್ಪಿರಿಟ್ ಏನಿದೆ ಅದನ್ನು ಸಂಪೂರ್ಣವಾಗಿ ಒಪ್ಪಿಕೊಂಡು ಆಚರಣೆಯಲ್ಲಿ ತರಬೇಕೆಂದು ಹೇಳುತ್ತೇನೆ.

ಇನ್ನು ರೈತರಿಗೆ ಸಾಲ ಕೊಡುವ ಪದ್ಧತಿ ಏನಿದೆ ಅದು ಅಷ್ಟು ಸಮಾಧಾನಕರವಾಗಿಲ್ಲ ಎಂದು ನಾನು ಭಾವಿಸುತ್ತೇನೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿರುವ ರೈತರಿಗೆ ಅವಶ್ಯಕತೆ ಇದ್ದಾಗ ಸಾಲ ಸಿಗುತ್ತಿಲ್ಲ. ಈ ಸಾಲ ಪ್ರಭಾವೀ ವ್ಯಕ್ತಿಗಳಿಗೆ ಮಾತ್ರ ಸಿಗುತ್ತಿದೆ. ರೈತರಿಗೆ ಸಾಲ ಸಿಕ್ಕಿದರೂ ಅವರಿಗೆ ಎಷ್ಟು ಬೇಕಾಗುತ್ತದೋ ಅಷ್ಟು ಸಿಗುತ್ತಿಲ್ಲ. ಅವರಿಗೆ ಬೇಕಾಗುವಷ್ಟು ಸಾಲವನ್ನು ಸೊಸೈಟಿಗಳಿಂದ ಕೊಟ್ಟರೆ ಅದನ್ನು ಅವರು ಉಪಯೋಗ ಮಾಡಿಕೊಂಡು, ಅದರಿಂದ ಬರುವ ಉತ್ಪತ್ತಿಯಿಂದ ಸಾಲ ತೀರಿಸುವುದಕ್ಕೆ ಅವರಿಗೆ ಅನುಕೂಲವಾಗುತ್ತದೆ. ಆದರೆ ಅವರಿಗೆ 5 ಸಾವಿರ

(ಶ್ರೀ ಸಿ. ಅಂದಾನಪ್ಪ)

ರೂಪಾಯಿಗಳ ಸಾಲದ ಅವಶ್ಯಕತೆ ಇದ್ದಾಗ ಕೇವಲ ಒಂದು ಸಾವಿರ ರೂಪಾಯಿಗಳನ್ನು ಸಾಲವಾಗಿ ಕೊಟ್ಟರೆ, ಆತನು ಉಳಿದ ಹಣವನ್ನು ಸಾವುಕಾರರ ಬಳಿ ಹೋಗಿ ತೆಗೆದುಕೊಳ್ಳುತ್ತಾನೆ. ಅವರು ಸಾಲ ಕೊಡುವಾಗ ಅದಕ್ಕೆ ಬೇಕಾದ ಬಂದೋಬಸ್ತನ್ನು ಮಾಡಿಕೊಂಡು ಸಾಲ ಕೊಡುತ್ತಾರೆ, ನಂತರ ಬೆಳೆ ಬಂದಾಗ ಕೂಡಲೇ ಅವರ ಹಣವನ್ನು ವಾಪಸ್ ಪಡೆದುಕೊಂಡುಬಿಡುತ್ತಾರೆ. ಹೀಗಾಗಿ ರೈತನು ಕೋಆಪರೇಟಿವ್ ಸೊಸೈಟಿಗಳಿಂದ ತೆಗೆದುಕೊಂಡ ಸಾಲವನ್ನು ತೀರಿಸುವುದ ಕ್ಕಾಗದೆ ಅದು ಹಾಗೆಯೇ ಉಳಿಯುತ್ತದೆ. ಇದರ ಜೊತೆಗೆ ರೈತನಿಗೆ ಬೇಕಾದಂಥ ಸಾಲವನ್ನು ಒಂದೇ ಸೊಸೈಟಿ ಮೂಲಕ ಈಗ ಕೊಡುತ್ತಿಲ್ಲ. ಕ್ರಾಪ್ ಲೋನ್ ಬೇಕಾದರೆ ಒಂದು ಸೊಸೈಟಿಗೆ ಹೋಗಬೇಕು, ಬಾವಿ ತೆಗೆಯುವುದಕ್ಕೆ ಸಾಲ ಬೇಕಾದರೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗೆ ಹೋಗಬೇಕು, ಮನೆ ಕಟ್ಟಿಸಲು ಸಾಲ ಬೇಕಾದರೆ ಹೌಸಿಂಗ್ ಬೋರ್ಡಿಗೆ ಹೋಗಬೇಕು. ಈ ರೀತಿ ರೈತನಾದವನು ಸಾಲಕ್ಕಾಗಿ ಅನೇಕ ಕಡೆಗಳಲ್ಲಿ ಸುತ್ತಾಡಿ ಸುತ್ತಾಡಿ ತನ್ನಲ್ಲಿರುವ ಅಲ್ಪ ಸ್ವಲ್ಪ ರಿಸೋರ್ಸನ್ನು ಸಹ ಖರ್ಚು ಮಾಡಿಬಿಟ್ಟು ಕೊನೆಗೆ ತನಗೆ ಬೇಕಾದ ಸಾಲ ಸಿಗದಿದ್ದಾಗ ಪುನಃ ಸಾವು ಕಾರರ ಬಳಿಯೇ ಹೋಗಬೇಕಾದ ಸ್ಥಿತಿ ಬಂದಿದೆ. ಇದು ತಪ್ಪಬೇಕು. ಎಲ್ಲ ರೈತರಿಗೂ ಸಾಕಷ್ಟು ಸಾಲ ಸಿಗುವಂತೆ ಸರ್ಕಾರದವರು ಏರ್ಪಾಡು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಕನ್‌ಸ್ಯೂಮರ್ ಮೂವ್‌ಮೆಂಟ್ ಏನಿದೆ ಅದು ಬಹಳ ಮುಖ್ಯವಾದ ಚಳುವಳಿಯಾಗಿದೆ. ಇದರಿಂದ ನಾವು ಏನು ಪ್ರೈಸ್ ಲೈನ್ ಕಂಟ್ರೋಲ್ ಎಂದು ಹೇಳುತ್ತೇವೆ ಅದನ್ನು ಆಚರಣೆಯಲ್ಲಿ ತರುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಇಂದು ಈ ಕನ್‌ಸ್ಯೂಮರ್ ಮೂವ್‌ಮೆಂಟ್ ಎಂಬುದು ಫೇಲಾಗುತ್ತಿದೆ. ಈ ಬಗ್ಗೆ ಸರ್ಕಾರದವರೇ ಆಗಲೀ ಸಂಬಂಧಪಟ್ಟ ಅಧಿಕಾರಿಗಳೇ ಆಗಲೀ, ಸೆಕ್ರೆಟ ರಿಗಳೇ ಆಗಲಿ, ರಿಜಿಸ್ಟ್ರಾರ್ ಆಗಲೀ ಸೂಕ್ತ ಕ್ರಮವನ್ನು ತೆಗೆದುಕೊಂಡಿಲ್ಲ ಎಂದು ಹೇಳಬಯಸು ತ್ತೇನೆ. ಈ ರೀತಿ ಇದು ಫೇಲ್ ಆಗುವುದಕ್ಕೆ ಹಿಂದಿನ ಸರ್ಕಾರವೇ ಮುಖ್ಯವಾದ ಕಾರಣವೆಂದು ನಾನು ಹೇಳಬಯಸುತ್ತೇನೆ. ಇದರ ಒಂದು ಉಪಯೋಗವನ್ನು ಈ ಇಲಾಖೆಯ ಅಧಿಕಾರಿಗಳು ರಾಜಕೀಯ ಉದ್ದೇಶಗಳಿಗೆ ಬಳಸಿಕೊಂಡರು. ನಮ್ಮ ಸರ್ಕಾರದವರು ಹಿಂದಿನ ಸರ್ಕಾರದವರಂತೆ ಇದನ್ನು ರಾಜಕೀಯ ಉದ್ದೇಶಗಳಿಗಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ.—ಈಗಲೂ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಸಿ. ಅಂದಾನಪ್ಪ.—ಆ ರೀತಿ ಮಾಡುತ್ತಿದ್ದರೆ ಉದಾಹರಣೆ ಕೊಟ್ಟು ಹೇಳಲಿ. ಸುಮ್ಮನೆ ಅಲಿಗೇಷನ್ ಮಾಡುವುದು ಸರಿಯಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದು ಇನ್ನೂ ಮೂರು ತಿಂಗ ಳಾಗಿದೆ. ವೀರೇಂದ್ರಪಾಟೀಲ್ ಸರ್ಕಾರ ಇದ್ದಾಗ ಅವರು ಮಾಡಿರುವ ಅನ್ಯಾಯಗಳನ್ನೆಲ್ಲಾ ಹೇಳುತ್ತಿದ್ದೆ. ಆದರೆ ಸಮಯ ಇಲ್ಲ. ಆದರೂ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಮುಖ್ಯವಾಗಿ ಬಳ್ಳಾರಿ ಜಿಲ್ಲೆಯಲ್ಲಿರುವ ಒಂದೊಂದು ಸೊಸೈಟಿಯಲ್ಲಿ ಹಿಂದಿನ ಸರ್ಕಾರ ಮಾಡಿರ ತಕ್ಕಂಥ ಅನ್ಯಾಯಗಳು ಮತ್ತು ಅವರು ಈ ಸೊಸೈಟಿಗಳನ್ನು ಯಾರಿಗಾಗಿ ಉಪಯೋಗ ಮಾಡಿ ಕೊಂಡಿದ್ದಾರೆಂಬುದನ್ನು ಹೇಳಬಯಸುತ್ತೇನೆ. ಹೊಸಪೇಟೆಯಲ್ಲಿ ಹೋಲ್-ಸೇಲ್ ಸ್ಟೋರ್ಸ್ ಪ್ರಾರಂಭವಾಯಿತು. ಕೇಂದ್ರಸರ್ಕಾರದ ಸಹಾಯದಿಂದ ಇದು ಪ್ರಾರಂಭವಾಯಿತು. ಆದರೆ ಇದ ನ್ನು ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್‌ನವರು ಮೆಂಬರ್ ಆಗಿ ತೆಗೆದುಕೊಳ್ಳಲಿಲ್ಲ. ಇದನ್ನು ಮೆಂಬರ್ ಆಗಿ ತೆಗೆದುಕೊಳ್ಳಬೇಕೆಂದು ನಾನು ಹಿಂದಿನ ಮುಖ್ಯಮಂತ್ರಿಗಳಿಗೆ ಕಾಗದ ಬರೆದರೆ ಅವರು ನನಗೆ ಕಾಗದ ಬರೆಯಬೇಡಿ ಎಂದು ತಿಳಿಸಿದರು. ರಿಜಿಸ್ಟ್ರಾರ್ ಅವರಿಗೆ ಕಾಗದ ಬರೆದರೆ ಅವರು ಜವಾಬು ಕೊಡಲಿಲ್ಲ. ಅನೇಕ ಜನ ಅಧಿಕಾರಿಗಳು ಬಂದು ನೋಡಿಕೊಂಡು ಹೋದರೂ ಕೂಡ ಯಾವುದನ್ನೂ ಮಾಡಲಿಲ್ಲ. ಈ ಅಧಿಕಾರಿಗಳು ನಿರುಪಯೋಗಿ ಅಧಿಕಾರಿಗಳಾದ್ದ ರಿಂದ ಮತ್ತು ರಾಜಕೀಯ ಪ್ರಭಾವಕ್ಕೆ ಒಳಗಾಗಿದ್ದರಿಂದ ಈ ರೀತಿ ಆಯಿತು ಎಂದು ನಾನು ಹೇಳುತ್ತೇನೆ. ಇಂದು ನಮ್ಮ ಜಿಲ್ಲೆಯಲ್ಲಿ ಕೋಆಪರೇಟಿವ್ ಇಲಾಖೆಯ ಅಧಿಕಾರಿಗಳು ಕೆಲವು ನಿರಪರಾಧಿಗಳ ಮೇಲೆ ಕೇಸ್ ಹಾಕಿದ್ದಾರೆ. ಮತ್ತು ಹೆರಾಸ್‌ಮೆಂಟ್ ಮಾಡುತ್ತಿದ್ದಾರೆ. ಮತ್ತೊಂದು ಮುಖ್ಯವಾದ ವಿಚಾರವೆಂದರೆ, ಹಿಂದಿನ ಸರ್ಕಾರದ ಪಕ್ಷಕ್ಕೆ ಸಂಬಂಧಪಟ್ಟ ಅನೇಕ ಸೊಸೈಟಿಗಳಲ್ಲಿ ಬೇಕಾದಷ್ಟು ಅನ್ಯಾಯಗಳು ನಡೆದಿದ್ದು ಅದರ ಬಗ್ಗೆ ವಿಚಾರಣೆ ಕೂಡ ನಡೆದು, ಅನ್ಯಾಯಗಳಾಗಿರುವುದು ಸ್ಥಿರಪಟ್ಟಿದ್ದರೂ ಕೂಡ ಆ ಸೊಸೈಟಿಗಳ ಬಗ್ಗೆ ಯಾವುದೇ ಬರಹದ ಕ್ರಮವನ್ನು ಇದುವರೆಗೆ ಜರುಗಿಸಿಲ್ಲವೆಂದು ಹೇಳಬಯಸುತ್ತೇನೆ. ಉದಾಹರಣೆಗಾಗಿ ಹೇಳುವುದಾದರೆ, ಬಳ್ಳಾರಿಯಲ್ಲಿರುವ ಮೈನ್ ಓನರ್ಸ್ ಕೋಆಪರೇಟಿವ್ ಸೊಸೈಟಿ ಮತ್ತು ಡಿಸ್ಟ್ರಿಕ್ಟ್

ಬ್ಯಾಂಕ್‌ಗೆ ಸಂಬಂಧಪಟ್ಟ ಎರಡು ಮೂರು ಸೊಸೈಟಿಗಳಲ್ಲಿ ನನಗೆ ತಿಳಿದಮಟ್ಟಿಗೆ ಬೇಕಾದಷ್ಟು ಅನ್ಯಾಯಗಳು ನಡೆದಿವೆ. ಈ ಅನ್ಯಾಯಗಳ ಬಗ್ಗೆ ವಿಚಾರಣೆಯಾಗಬೇಕೆಂದು ಸಾಕಷ್ಟು ಅರ್ಜಿಗಳು ಬಂದಿವೆ. ಆದರೂ ಯಾವುದೇ ಕ್ರಮವನ್ನು ಜರುಗಿಸದೆ ಹಾಗೆಯೇ ಇಟ್ಟಿದ್ದಾರೆ. ಈ ಇಲಾಖೆಯಲ್ಲಿ ದೊಡ್ಡದೊಡ್ಡ ಅಧಿಕಾರಿಗಳು ಇದ್ದೂ ಕೂಡ ಇದರ ಬಗ್ಗೆ ಕ್ರಮ ತೆಗೆದುಕೊಳ್ಳದಿರುವುದರಿಂದ ಅವರು ಇದ್ದು ಏನು ಪ್ರಯೋಜನ ಎಂದು ಕೇಳುತ್ತೇನೆ. ಅಧಿಕಾರಿಗಳು ತಮ್ಮ ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡದೇ ಹೋದರೆ ಅವರಾದರೂ ಏತಕ್ಕೆ ಇರಬೇಕು ? ಅನೇಕ ಸೊಸೈಟಿಗಳನ್ನು ಆ ಬ್ಯಾಂಕ್‌ನವರು ಇನ್ನೂ ತನ್ನ ಸದಸ್ಯರನ್ನಾಗಿ ತೆಗೆದುಕೊಂಡಿಲ್ಲ. ಕೆಲವನ್ನು ತೆಗೆದುಕೊಂಡಿದ್ದರೂ ಸಾಲ ಕೊಟ್ಟಿಲ್ಲ. ಮುಖ್ಯವಾಗಿ ವಿರೋಧಪಕ್ಷಕ್ಕೆ ಸೇರಿದ ಸೊಸೈಟಿಗಳಿಗೆ ಸಾಲ ಕೊಡುತ್ತಿಲ್ಲ, ಅವರ ಪಕ್ಷಕ್ಕೆ ಸೇರಿದ ಸದಸ್ಯರಿರುವ ಸೊಸೈಟಿಗಳಿಗೆ ಸಾಲ ಕೊಡುತ್ತಿದ್ದಾರೆ. ಸಿರಗುಪ್ಪ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಬೇಕಾದಷ್ಟು ಅನ್ಯಾಯಗಳು ನಡೆದಿವೆ. ಮತ್ತು ಷಾರ್ಟೇಜ್ ಕೂಡ ಬಂದಿದೆ. ಮತ್ತು ಹೊಸಪೇಟೆ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಮೂರು ನಾಲ್ಕು ಲಕ್ಷ ರೂಪಾಯಿಗಳ ಮಾಲೇ ಇಲ್ಲವಾಗಿದೆ. ಈ ಸೊಸೈಟಿಗಳ ಬಗ್ಗೆ ಎಷ್ಟೋ ಮಂದಿ ಕಾಗದ ಬರೆದು ಸ್ಟಾಕ್ ವೆರಿಫಿಕೇಷನ್ ಮಾಡಿಸಿ ಎಂದು ಕೇಳಿಕೊಂಡರೂ ಇಲಾಖೆಯವರು ಯಾವ ಕ್ರಮವನ್ನೂ ಜರುಗಿಸುತ್ತಿಲ್ಲ. ಈ ರೀತಿಯ ಅನ್ಯಾಯಗಳೆಲ್ಲಾ ಆಗಿರುವುದಕ್ಕೆ ಕಾರಣ ಹಿಂದಿನ ಸರ್ಕಾರದವರು ಎಂದು ಹೇಳುತ್ತೇನೆ. ಈ ಅನ್ಯಾಯಗಳಿಗೂ ಮತ್ತು ಈಗಿನ ಸರ್ಕಾರಕ್ಕೂ ಯಾವುದೇ ಸಂಬಂಧವಿಲ್ಲ. ಇನ್ನೂ ಅನೇಕ ಸೊಸೈಟಿಗಳಲ್ಲಿ ಆಗಿನ ಸರ್ಕಾರ ಇದ್ದಾಗ ಅನ್ಯಾಯಗಳು ನಡೆದಿವೆ. ಅದರ ಬಗ್ಗೆ ಒಂದು ಲಿಸ್ಟ್ ಕೊಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಮುಖ್ಯವಾಗಿ ಈ ಬಗ್ಗೆ ನನ್ನ ಉದ್ದೇಶವಾದರೂ ಇಷ್ಟೆ, ಸಂಬಂಧಪಟ್ಟ ಅಧಿಕಾರಿಗಳು ಇಂತಹ ಸೊಸೈಟಿಗಳ ಬಗ್ಗೆ ತಕ್ಷಣ ಕ್ರಮ ಜರುಗಿಸಬೇಕು. ಯಾರು ಯಾರು ತಪ್ಪಿತಸ್ಥರಿದ್ದಾರೆ ಅಂತಹವರ ಮೇಲೆ ಕೇಸ್ ಹಾಕಬೇಕು, ಯಾರು ಯಾರು ತಪ್ಪಿತಸ್ಥರಲ್ಲ ಅಂತಹವರ ಮೇಲೆ ಈಗಾಗಲೇ ಹಾಕಿರುವ ಕೇಸ್‌ಗಳನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಆಡಿಟ್ ವಿಷಯದ ಬಗ್ಗೆ ಹೇಳಬೇಕೆಂದರೆ, ಇದರ ಬಗ್ಗೆ ಈಗಾಗಲೇ ಶ್ರೀಮಾನ್ ಬಣಕಾರ್ ಅವರು ಹೇಳಿದ್ದಾರೆ. ಕೆಲವು ಆಡಿಟರ್‌ಗಳು ಆಡಿಟ್ ಮಾಡುವಾಗ ತಪ್ಪು ಇಲ್ಲದಿರುವ ಕಡೆ ತಪ್ಪು ಆಗಿವೆ ಎಂದು ಬರೆದುಬಿಡುತ್ತಾರೆ. ನಮ್ಮ ಸೊಸೈಟಿಯಲ್ಲಿ ಆಡಿಟ್ ಮಾಡಿದ ಒಬ್ಬರು 68 ಸಾವಿರ ರೂಪಾಯಿಗಳು ಲಾಸ್ ಆಗಿದೆ ಎಂದು ತೋರಿಸಿದರು. ಇನ್ನೊಬ್ಬರಿಂದ ಆಡಿಟ್ ಮಾಡಿಸಿದಾಗ ಅವರು 28 ಸಾವಿರ ರೂಪಾಯಿಗಳು ಲಾಭವಾಗಿದೆ ಎಂದು ಬರೆದರು. ಕೊನೆಗೆ ರಿಜಿಸ್ಟ್ರಾರ್ ಅವರಿಗೆ ಕಾಗದ ಬರೆದು ಈ ಸೊಸೈಟಿ ಬಗ್ಗೆ ರೀ-ಆಡಿಟ್ ಮಾಡಿಸಬೇಕೆಂದು ಕೇಳಿಕೊಂಡರೂ ಅವರು ಮಾಡಿಸಲಿಲ್ಲ. ಮೊದಲು ಆಡಿಟ್ ಮಾಡಿದವರು ಲಾಸ್ ಆಗಿದೆ ಎಂದು ಬರೆದಿದ್ದಕ್ಕೆ ಕಾರಣವೆಂದರೆ, ಅವರು ಅದೇ ಜಿಲ್ಲೆಯವರಾಗಿದ್ದು ಮತ್ತು ರಾಜಕೀಯದ ಆಶೆಗೆ ಒಳಪಟ್ಟಿದ್ದು. ಆ ಆಡೀಟರ್ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಂಡರೂ ಸರ್ಕಾರದವರು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಮುಖ್ಯವಾಗಿ ಈಗ ಆಗಿರತಕ್ಕಂಥ ತಪ್ಪುಗಳನ್ನು ಸರಿಪಡಿಸಬೇಕೆಂದು ಕೇಳಿಕೊಂಡು ಮಾನ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಬೆಂಬಲಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಸನ್ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯ ಮುಂದೆ ಸರ್ಕಾರದವರು ಮಂಡಿಸಿರುವ ಸಹಕಾರ ಇಲಾಖೆಯ ಬೇಡಿಕೆಯ ಬಗ್ಗೆ ಇದುವರೆಗೆ ನನ್ನ ಗೆಳೆಯರು ಸಾಕಷ್ಟು ವಿಷಯಗಳನ್ನು ಹೇಳಿದ್ದಾರೆ. ಸಹಕಾರ ಸಂಘಗಳು ಮತ್ತು ಸಹಕಾರ ತತ್ವ ಸಮಾಜವಾದಕ್ಕೆ ಅವಶ್ಯಕವಾಗಿ ಬೇಕಾಗಿದೆ. ಆದರೆ ಇವೊತ್ತಿನ ದಿವಸ ಸಹಕಾರ ತತ್ವ, ಸಹಕಾರಿ ಕಾನೂನು ಯಾವ ಉದ್ದೇಶಕ್ಕನುಗುಣವಾಗಿ ಇರಬೇಕೋ ಆ ಉದ್ದೇಶಕ್ಕನುಗುಣವಾಗಿ ಕಾನೂನು ಇಲ್ಲ. ಈ ಸಹಕಾರಿ ಕಾನೂನನ್ನು ಪ್ರಜಾಪ್ರಭುತ್ವಕ್ಕೆ ಅದರಲ್ಲೂ ಸೋಸಿಯಲಿಜಂ ಎಂದು ಏನು ಹೇಳುತ್ತೇವೆ ಅದಕ್ಕನುಗುಣವಾಗಿ ಸಹಕಾರಿ ಕಾನೂನನ್ನು ಬದಲಾವಣೆ ಮಾಡಬೇಕು. ಈ ಕಾನೂನನ್ನು ಬದಲಾವಣೆ ಮಾಡುವಾಗ ಈ ಸಹಕಾರಿ ಇಲಾಖೆಯಲ್ಲಿ ಅಧಿಕಾರಿಗಳ ಒಂದು ವ್ಯವಸ್ಥೆಯಲ್ಲಿ ನಡೆಯುವುದಕ್ಕೆ ಹೇಗೆ ಬೇಕೋ ಹಾಗೆ ಈ ಕಾನೂನನ್ನು ಬದಲಾವಣೆ ಮಾಡಿದರೆ ನನ್ನ ಸ್ನೇಹಿತರು ಹೇಳಿದ ಹಾಗೆ ಈ ಸಹಕಾರಿ ತತ್ವ ನಿಷ್ಫಲವಾಗುತ್ತದೆ. ಅಧಿಕಾರ ವರ್ಗದವರು ತಮ್ಮ ಸ್ವಾರ್ಥ ಮತ್ತು ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವುದಕ್ಕೋಸ್ಕರ ಸಹಕಾರಿ ಕಾನೂನನ್ನು ಬಳಸಿಕೊಳ್ಳುತ್ತಿದ್ದಾರೆ. ಆಡಿಟ್ ವಿಭಾಗವನ್ನು ಸಹಕಾರಿ ಸಿಬ್ಬಂದಿಗೇ ಸೇರಿಸಿದ್ದೀರಿ.

(ಶ್ರೀ ಎಚ್. ಎಸ್. ಸಿದ್ದಪ್ಪ)

ಇದು ಸರಿಯಲ್ಲ. ಆಡಿಟ್ಗೆ ಪ್ರತ್ಯೇಕವಾದ ಒಂದು ಇಲಾಖೆಯನ್ನು ಕಡ್ಡಾಯವಾಗಿ ಮಾಡಬೇಕು. ಈಗ ತಮಗೆ ಒಂದು ಉದಾಹರಣೆಯನ್ನು ಹೇಳುವುದಾದರೆ ಈಗ ಒಂದು ಸೊಸೈಟಿಯಲ್ಲಿ ಒಬ್ಬರು ಇನ್‌ಸ್ಪೆಕ್ಟರು ಸೆಕ್ರೆಟರಿಯಾಗಿರುತ್ತಾರೆ. ಅವನು ಟ್ರಾನ್ಸ್‌ಫರ್ ಆದಮೇಲೆ ಕೆಲವು ದಿವಸಗಳ ನಂತರ ಅವನೇ ಆಡಿಟರ್ ಆಗಿ ಬಂದು ಅವನ ಕಾಲದ ಲೆಕ್ಕವನ್ನು ಆಡಿಟ್ ಮಾಡುತ್ತಾನೆ. ಆ ರೀತಿ ಆಗಬಾರದು. ಸಹಕಾರಿ ಇಲಾಖೆ ಸಿಬ್ಬಂದಿ ಬೇರೆ ಇರಬೇಕು, ಆಡಿಟ್ ಸಿಬ್ಬಂದಿ ಬೇರೆ ಇರಬೇಕು. ಇಲ್ಲದೇ ಹೋದರೆ ಸ್ಟೇಟ್ ಅಕೌಂಟ್ಸ್‌ನವರು ಅದನ್ನು ಆಡಿಟ್ ಮಾಡುವುದಕ್ಕೆ ವ್ಯವಸ್ಥೆ ಮಾಡಿ. ಈಗ ಇರುವ ಆಡಿಟ್ ವ್ಯವಸ್ಥೆ ಸರಿಯಾಗಿಲ್ಲ. ಈಗ ಜಿಲ್ಲೆಗೆ ಒಬ್ಬರು ಡೆಪ್ಯುಟಿ ರಿಜಿಸ್ಟ್ರಾರ್‌ರವರನ್ನು ನೇಮಕ ಮಾಡಿದ್ದಾರೆ. ಈ ಹುದ್ದೆ ಅನಾವಶ್ಯಕ. ಇವರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಅವರಿಗೆ ಯಾವ ಒಂದು ಸೌಲಭ್ಯವನ್ನು ಕೊಟ್ಟಿದ್ದಾರೆಯೋ ಅದೇ ಸೌಲಭ್ಯವನ್ನು ಅಸಿಸ್ಟೆಂಟ್ ರಿಜಿಸ್ಟ್ರಾರರಿಗೆ ಕೊಟ್ಟರೆ ಅವರು ಹೆಚ್ಚು ನಿಗಾವಹಿಸಿ ಕೆಲಸ ಮಾಡುವಂತೆ ಮಾಡಬಹುದು. ಡೆಪ್ಯುಟಿ ರಿಜಿಸ್ಟ್ರಾರರ ಹುದ್ದೆ ಸಬ್‌ಡಿವಿಜನಲ್ ಆಫೀಸರ ಹುದ್ದೆ ಇದ್ದಹಾಗೆ. ಈಗ ಡೆಪ್ಯುಟಿ ರಿಜಿಸ್ಟ್ರಾರರನ್ನು ಒಂದೊಂದು ಜಿಲ್ಲೆಗೆ ಒಬ್ಬೊಬ್ಬರನ್ನು ಹಾಕಿದ್ದಾರೆ. ಈ ಹುದ್ದೆ ಅನಾವಶ್ಯಕ. ಇದನ್ನು ತಕ್ಷಣ ರದ್ದುಪಡಿಸಬೇಕು ಎಂದು ನನ್ನ ಅಭಿಪ್ರಾಯ.

ಹಣಕಾಸಿನ ವಸೂಲಾತಿಗೆ ಸಂಬಂಧಪಟ್ಟ ಹಾಗೆ ಕೇಸುಗಳನ್ನು ಹಾಕಿದರೆ ಅದಕ್ಕೆ ಖಾಸಗೀ ಅರ್ಬಿಟ್ರೇಟರ್‌ಗಳನ್ನು ನೇಮಿಸುತ್ತಾರೆ. ಅವರು ಸೊಸೈಟಿಯ ಕಾನೂನಿಗೆ ವಿರುದ್ಧವಾಗಿ ಕೇಸನ್ನು ಡಿಸ್ಪೈಡ್ ಮಾಡುತ್ತಾರೆ. ಇಂಥಾ ಕೇಸುಗಳು ನೂರಾರು ಇವೆ. ಆ ರೀತಿ ಕಾನೂನಿಗೆ ವಿರೋಧವಾಗಿ ಕೇಸುಗಳು ತೀರ್ಮಾನವಾದಾಗ ಅವುಗಳನ್ನು ಹೈಕೋರ್ಟಿಗೆ ತೆಗೆದುಕೊಂಡು ಹೋಗುವಂತಹ ಪರಿಸ್ಥಿತಿ ಬರುತ್ತದೆ. ಇದರಿಂದ ಸಹಕಾರಿ ಸಂಘಗಳಿಗೆ ದಕ್ಕೆಯುಂಟಾಗುವ ರೀತಿಯಲ್ಲಿ ಕೇಸುಗಳನ್ನು ತೀರ್ಮಾನ ಮಾಡುತ್ತಿದ್ದಾರೆ. ಆದ್ದರಿಂದ ಈ ಆರ್ಬಿಟ್ರೇಷನ್ ಕೇಸುಗಳ ಬಗ್ಗೆ ಒಂದು ಸರ್ಕ್ಯುಲರ್ ಇಷ್ಯೂ ಮಾಡಿ 10 ಸಾವಿರ ರೂಪಾಯಿಗಳ ಒಳಗಡೆ ಇರುವ ಕೇಸುಗಳನ್ನು ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರೇ ಅರ್ಬಿಟ್ರೇಟರ್ ಆಗಿ ಕೇಸನ್ನು ನಡೆಸುವಂತೆ ಮಾಡಬೇಕು. ಆ ರೀತಿ ಮಾಡುವುದಾದರೆ ಒಬ್ಬೊಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಒಂದು ತಿಂಗಳಿಗೆ 50—100 ಕೇಸುಗಳನ್ನು ಇತ್ಯರ್ಥ ಮಾಡಬಹುದು. ಅರ್ಬಿಟ್ರೇಷನ್ನಿಗೆ ಖಾಸಗೀ ಲಾಯರನ್ನು ಇಟ್ಟುಕೊಳ್ಳುವುದು ಸರಿಯಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಆರ್ಬಿಟ್ರೇಟರ್ ಆಗಿ ಕೆಲಸ ಮಾಡಿ ಕೇಸುಗಳನ್ನು ನಡೆಸುವುದಾದರೆ ಅವರಿಗೆ ತನಿಖೆ ಮಾಡುವ ಅಧಿಕಾರ ಇರುತ್ತದೆ, ಅವರಿಗೆ ಒಂದು ಕೇಸಿಗೆ 45-50 ರೂಪಾಯಿ ಬೀಳುತ್ತದೆ. ಆದ್ದರಿಂದ ಖಾಸಗಿ ಆರ್ಬಿಟ್ರೇಟರ್ಸ್‌ಗಳನ್ನು ನೇಮಕ ಮಾಡುವುದು ಸರಿಯಲ್ಲ. ಈ ರೀತಿ ಮಾಡುವುದಾದರೆ ಸರ್ಕಾರಕ್ಕೆ ಪ್ರತಿವರ್ಷ ಸುಮಾರು 20 ಲಕ್ಷ ರೂಪಾಯಿಗಳು ಉಳಿತಾಯವಾಗುತ್ತದೆ. ಸಹಕಾರ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೂ ಬೇರೆ ಇಲಾಖೆಯಲ್ಲಿ ಇದೇ ವರ್ಗದಲ್ಲಿ ಇರತಕ್ಕ ಅಧಿಕಾರಿಗಳಿಗೂ ಸಂಬಳ ಸಾರಿಗೆಯಲ್ಲಿ ವ್ಯತ್ಯಾಸ ಇದೆ. ಈಗ ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಅಸಿಸ್ಟೆಂಟ್ ಇಂಜನಿಯರಿಗೆ ಪೇಸ್ಕೇಲ್ 350—800 ರೂಪಾಯಿ, ಡೆಪ್ಯುಟಿ ಸೂಪರಿಟೆಂಡೆಂಟ್ ಆಫ್ ಪೋಲೀಸ್ ಅವರಿಗೆ 400—950 ರೂಪಾಯಿಗಳಿವೆ. ಅಸಿಸ್ಟೆಂಟ್ ಸೂಪರಿನ್‌ಟೆಂಡೆಂಟ್ ಅವರಿಗೆ 450—950 ರೂಪಾಯಿಗಳು. ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರಿಗೆ 300—700 ರೂಪಾಯಿಗಳು ಇದೆ. ಈ ತಾರತಮ್ಯವನ್ನು ಹೋಗಲಾಡಿಸಬೇಕೆಂದು ಹೇಳುತ್ತೇನೆ. ಆ ರೀತಿ ಮಾಡದಿದ್ದರೆ ಒಂದು ನೀತಿಯುತವಾದ ಕೆಲಸವಾಗುವುದಿಲ್ಲ. ಈ ಇಲಾಖೆಗೆ ಇನ್ನೂ ಹೆಚ್ಚು ಅನ್ಯಾಯವಾಗುತ್ತದೆ ಎಂದು ಹೇಳಬಯಸುತ್ತೇನೆ. ಅದಕ್ಕೋಸ್ಕರ ಇದನ್ನು ಸರಿಪಡಿಸಬೇಕು. ಈ ಇಲಾಖೆಯಲ್ಲಿ ಪ್ರತಿಯೊಂದು ಹಂತದಲ್ಲಿಯೂ ಅಧಿಕಾರಿವರ್ಗದವರ ಕೈವಾಡ ಇರಬಾರದು. ಇದು ಪ್ರಜಾಪ್ರಭುತ್ವಕ್ಕೆ ಹೊಂದಾಣಿಕೆಯಾಗತಕ್ಕಂಥಾ ವ್ಯವಸ್ಥೆಯಲ್ಲ ಎಂದು ನಾನು ಹೇಳಬಯಸುತ್ತೇನೆ.

ಜಿಲ್ಲಾ ಸಹಕಾರಿ ಬ್ಯಾಂಕುಗಳಲ್ಲಿ ಯಾವ ಹತೋಟಿಯೂ ಇಲ್ಲದೇ ಇರತಕ್ಕ ಅಧಿಕಾರಿಗಳು ಇದ್ದಾರೆ. ಜಿಲ್ಲಾ ಸಹಕಾರಿ ಬ್ಯಾಂಕಿನಲ್ಲಿ ಹಣ ತೆಗೆದುಕೊಂಡು ಪತ್ತೆ ಇಲ್ಲದೇ ಇರತಕ್ಕ ನಿದರ್ಶನಗಳು ಇವೆ. ಇದನ್ನೆಲ್ಲಾ ಸರಿಪಡಿಸಬೇಕು. ಈ ಬ್ಯಾಂಕಿನ ಆಡಳಿತ ಮಂಡಲಿಯಲ್ಲಿ ವ್ಯವಸ್ಥಿತವಾದ ಒಂದು ಚುನಾವಣೆ ನಡೆಯಬೇಕು. ಭದ್ರವಾದ ಆಡಿಟ್ ವರ್ಗ ಇರಬೇಕು. ಜಿಲ್ಲಾ ಸಹಕಾರಿ ಬ್ಯಾಂಕುಗಳಲ್ಲಿರತಕ್ಕ ಅನೇಕ ಸೂಪರ್‌ವೈಜರ್‌ಗಳು ಅನೇಕ ಸರ್ವೀಸ್ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಹಣದ ವಸೂಲಾತಿಯ ಬಗ್ಗೆ ರಶೀತಿಗಳನ್ನು ಕೊಟ್ಟಿಲ್ಲ. ಇದರಿಂದಾಗಿ ಸರ್ವೀಸ್

ಕೋ-ಆಪರೇಟಿವ್ ಸೊಸೈಟಿಗಳು ಮುಚ್ಚುವ ಪರಿಸ್ಥಿತಿಗೆ ಬಂದಿವೆ. ಇದನ್ನು ಸರ್ಕಾರದವರು ಗಮನಿಸಬೇಕು. ಈ ಇಲಾಖೆಯ ಅಧಿಕಾರಿಗಳು ಪ್ರಾಮಾಣಿಕರಾಗಿ, ಮತ್ತು ದಕ್ಷತೆಯಿಂದ ಕೆಲಸ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕು ಎಂದು ನಾನು ಹೇಳಬಯಸುತ್ತೇನೆ.

ಭೂ ಅಭಿವೃದ್ಧಿ ಬ್ಯಾಂಕಿನವರ ಮುಖಾಂತರ ಅಗ್ರಿಕಲ್‌ಚರ್ ರೀಫೈನಾನ್ಸ್ ಕಾರ್ಪೊರೇಷನ್ ನವರು ತೆಂಗಿನ ಬೆಳೆಯ ಅಭಿವೃದ್ಧಿಗಾಗಿ ಹಣವನ್ನು ಕೊಡುತ್ತಿದ್ದಾರೆ. ಈಗಾಗಲೇ ತಿಪಟೂರು, ಅರಸೀಕೆರೆ, ಚಿಕ್ಕನಾಯಕನಹಳ್ಳಿ ಈ ಪ್ರದೇಶಗಳಲ್ಲಿ ಹೊಸದಾಗಿ ತೆಂಗಿನ ಬೆಳೆ ಮಾಡತಕ್ಕ ಜಾಗವೆಲ್ಲ ಮುಗಿದುಹೋಗಿದೆ. ಆದ್ದರಿಂದ ಅದಕ್ಕೆ ಒದಗಿಸತಕ್ಕ ಹಣವನ್ನು ಹಳೆಯ ತೆಂಗಿನ ಮರಗಳು ಬಿದ್ದುಹೋಗಿರುವ ಜಾಗದಲ್ಲಿ, ಎಂದರೆ ಸಾಯಿಗುಣಿಯಲ್ಲಿ ತೆಂಗಿನ ಸಸಿಗಳನ್ನು ಹಾಕಲು ಹಣ ಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನೊಂದು ಕೊನೆಯದಾಗಿ ಹೇಳುತ್ತಾ ಮುಗಿಸುತ್ತೇನೆ. ಈಗ ಭೂ ಅಭಿವೃದ್ಧಿ ಬ್ಯಾಂಕುಗಳ ಮೂಲಕ ಸಾಲವನ್ನು ರೈತರಿಗೆ ಕೊಡುತ್ತಿದ್ದಾರೆ. ಆದರೆ ಅದೇ ರೀತಿಯಲ್ಲಿ ರೈತರಿಂದ ರೂರಲ್ ಡಿಬೆಂಚರ್ಸ್ ಎಂದು ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ. ಇದು ಯಾವ ಎಕಾನಮಿಸ್ಟ್ ಸಲಹೆ ಮಾಡಿದ ಎಂದು ನನಗೆ ಅರ್ಥವಾಗುತ್ತಿಲ್ಲ. ಇವತ್ತು ರೈತನಿಗೆ ಸಾಲ ಕೊಡತಕ್ಕಂತಹ ಹಣಕ್ಕೆ 9 ಪರ್ಸೆಂಟ್ ಬಡ್ಡಿ ಹಾಕುತ್ತಿದ್ದಾರೆ. ಆದರೆ ಅವನು ಕೊಟ್ಟಂತಹ ಈ ರೂರಲ್ ಡಿಬೆಂಚರ್ಸ್‌ಗೆ ನಾಲ್ಕೂವರೆ ಪರ್ಸೆಂಟ್ ಬಡ್ಡಿ ಕೊಡುತ್ತಿದ್ದಾರೆ. ಇದು ಯಾವ ನ್ಯಾಯ ? ಇದರಿಂದ ರೈತರಿಗೆ ಬಹಳ ಅನ್ಯಾಯವಾಗಿದೆ. ಆದ್ದರಿಂದ ನಿಮ್ಮ ಭೂ ಅಭಿವೃದ್ಧಿ ಬ್ಯಾಂಕ್ ಮೂಲಕ ರೂರಲ್ ಡಿಬೆಂಚರ್ ಎತ್ತತಕ್ಕ ಪದ್ಧತಿಯನ್ನು ನಿಲ್ಲಿಸಬೇಕೆಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5-00 P.M.

ಶ್ರೀ ಪಿ. ಎಂ. ಬಂಗಿ (ಜಮಖಂಡಿ).—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಕೋ-ಆಪರೇಶನ್ ಇಲಾಖೆಗೆ ಸಂಬಂಧಪಟ್ಟ ಹಾಗೆ ಇಟ್ಟಿರುವ ಡಿಮ್ಯಾಂಡ್ ನಂ. 23ನ್ನು ಅನುಮೋದಿಸುತ್ತಾ ಈ ಸಹಕಾರಿ ಆಂದೋಳನದ ಬಗ್ಗೆ ಕೆಲವು ಸಲಹೆಗಳನ್ನು ನೀಡಬಯಸುತ್ತೇನೆ. ಈ ಆಂದೋಳನವು ಜಗತ್ತಿನಲ್ಲಿ ಮೊದಲು ಲಂಡನ್ನಿನಲ್ಲಿ ಪ್ರಾರಂಭವಾಯಿತು. ಮೊದಲು ಲಂಡನ್ನಿನಲ್ಲಿ ರೋಕ್‌ಡೇಲ್ ಸೊಸೈಟಿ ಎಂಬ ಒಂದು ಸಂಸ್ಥೆ ಪ್ರಾರಂಭವಾಯಿತು. ಆ ಸಂಸ್ಥೆಯವರು ಜಗತ್ತಿನಲ್ಲಿಯೇ ಪ್ರಸಿದ್ಧಿಯಾಗಿ ಅಜರಾಮರವಾಗಿ ಉಳಿದಿದ್ದಾರೆ ಮತ್ತು ರೋಕ್‌ಡೇಲ್ ಪಯನಿಯರ್ಸ್ ಎಂದು ಜಗತ್ತಿನಲ್ಲಿ ಹೆಸರುಗಳಿಸಿದ್ದಾರೆ. ಜಗತ್ತಿನಲ್ಲಿ ಮೊದಲು ಆಂದೋಳನವು ಪ್ರಾರಂಭವಾದುದು ಜನರ ಆಂದೋಳನ. ಮೊದಲು ಲಂಡನ್ ಶಹರದಲ್ಲಿ 27 ಜನರು ಸೇರಿಕೊಂಡು ಒಂದೊಂದು ಪೌಂಡ್ ಹಾಕಿ ಈ ರೋಕ್‌ಡೇಲ್ ಸೊಸೈಟಿ ಎಂಬುದನ್ನು ಪ್ರಾರಂಭ ಮಾಡಿದರು. ತದನಂತರ ಈ ಆಂದೋಳನವು ಡೆನ್‌ಮಾರ್ಕ್ ಮತ್ತಿತರ ರಾಷ್ಟ್ರಗಳ ಕಡೆಗೆ ಸಾಗಿತು. ಆದರೆ ಹಿಂದೂಸ್ಥಾನದಲ್ಲಿ ಇದು ಜನತೆಯಿಂದ ಆರಂಭವಾಗಿಲ್ಲ. ಭಾರತ ದೇಶದಲ್ಲಿ ಮೊದಲು ಸರ್ಕಾರದವರು ಈ ಆಂದೋಳನವನ್ನು ಪ್ರಾರಂಭ ಮಾಡಿದರು. ಮೊಟ್ಟಮೊದಲನೆಯದಾಗಿ ಭಾರತದಲ್ಲಿ ಒಂದು ಸಹಕಾರಿ ಕಾಯಿದೆಯನ್ನು ಕೇಂದ್ರ ಸರ್ಕಾರದವರು ಮಾಡಿ ಭಾರತ ದೇಶದಲ್ಲಿ ಪ್ರಾರಂಭ ಮಾಡಿದರು. ತದನಂತರ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಕಾಯಿದೆಗಳನ್ನು ಮಾಡಿ ಸರ್ಕಾರದವರು ತಮ್ಮ ಸಿಬ್ಬಂದಿ ವರ್ಗಗಳ ಮುಖಾಂತರ ಇದನ್ನು ಜಾರಿಗೆ ತಂದರು. ಈ ಆಂಧೋಳನವು ನಿಜವಾಗಿಯೂ ಪ್ರಾರಂಭವಾಗಬೇಕಾದುದು ಜನರಿಂದ. ''ಗೌರ್ನಮೆಂಟ್ ಆಫ್ ದಿ ಪೀಪಲ್, ಬೈ ದಿ ಪೀಪಲ್, ಅಂಡ್ ಫಾರ್ ದಿ ಪೀಪಲ್,'' ಎಂಬ ನಮ್ಮ ಪ್ರಜಾಪ್ರಭುತ್ವದ ತತ್ವ ಇದರಲ್ಲಿ ಇವೆ. ಆ ತತ್ವ ಈ ಸಹಕಾರೀ ಅಂಧೋಳನದಲ್ಲಿದೆ. ಆದರೆ ನಮ್ಮ ಭಾರತದಲ್ಲಿ ನಡೆಸುತ್ತಿರುವ ಆಂಧೋಳನ ಸರಿಯಾದುದಲ್ಲ. ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ರೀತಿಯ ಕಾಯಿದೆಗಳು ಇವೆ. ಮೊದಲು ಮುಂಬಾಯಿಯಲ್ಲಿ 1925ರ ಕೋ-ಅಪರೇಟಿವ್ ಕಾಯಿದೆ ಇತ್ತು. ಮೈಸೂರು ರಾಜ್ಯದಲ್ಲಿ ಬೇರೆ ಒಂದು ಕಾಯಿದೆ, ಮದ್ರಾಸಿನಲ್ಲಿ ಒಂದು ಕಾಯಿದೆ ಮತ್ತು ಕೊಡಗಿನಲ್ಲಿ ಒಂದು ಕಾಯಿದೆ ಇದ್ದವು. ಇವೆಲ್ಲವನ್ನೂ ಸೇರಿಸಿ 1959ರಲ್ಲಿ ಮೈಸೂರು ಕೋ-ಅಪರೇಟಿವ್ ಕಾಯಿದೆ ಜಾರಿಗೆ ಬಂತು. ಆ ನಂತರ ಸಾಕಷ್ಟು ಪ್ರಗತಿ ಕೋಆಪರೇಟಿವ್ ಆಂಧೋಳನದಲ್ಲಿ ಆಗಿದೆ. ಈಗ ನಮ್ಮ ಮಾನ್ಯ ಮಂತ್ರಿಯವರು ಈ ಕಾಯಿದೆಯನ್ನು ವಿಮರ್ಶೆ ಮಾಡಿ ಇದರಲ್ಲಿದ್ದಂತಹ ಲೋಪದೋಷಗಳನ್ನು ತಿದ್ದಿ ನಮ್ಮ ಮೈಸೂರು ರಾಜ್ಯಕ್ಕೆ ಒಂದು ಹೊಸ ಕಾಯಿದೆಯನ್ನು ಮಾಡುವುದು ಅತ್ಯಗತ್ಯವಾಗಿದೆ. ಆ ಬಗ್ಗೆ ನಾನು ಕೆಲವು ಇತರ ಸಲಹೆಗಳನ್ನೂ ಕೊಡುತ್ತೇನೆ. ಈ ಕಾಯಿದೆ ಪ್ರಕಾರ ಆರ್ಬಿಟ್ರೇಟರನ್ನು ನೇಮಿಸುವ ಅಧಿಕಾರ ರಿಜಿಸ್ಟ್ರಾರ್ ಆಫ್ ಕೋಆಪರೇಟಿವ್ ಸೊಸೈಟಿಯವರಿಗೆ ಇದೆ.

(ಶ್ರೀ ಪಿ. ಎಂ. ಬಂಗಿ)

[MADAM SPEAKER in the Chair]

ನಮ್ಮ ಮಾನ್ಯ ಮಿತ್ರರಾದ ಬಣಕಾರ್‌ರವರು ಹೇಳಿದ ಹಾಗೆ ಈ ಆರ್ಬಿಟ್ರೇಟರ್ಸ್‌ಗೆ ಕಾಯಿದೆ ಸರಿಯಾಗಿ ತಿಳಿದಿರುವುದಿಲ್ಲ. ಆದ್ದರಿಂದ ಅವರು ಸರಿಯಾಗಿ ಈ ವಿಚಾರದಲ್ಲಿ ಇತ್ಯರ್ಥ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ನಾನು ಸೂಚನೆ ಮಾಡುವುದೇನೆಂದರೆ ಈ ಕಾಯಿದೆಯ 118 ಸೆಕ್ಷನ್ ಪ್ರಕಾರ ಮುನ್ಸಿಫ್ ಕೋರ್ಟಿನ ಅವಾರ್ಡ್ ಮಾಡುವ ಅಧಿಕಾರ ತೆಗೆಯಲ್ಪಟ್ಟಿದೆ. ಅದನ್ನು ಪುನಃ ಮುನ್ಸಿಫ್ ಕೋರ್ಟಿಗೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಈ ಅರ್ಬಿಟ್ರೇಟರ್ಸ್ ನೇಮಕ ಮಾಡಿದ್ದು, ಸಿವಿಲ್ ಕೋರ್ಟುಗಳಲ್ಲಿ ವ್ಯಾಜ್ಯ ಹೆಚ್ಚಾಗಿ ಇದ್ದುದರಿಂದ ಅಲ್ಲಿ ಕೇಸ್ ಇತ್ಯರ್ಥ ಮಾಡುವಾಗ ಬಹಳ ನಿಧಾನವಾಗುತ್ತದೆ. ಅದಕ್ಕೋಸ್ಕರ ಪಂಚಾಯತಿ ತೀರ್ಮಾನದ ಹಾಗೆ ಮಾಡಲು ಇದನ್ನು ಮಾಡಿದ್ದಾರೆ.

ಶ್ರೀ ಪಿ. ಎಂ. ಬಂಗಿ.—ಯಾವುದಾದರೂ ಒಂದು ನಿರ್ಣಯ ಮಾಡಬೇಕಾದರೆ, ಕಾಯಿದೆಯಲ್ಲಿ ಸಾಕಷ್ಟು ಅನುಭವ ಇದ್ದ ಜನರು ಬೇಕೇ ಹೊರತು, ಅನುಭವ ಇಲ್ಲದವರು ಅಷ್ಟು ಸಮರ್ಪಕವಾಗಿ ನಿರ್ಣಯ ಮಾಡುವುದಕ್ಕೆ ಬರುವುದಿಲ್ಲ. ಇವತ್ತು ಮುನ್ಸಿಫರನ್ನು ನೇಮಿಸುವಾಗ ಮೂರು ವರ್ಷ ವಕಾಲತ್ತಿನಲ್ಲಿ ಅನುಭವ ಇದ್ದರೆ ಮಾತ್ರ ನೇಮಿಸುತ್ತಾರೆ. ಅದೇ ರೀತಿ ಸಿವಿಲ್ ಜಡ್ಜ್—ಇವರನ್ನು ನೇಮಕ ಮಾಡುವಾಗ 10 ವರ್ಷ ಮುನ್ಸಿಫರ ಕೆಲಸ ಮಾಡಿದಂತಹವರನ್ನು ನೇಮಿಸುತ್ತಾರೆ. ಆದರೆ ರಿಜಿಸ್ಟ್ರಾರ್ ಆಫ್ ಕೋಆಪರೇಟಿವ್ ಸೊಸೈಟಿಯವರಿಂದ ನೇಮಕ ಮಾಡಲ್ಪಟ್ಟಂತಹ ಆರ್ಬಿಟ್ರೇಟರ್ಸ್ ಯಾವುದೇ ಅನುಭವ ಇಲ್ಲದವರು ಮತ್ತು ಕಾಯಿದೆಯ ಜ್ಞಾನ ಇಲ್ಲದವರು. ಇಂಥವರನ್ನು ನೇಮಿಸಿದರೆ ಜನರಿಗೆ ಹೇಗೆ ತಾನೆ ನ್ಯಾಯ ಸಿಗಬೇಕು ? ಇವತ್ತು ಕೋರ್ಟುಗಳಿಗೆ ಹೆಚ್ಚಿನ ಕೆಲಸ ಇದ್ದರೆ ಸ್ಪೆಷಲ್ ಆಗಿ ಒಬ್ಬರನ್ನು ಕೋ-ಆಪರೇಟಿವ್ ವಿಚಾರಗಳಲ್ಲಿ ತೀರ್ಮಾನ ಕೊಡುವುದಕ್ಕೋಸ್ಕರ ನೇಮಕ ಮಾಡಿ. ಒಬ್ಬ ಮುನ್ಸಿಫ್ ದರ್ಜೆಯ ನ್ಯಾಯಾಧೀಶರನ್ನು ಇದಕ್ಕೆ ನೇಮಿಸಿದರೆ ಒಳ್ಳೆಯದು. ಸಿವಿಲ್ ಪ್ರೊಸೀಜರ್ ಕೋಡ್ ಪ್ರಕಾರ ನಮಗೆ ತೀವ್ರ ನ್ಯಾಯ ದೊರಕಿಸಿಕೊಡಬೇಕಾದರೆ, ಸ್ಮಾಲ್ ಕಾಸ್ ಕೋರ್ಟಿನ ಪವರ್ ಮುನ್ಸೀಫರಿಗೆ ಕೊಟ್ಟು, ಅವರ ತೀರ್ಮಾನವಾದ ನಂತರ ಟ್ರಿಬ್ಯೂನಲ್ಲಿಗೆ ಹೋಗದೆ ನೇರವಾಗಿ ಹೈಕೋರ್ಟಿಗೆ ರಿವಿಜನ್ ಪಿಟಿಶನ್ ಮೇಲೆ ಹೋಗುವ ಸಾಧ್ಯತೆ ಇದೆ. ನನ್ನ ಸೂಚನೆ ಏನೆಂದರೆ, ಈ ಮುನ್ಸೀಫ್ ಕೋರ್ಟಿನ ಅಧಿಕಾರವನ್ನು ಏನು ತೆಗೆದುಹಾಕಲ್ಪಟ್ಟಿದೆ ಅದನ್ನು ಪುನಃ ಮುನ್ಸಿಫ್ ಕೋರ್ಟಿಗೆ ಕೊಡಬೇಕು. ಮುನ್ಸಿಫ್ ಕೋರ್ಟುಗಳ ಕಡೆಯಿಂದ ತೀರ್ಮಾನವಾಗಬೇಕು ; ಮತ್ತು ಕೋರ್ಟುಗಳ ಡಿಕ್ರಿಯನ್ನು ಅಮಲಿನಲ್ಲಿ ತರಬೇಕಾದರೆ ಅದಕ್ಕೆ ಸ್ವತಂತ್ರ ಸಿಬ್ಬಂದಿಯನ್ನು ಇಟ್ಟುಕೊಂಡು ಇದರಿಂದ ಎಲ್ಲಾ ಸೊಸೈಟಿಗಳಿಗೂ ಪರಿಹಾರ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆದ್ದರಿಂದ ನಾನು ಸೂಚಿಸುವುದೇನೆಂದರೆ, ಈ ದಿವಾನೀ ಕೋರ್ಟಿಗೆ ಈ ಅಧಿಕಾರವನ್ನು ಕೊಡಬೇಕು ಮತ್ತು ಈ ಕೋರ್ಟುಗಳ ಮುಖಾಂತರ ಪರಿಹಾರ ದೊರೆಯುವಂತೆ ಮಾಡಬೇಕೆಂದು ಹೇಳುತ್ತೇನೆ. ಈ ಸರಕಾರೀ ಸಿಬ್ಬಂದಿಯ ಮುಖಾಂತರ ನಾನು ಹೇಳಿದಂತೆ ಈ ಕಾಯಿದೆಯನ್ನು ಸರ್ಕಾರದವರು ಜಾರಿಯಲ್ಲಿ ತಂದಿದ್ದಾರೆ. ಸಿಬ್ಬಂದಿ ಮುಖಾಂತರ ಬೇರೆ ಬೇರೆ ಕೋ-ಆಪರೇಟಿವ್ ಸೊಸೈಟಿಗಳು ಅನೇಕ ಸಂದರ್ಭಗಳಲ್ಲಿ ಸ್ಥಾಪನೆ ಆಗುತ್ತವೆ, ಬೆಳೆಯುತ್ತವೆ. ತದನಂತರ ಪುನಃ ಅಧಿಕಾರಿಗಳ ಮುಖಾಂತರವೂ ಆ ಸಂಸ್ಥೆಗಳು ನಷ್ಟವಾಗುತ್ತಿವೆ. ಆದ್ದರಿಂದ ಈ ಸಂಸ್ಥೆಗಳಲ್ಲಿ ಸರ್ಕಾರದ ಅಧಿಕಾರಿಗಳ ಕೈವಾಡ ಹೆಚ್ಚಿಗೆ ಇರಬಾರದು. ಈ ಒಂದು ದೃಷ್ಟಿಯಿಂದ ಈ ಕಾಯಿದೆಯಲ್ಲಿ ತಿದ್ದುಪಡಿ ಮಾಡಬೇಕು. ಈ ಕಾಯಿದೆಯನ್ವಯ ಹೆಚ್ಚಿನ ಡಿವಿಡೆಂಡ್ ಕೊಡಬೇಕಾದರೆ ರಿಜಿಸ್ಟ್ರಾರ್ ಅವರ ಮಂಜೂರಾತಿ ಬೇಕು. ಟ್ರಸ್ಟ್ ಫಂಡ್ಸ್‌ನ ಠೇವಣಿ ಇಟ್ಟುಕೊಳ್ಳಬೇಕಾದರೆ ರಿಜಿಸ್ಟ್ರಾರ್ ಅವರ ಮಂಜೂರಾತಿ ಬೇಕು. ಅಲ್ಲಿನ ಅಧಿಕಾರಿಗಳನ್ನು ನೇಮಿಸಬೇಕಾದರೆ ರಿಜಿಸ್ಟ್ರಾರ್ ಅವರ ಮಂಜೂರಾತಿ ಬೇಕು. ಇವನ್ನು ಆ ಕಾಯಿದೆಯೊಳಗೆ ಹಾಕಿದ್ದೀರಿ. ಇಂಥ ನಿರ್ಬಂಧನೆಗಳನ್ನು ತೆಗೆದುಹಾಕಬೇಕು. ಕಾಮನ್ ಮ್ಯಾನ್ ಮತ್ತು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಅವರಿಗೆ ಸಹಾಯವಾಗುವ ದೃಷ್ಟಿಯಿಂದ ಕಾಯಿದೆಯಲ್ಲಿ ದುರಸ್ತಿ ಮಾಡಬೇಕು. ಹಿಂದೂಸ್ಥಾನದಲ್ಲಿ ಎಲ್ಲೆಲ್ಲೂ ಈಗ ಒಂದು ಸಹಕಾರೀ ಅಂದೋಳನ ಪ್ರಾರಂಭವಾಗಿದೆ. ಸೊಸೈಟಿಗಳಿಂದ ಹಣವನ್ನು ಸಾಲದ ರೂಪವಾಗಿ ಸರಿಯಾಗಿ ಹಂಚುವುದಕ್ಕೇ ಆಗುತ್ತಾ ಇಲ್ಲ. ಈ ಸಂಘಗಳಲ್ಲಿ ಸಹಕಾರ ಭಾವನೆ ಇಲ್ಲ. ಆದ್ದರಿಂದ ಸೊಸೈಟಿಗಳಲ್ಲಿರತಕ್ಕ ಲೋಪದೋಷಗಳನ್ನು ಚೆನ್ನಾಗಿ ತಿದ್ದಿ ಅವನ್ನು ಇನ್ನುಮುಂದೆ ಸರಿಯಾಗಿ ಸಾಗಿಸಲು ಪ್ರಯತ್ನಪಡಬೇಕೆಂದು ಸೂಚಿಸಬಯಸುತ್ತೇನೆ.

ಇನ್ನು ಬಿಜಾಪುರ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಅಲ್ಲಿರತಕ್ಕ ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ವಿಶೇಷವಾದಂಥ ಅಕ್ರಮಗಳಿವೆ. ಭಾರಿ ಭಾರಿ ಪಂಪುಸೆಟ್ಟುಗಳ ಬಗ್ಗೆ ಲೈಸೆನ್ಸ್ ಪಡೆದು ಅಲ್ಲಿ ಒಂದು ಲೈಸೆನ್ಸ್ ಕಮಿಷನ್ ಏಜೆನ್ಸಿ ಮಾಡಿ ಅಲ್ಲಿರುವ ಕೆಲವು ಡೈರೆಕ್ಟರುಗಳು ಹೆಚ್ಚಿಗೆ ಲಾಭ ಪಡೆಯುತ್ತಿದ್ದಾರೆ. ಇದೇ ಪ್ರಕಾರ ಬಿಜಾಪುರ ಜಿಲ್ಲೆಯಲ್ಲಿರುವ ಅರ್ಬನ್ ಬ್ಯಾಂಕ್‌ಗಳಲ್ಲಿರುವ ಡೈರೆಕ್ಟರ್ಸ್ ತಮ್ಮ ಇಷ್ಟವುಳ್ಳವರ ಅಥವಾ ಗೆಳೆಯರ ಹೆಸರಿನಲ್ಲಿ ಅಲ್ಲಿ ಸಾಲವಾಗಿ ತೆಗೆದುಕೊಳ್ಳುವ ಹಣವನ್ನು ಖರ್ಚು ಹಾಕಿ ಎಲ್ಲ ಹಣವನ್ನೂ ಪೂರ್ತಿಯಾಗಿ ತಾವೇ ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ಸಾಮಾನ್ಯ ಜನರಿಗೆ ಏನೇನೂ ಪ್ರಯೋಜನವಿಲ್ಲ. ಈ ಲೋಪದೋಷಗಳನ್ನು ಸರ್ಕಾರದವರು ತಿದ್ದಬೇಕು. ಅದರ ಪ್ರಕಾರ ಇಂಡಸ್ಟ್ರೀಸ್‌ಗಳಿಗೆ ಸಾಲ ಕೊಡತಕ್ಕ ಅನೇಕ ಸಹಕಾರ ಸಂಘಗಳಿವೆ. ಸಹಕಾರ ಬ್ಯಾಂಕುಗಳೂ ಸಹ ಇವೆ. ಅವುಗಳಲ್ಲಿ ಅನೇಕ ಬೋಗಸ್ ಸಂಘಗಳು ಸಹ ಇವೆ. ಅವು ಸರ್ಕಾರದ ಕಡೆಯಿಂದ ದೊರೆಯುವ ಸಬ್ಸಿಡಿಯನ್ನು ಪಡೆದಿದ್ದರೂ ಅನೇಕ ಬ್ಯಾಂಕುಗಳಲ್ಲಿ ಇದುವರೆಗೆ ಯಾವತ್ತೂ ಭಾಗೀದಾರರಿಗೆ, ಯಾವುದೂ ಲಾಭವಾಗಿಲ್ಲ. ಅವು ಯಾವುದೋ ಒಂದು ಸೊಸೈಟಿ ಹೆಸರನ್ನಿಟ್ಟುಕೊಂಡು ವ್ಯವಹಾರ ಮಾಡದೇ ಪೋಕಳೆ ಲೆಖ್ಖ ಬರೆದು ರಿಬೇಟದ ಲಾಭ ಪಡೆಯುತ್ತವೆ. ಅವುಗಳನ್ನು ಲಿಕ್ವಿಡೇಟ್ ಮಾಡಬೇಕು. "ತಾನು ಎಲ್ಲರಿಗಾಗಿ, ಎಲ್ಲರೂ ತನಗಾಗಿ" ಎಂಬತಕ್ಕ ಕೋ-ಆಪರೇಟಿವ್ ಉದ್ದೇಶವೇನಿದೆಯೋ ಅದನ್ನು ಅತಿ ಜಾಗ್ರತೆಯಾಗಿ ಸಾಧಿಸಬೇಕು. ಈಗ ಈ ಸೊಸೈಟಿಗಳ ಆಂದೋಳನ ಕೆಲಸವೇನಿದೆಯೋ ಅದನ್ನು ಸರಿಯಾಗಿ ತಿದ್ದಿ, ಆ ಸಂಸ್ಥೆಗಳು ಚೆನ್ನಾಗಿ ಕೆಲಸಮಾಡುವುದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕೆಂದು ಮಂತ್ರಿಗಳನ್ನು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಮಾದೇಗೌಡ (ಕಿರುಗಾವಲು)—ಸಭಾಧ್ಯಕ್ಷಣಿಯವರೇ, ಸಹಕಾರದ ಬೇಡಿಕೆ ಬಗ್ಗೆ ನಾನು ಚರ್ಚೆ ಮಾಡುತ್ತಾ ಕಾಲ ಕಡಿಮೆ ಇರುವುದರಿಂದ ಕೇವಲ ನನ್ನ ಸಲಹೆಗಳನ್ನು ಮಾತ್ರ ಈ ಸಭೆಯ ಮುಂದೆ ಇಡುವುದಕ್ಕೆ ಇಚ್ಛೆಪಡುತ್ತೇನೆ. ಈ ಸಹಕಾರ ಆಂದೋಳನದಲ್ಲಿ ನಿಜವಾಗಿ ಮೂಲಭೂತವಾದ ಬದಲಾವಣೆಯಾಗಬೇಕಾದರೆ, ಈ ಕಾನೂನು ಮತ್ತು ರೂಲ್ ಏನಿದೆಯೋ ಅದು ಬದಲಾವಣೆಯಾಗದ ಹೊರತು ಏನೂ ಸಮಾಜದಲ್ಲಿ ಬದಲಾವಣೆಯನ್ನು ಈ ಸಹಕಾರ ಸಂಘಗಳ ಮೂಲಕ ತರುವುದಕ್ಕಾಗುವುದಿಲ್ಲ. ಅದರಲ್ಲಿಯೂ ಈಗ ಸಮಾಜವಾದ ಸರ್ಕಾರ ಇರುವಾಗ ಕೇವಲ ಪ್ರಬಲ ವ್ಯಕ್ತಿಗಳೇ ಬಹಳ ಸೊಸೈಟಿಗಳಲ್ಲಿ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಬಂದಿರುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಪ್ರಬಲ ವ್ಯಕ್ತಿಗಳನ್ನು ತೆಗೆದುಹಾಕಿ ದುರ್ಬಲ ವ್ಯಕ್ತಿಗಳಿಗೆ ಅವಕಾಶಮಾಡಿಕೊಡುವ ಒಂದು ಕಾನೂನು ಮತ್ತು ರೂಲನ್ನು ತರದೇಹೋದರೆ ಈ ಆಂದೋಳನದಲ್ಲಿ ಅದರಲ್ಲಿಯೂ ಈ ಸಹಕಾರ ತತ್ವದಲ್ಲಿ ನಿಮ್ಮ ಸರ್ಕಾರ ಎಷ್ಟು ದಿವಸಗಳು ನಡೆಸಿದರೂ ಕೂಡ ಸಮರ್ಪಕವಾಗಿ ಕೆಲಸಗಳನ್ನು ನಿರೀಕ್ಷಿಸಿದಂತೆ ನಡೆಸುವುದಕ್ಕೆ ಆಗುವುದಿಲ್ಲವೆಂದು ನಾನು ಒಂದು ಎಚ್ಚರಿಕೆಯನ್ನೂ ಕೂಡ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಉದಾಹರಣೆಗೆ ಹೇಳುವುದಾದರೆ, ನಮ್ಮಲ್ಲಿ ಇಷ್ಟು ಸಾವಿರಾರು ಮಾರ್ಕೆಟಿಂಗ್ ಸೊಸೈಟಿಗಳು, ಮತ್ತು ಕೋ-ಆಪರೇಟಿವ್ ಸೊಸೈಟಿಗಳಿದ್ದರೂ ಕೂಡ ಎಷ್ಟು ಹರಿಜನರನ್ನು ಈ ಸಂಘ ಸಂಸ್ಥೆಗಳಲ್ಲಿ ಪ್ರೆಸಿಡೆಂಟರನ್ನಾಗಿ ಮಾಡುವುದಕ್ಕೆ ಅವಕಾಶ ಕೊಡುತ್ತಿದ್ದೀರಿ ಎಂಬುದಾಗಿ ನಾನು ಈ ಸಂದರ್ಭದಲ್ಲಿ ಪ್ರಶ್ನೆಮಾಡಬೇಕಾಗುತ್ತದೆ. ದುರ್ಬಲ ಪಂಗಡಗಳುಳ್ಳ, ಮೈನಾರಿಟಿ ಪಂಗಡಗಳುಳ್ಳ ಸಂಘಸಂಸ್ಥೆಗಳು ನಮ್ಮಲ್ಲಿ ಎಷ್ಟು ಇವೆ? ಅವುಗಳ ಸಂಖ್ಯೆಯೇನೆಂದು ನಾನು ಪ್ರಶ್ನೆಮಾಡಬೇಕಾಗಿದೆ. ಆದ್ದರಿಂದಲೇ ಕಾನೂನಿನಲ್ಲಿರುವ ಲೋಪದೋಷಗಳನ್ನು ತಾವು ತೆಗೆದ ಹೊರತು ಸಹಕಾರದ ಆಂದೋಳನದಲ್ಲಿ ಖಂಡಿತವಾಗಿಯೂ ಶಕ್ತಿಯಾಗಲಾರದೆಂದು ನಾನು ಮತ್ತೊಮ್ಮೆ ಸರ್ಕಾರಕ್ಕೆ ಸಲಹೆ ಕೊಡಬಯಸುತ್ತೇನೆ. ಮತ್ತೆ ಬಹು ಮುಖ್ಯವಾಗಿ ತಾವು ಈ ಡಿಮ್ಯಾಂಡಿನಲ್ಲಿ ದೋಷ ಮಾಡಿರತಕ್ಕದ್ದು ಏನೆಂದರೆ, ಹಿಂದಿನ ಎರಡು ವರ್ಷಗಳಲ್ಲಿ ಅಂದರೆ 70–71ನೇ ಮತ್ತು 71–72ನೇ ವರ್ಷಗಳ ಗ್ರ್ಯಾಂಟ್ ಇನ್ ಏಡ್ ರೂಲ್ಸ್ ಪ್ರಕಾರ ರೈತರಿಗೆ ಬಾವಿ ತೋಡತಕ್ಕ ಕಾಲದಲ್ಲಿ ಏನು ಸಬ್ಸಿಡಿ ಮುಖಾಂತರ ಕೊಟ್ಟು ರೈತ ಹೆಚ್ಚಿಗೆ ಬಾವಿ ತೋಡಿ ಹೆಚ್ಚುಹೆಚ್ಚಾಗಿ ರೈತ ಅಭಿವೃದ್ಧಿಯಾಗಲು ಒಂದು ಕೋಟಿ ರೂಪಾಯಿಗಳನ್ನು ವಿಸಲಾಗಿಟ್ಟಿದ್ದಿರಿ. ಈ ವರ್ಷ ಅದನ್ನು ಏಕ್‌ದಂ ಕಡಿಮೆ ಮಾಡಿದ್ದೀರಿ. ಅದು ನಿಮ್ಮ ಸಮಾಜವಾದ ತತ್ವಕ್ಕೆ ತದ್ವಿರುದ್ಧವಾಗಿಲ್ಲವೇ ಎಂದು ನಾನು ಪ್ರಶ್ನೆಮಾಡಬೇಕಾಗಿದೆ. ಮತ್ತೆ ಇದೇ ಸಂದರ್ಭದಲ್ಲಿ 50 ಲಕ್ಷರೂಪಾಯಿಗಳನ್ನು ವರ್ಷದ ಲೆಕ್ಕ ಪರಿಶೋಧನೆಗಾಗಿ ಇಟ್ಟಿದ್ದೀರಿ. ಇದು ಒಂದು ತಮಾಷೆ. ನಿಜವಾಗಿ 3 ಕೋಟಿ ರೂಪಾಯಿಗಳ ಡಿಮ್ಯಾಂಡಿನಲ್ಲಿ ಕೇವಲ 50 ಲಕ್ಷ ರೂಪಾಯಿಗಳನ್ನು ವರ್ಷದ ಲೆಕ್ಕ ಪರಿಶೋಧನೆಗಾಗಿ ಇಡಬೇಕಾದರೆ, ನಿಜವಾಗಿಯೂ ಪ್ರತಿ ವರ್ಷವೂ ನಿಮ್ಮಿಂದ ಆ ಲೆಕ್ಕಗಳು ಆಡಿಟ್ ಆಗುತ್ತಿವೆಯೋ ಎಂದು ನಾನು ಕೇಳಬೇಕಾಗಿ ಬಂದಿದೆ. ಯಾವ ಒಂದು ಹೊಸ ಲೆಕ್ಕ ಈಗ ಉದ್ಭವವಾಗಿದೆ, ಆ ಹೊಸ ಲೆಕ್ಕಕ್ಕೆ 50 ಲಕ್ಷ ರೂಪಾಯಿಗಳನ್ನು ಇಡುವ

(ಶ್ರೀ ಜಿ. ಮಾದೇಗೌಡ)

ಅವಶ್ಯಕತೆಯಾದರೂ ಏನಿತ್ತು, ಮೂರು ಕೋಟಿ ರೂಪಾಯಿಗಳಲ್ಲಿ ರೈತರಿಗೆ ಸಮಾಜವಾದದಲ್ಲಿ ಮಾಡತಕ್ಕ ಅನ್ಯಾಯ ಮಾಡಿ ಹೊಸ ಲೆಕ್ಕದ ಪರಿಶೋಧನೆಗಾಗಿ 50 ಲಕ್ಷ ರೂಪಾಯಿಗಳನ್ನು ತಾವು ಅಳವಡಿಸಿಕೊಂಡಿದ್ದರೆ, ಇದರ ಔಚಿತ್ಯವಾವರೂ ಏನೆಂಬುದಾಗಿ ನಾನು ಸರ್ಕಾರವನ್ನು ಪ್ರಶ್ನೆ ಮಾಡಬೇಕಾಗುತ್ತದೆ. ಮುಖ್ಯವಾಗಿ ಯಾವ ಪಕ್ಷದವರೇ ಆಗಿರಲಿ, ಅಥವಾ ಯಾವ ಮಾರ್ಕೆಟಿಂಗ್ ಸೊಸೈಟಿಯೇ ಆಗಿರಲಿ, ಆಯಾ ತಾಲ್ಲೂಕಿನಲ್ಲಿ ಸಾರ್ವಜನಿಕರ ಸಂಪರ್ಕ ಹೊಂದಿ ಸಾರ್ವಜನಿಕರಿಗೆಲ್ಲ ಇಂತಹ ಸೊಸೈಟಿ ಬಹಳ ಸಮರ್ಪಕವಾಗಿ ಕೆಲಸಮಾಡುತ್ತಿದೆಯೆಂದರೆ, ಅದು ಒಂದು ನ್ಯಾಯವಾಗಿ ಕೆಲಸ ಮಾಡತಕ್ಕ ಒಂದು ಸೊಸೈಟಿಯಾಗಿರುತ್ತದೆ. ಆದ್ದರಿಂದ ಈ ಸೊಸೈಟಿಗಳಲ್ಲಿ ಏನಾದರೂ ಕುಂದು ಕೊರತೆಗಳು ಅಥವಾ ಅಪವಾದಗಳು ಇದ್ದರೆ ಬಹುಶಃ ನಮ್ಮ ಸರ್ಕಾರ ಆ ಅಪವಾದಗಳನ್ನು ದೂರೀಕರಿಸುವ ಹಾಗೆ ಮಾಡಿದರೆ ಅವು ತಪ್ಪುತ್ತವೆಂದು ನಾನು ಹೇಳುತ್ತೇನೆ. ಅಂಥಾದ್ದು ಹೆಂಡಿಂಗಿನಲ್ಲಿದ್ದರೆ, ತಾವು ತಕ್ಷಣ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳ ವಿಚಾರದಲ್ಲಿ ಬಹಳ ಸೂಕ್ಷ್ಮವಾಗಿ ಗಮನವನ್ನು ಹರಿಸಿ ಇದನ್ನು ರಿಆರ್ಗನೈಜೇಷನ್ ಮಾಡಲು ಅಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಅವನ್ನು ಏನು ಹಿಡಿದುಕೊಂಡಿದ್ದಾರೋ ಅದನ್ನು ಬದಲಾವಣೆ ಮಾಡುವುದಕ್ಕೆ ತುಂಬಾ ಅವಶ್ಯಕತೆ ಇದೆಯೆಂದು ನಾನು ಹೇಳಿ, ಇಷ್ಟು ಹೊತ್ತು ನನಗೆ ಈ ಸಭೆಯಲ್ಲಿ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷಣಿಯವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೆಕೆರೆ).—ಮಾನ್ಯ ಅಧ್ಯಕ್ಷಣಿಯವರೇ, ಸಹಕಾರ ಇಲಾಖೆಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗೆ ನನ್ನ ಬೆಂಬಲವನ್ನು ಕೊಡುತ್ತ ನಾಲ್ಕು ಮಾತುಗಳನ್ನಾಡುವುದಕ್ಕೆ ಇಚ್ಛೆಪಡುತ್ತೇನೆ.

ಸಹಕಾರ ಕ್ಷೇತ್ರ ಎಂದರೆ ದೇಶದಲ್ಲಿ ಅನೇಕರಿಗೆ ಅದರಲ್ಲೂ ಬಡಬಗ್ಗರಿಗೆ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸತಕ್ಕಂಥ ಒಂದು ಪವಿತ್ರವಾದ ಕ್ಷೇತ್ರ ಅದು. ಅದೇರೀತಿ ಅದು ಕೆಲಸ ಮಾಡಿಕೊಂಡು ಬರುತ್ತಿದೆ. ಆದರೆ ಇಂಥ ಒಂದು ದೊಡ್ಡ ಇಲಾಖೆಯಲ್ಲಿ ಕೆಲವು ಸಣ್ಣ ಪುಟ್ಟ ಲೋಪದೋಷಗಳು ಇರುವುದು ಅನಿವಾರ್ಯ. ಹಾಗೆ ಇರತಕ್ಕದ್ದು ಅನಿವಾರ್ಯ ಎಂದರೆ ನಾನು ಅವುಗಳನ್ನು ಮುಂದುವರಿಸಬೇಕು ಎಂದು ಹೇಳತಕ್ಕವನಲ್ಲ. ಈ ಸಂಸ್ಥೆಗಳು ಇನ್ನೂ ಹೆಚ್ಚಿನ ಪ್ರಗತಿಪಥದಲ್ಲಿ ಕೆಲಸ ಮಾಡಬೇಕು ಮತ್ತು ಈ ನ್ಯೂನತೆಗಳನ್ನೆಲ್ಲಾ ತಡೆಗಟ್ಟಬೇಕಾದುದು ಇಲಾಖೆಯ ಮುಖ್ಯ ಕರ್ತವ್ಯ. ಈ ದಿವಸ ರಾಜ್ಯದಲ್ಲಿ ಈ ಸರ್ವೀಸ್ ಕೋ ಆಪರೇಟೀವ್ ಸೊಸೈಟಿಗಳೇನಿವೆ ಇವುಗಳನ್ನು ಪ್ರತಿಯೊಂದು ಗ್ರಾಮ ಪಂಚಾಯಿತಿಯ ಸರಹದ್ದಿನಲ್ಲೂ ತರುವಂತೆ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೆ ಈ ಒಂದು ತತ್ವ ನಮಗೆ ಉತ್ತಮವಾಗಿ ಕಂಡುಬಂದರೂ ಈಗಿರತಕ್ಕ ಪದ್ಧತಿಯ ಪ್ರಕಾರ ಇವು ಕೇವಲ 5–6 ಹಳ್ಳಿಗಳಿಗೆ ಮಾತ್ರ ಸೀಮಿತವಾಗಿರುವುದರಿಂದ ಜನರ ಆರ್ಥಿಕ ಪರಿಸ್ಥಿತಿ ಏನೂ ಅಷ್ಟು ಉತ್ತಮವಾಗಿಲ್ಲ. ಅವುಗಳ ಬೆಳವಣಿಗೆಯಲ್ಲಿ ಕೂಡ ಕುಂಠಿತವಾಗಿದೆ. ಜನರ ದುಡ್ಡು ಇದರಿಂದ ವ್ಯರ್ಥವಾಗುತ್ತಿದೆ. ಎಂಬುದು ನನ್ನ ಅನುಭವದ ಮಾತು. ಇನ್ನು ತಾಲ್ಲೂಕಿಗೆ 8–10 ಸಮಗ್ರಸೇವಾ ಸಹಕಾರ ಸಂಘಗಳನ್ನು ಮಾಡಿದ್ದಾರೆ. ಒಬ್ಬ ರೈತ ತನಗೆ ಬೇಕಾಗತಕ್ಕ ಸಾಲದ ಸೌಲಭ್ಯಕ್ಕಾಗಿ ಬಿತ್ತನೆ ಬೀಜ ಗೊಬ್ಬರ ಇವುಗಳಿಗೆ 5–6 ಮೈಲಿ ಫಾಸಲೆಯಿಂದ ಬಂದು ಅವುಗಳನ್ನು ತೆಗೆದು ಕೊಂಡು ಹೋಗಬೇಕಾಗಿದೆ. ಇದು ಸಮರ್ಪಕವಾಗಿ ಕೆಲಸ ಮಾಡುತ್ತಿದೆ. ಇದೇ ರೀತಿಯಾಗಿ ಸರ್ಕಾರದವರು ಆ ಸಾವಿರಾರುಗಟ್ಟಲೆ ಇರತಕ್ಕ ಸರ್ವೀಸ್ ಕೋಅಪರೇಟೀವ್ ಸೊಸೈಟಿಗಳನ್ನು ತೆಗೆದು ಅವುಗಳ ನಂಬರನ್ನು ತಗ್ಗಿಸಬೇಕು. ಸಣ್ಣ ಪುಟ್ಟ ಸಂಸ್ಥೆಗಳನ್ನು ರದ್ದು ಮಾಡಬೇಕು ಎಂದು ಹೇಳುತ್ತೇನೆ. ಅಲ್ಲಿ ಇರತಕ್ಕ ಸಿಬ್ಬಂದಿಗೆ ಕೊಡುತ್ತಿರುವ ಸಂಬಳಸಾರಿಗೆ ಸಾಲದು. ಅದಕ್ಕೆ ಅವರು ಅಲ್ಲಿರತಕ್ಕ ಬಂಡವಾಳಕ್ಕೇ ಕೈಹಾಕತಕ್ಕ ಸಂದರ್ಭ ಉಂಟಾಗಿರತಕ್ಕದ್ದನ್ನು ನಾನು ನೋಡಿದ್ದೇನೆ. ಆದ್ದರಿಂದ ಅತಿ ಅಪಾರವಾದ ಸಂಖ್ಯೆಯಲ್ಲಿರತಕ್ಕ ಈ ಸರ್ವೀಸ್ ಕೋಅಪರೇಟೀವ್ ಸೊಸೈಟಿಗಳನ್ನು ರದ್ದು ಮಾಡಿ ತಾಲ್ಲೂಕಿಗೆ 8–10 ದೊಡ್ಡ ಸೊಸೈಟಿಗಳನ್ನು ಮಾಡಿ. ಇದರಿಂದ ಒಳ್ಳೆಯದಾಗುತ್ತದೆ. ಸರ್ಕಾರ ಇದರ ಬಗ್ಗೆ ದಿಟ್ಟ ಹೆಜ್ಜೆ ಇಡಬೇಕು ಸರ್ಕಾರ ಧೈರ್ಯದಿಂದ ಇದನ್ನು ಮಾಡಬೇಕು. ಹೀಗೆ ಮಾಡಿದರೆ ನಾವು ಆ ವಿರೋಧ ಪಕ್ಷದವರ ಟೀಕೆಗಳಿಗೆ ಅವಕಾಶವನ್ನು ತಪ್ಪಿಸಿದಂತಾಗುತ್ತದೆ. ಮುಂದೆ ಅವರು ನಿಂದನೆಗಳನ್ನು ಮಾಡುವುದಕ್ಕೆ ಅವಕಾಶ ಇರುವುದಿಲ್ಲ.

ಇನ್ನು ತಾಲ್ಲೂಕ್ ಮಲ್ಟಿಪರ್ಪಜಸ್ ಕೋಅಪರೇಟೀವ್ ಸೊಸೈಟಿಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಇವುಗಳಿಗೂ ತಾಲ್ಲೂಕ್ ಸೊಸೈಟಿಗಳಿಗೂ ನೇರವಾದ ಸಂಪರ್ಕ ಇರಬೇಕು. ಹಾಗೇ

ಜಿಲ್ಲಾ ಸಹಕಾರ ಬ್ಯಾಂಕುಗಳಿಗೂ ಇವುಗಳ ಸಂಪರ್ಕವಿರಬೇಕು. ಕೆಲವು ಜಿಲ್ಲಾ ಸಹಕಾರ ಬ್ಯಾಂಕುಗಳು ಚೆನ್ನಾಗಿ ಕೆಲಸಮಾಡುತ್ತಿವೆ. ಆದರೆ ಹಿಂದಿದ್ದ ಸರ್ಕಾರದ ಅನೀತಿಯ ಫಲವಾಗಿ ಕೆಲವು ಸಂಸ್ಥೆಗಳು ಸರಿಯಾಗಿ ಕೆಲಸವನ್ನು ನಿರ್ವಹಿಸುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ ತುಮಕೂರು ಜಿಲ್ಲಾ ಸಹಕಾರ ಸಂಘ ಒಂದು ಅರೆಕಾ ಮಾರ್ಕೆಟಿಂಗ್ ಸೊಸೈಟಿಗೆ ಒಂದು ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೇಳಿದ್ದರೆ ಈ ಜಿಲ್ಲಾ ಸಂಸ್ಥೆ 2 ಲಕ್ಷ ರೂಪಾಯಿಗಳನ್ನು ಸಾಲವಾಗಿ ಮಂಜೂರು ಮಾಡಿದೆ. ಈ ದಿವಸ ಆ ಅರೆಕಾ ಸೊಸೈಟಿ ನಿರ್ನಾಮವಾಗಿದೆ. ಜನರ ಹಣವೆಲ್ಲಾ ಪೋಲಾಯಿತು. ಹೀಗೆ ಇನ್ನು ಅ ತುಮಕೂರಿನ ಹೋಲ್ ಸೇಲ್ ಕನ್‌ಸ್ಯೂಮರ್ ಕೋಅಪರೇಟೀವ್ ಸೊಸೈಟಿಯಲ್ಲಿ ಒಂದು ಲಕ್ಷ ಹಣ ಪೋಲಾಗಿದೆ. ಹಿಂದಿನ ಸರ್ಕಾರದವರು ಮಾಡಿದ ಲೋಪ ಇದು. ತುಮಕೂರು ಜಿಲ್ಲೆಯಲ್ಲಿರತಕ್ಕ ಜಿಲ್ಲಾ ಬ್ಯಾಂಕ್ ಈ ದಿವಸ ಸರಿಯಾಗಿ ಕೆಲಸ ಮಾಡುತ್ತ ಇಲ್ಲ. ಸರ್ಕಾರದವರು ಇದನ್ನು ಕೂಡಲೇ ಸೂಪರ್‌ಸೀಡ್ ಮಾಡಿ ಅದರಲ್ಲಿರತಕ್ಕ ಲೋಪದೋಷಗಳನ್ನು ಕೂಡಲೇ ಸರಿಪಡಿಸಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ಸನ್ಮಾನ್ಯ ಅಧ್ಯಕ್ಷಿಣಿಯವರೇ ನಮ್ಮ ಸದನದ ಮುಂದೆ ಸಹಕಾರ ಸಚಿವರು ಮಂಡಿಸಿರತಕ್ಕ ಅವರಿಗೆ ಸಂಬಂಧಪಟ್ಟ ಬೇಡಿಕೆಯನ್ನು ನಾನು ವಿರೋಧಿಸುತ್ತ ಕೆಲವು ಮಾತುಗಳನ್ನಾಡುವುದಕ್ಕೆ ಇಚ್ಛಿಸುತ್ತೇನೆ.

ಸಹಕಾರ ತತ್ವವು ರಾಜ್ಯದಲ್ಲಿ ಒಂದು ದೊಡ್ಡ ಚಳುವಳಿಯ ರೂಪದಲ್ಲಿ ನಡೆದು ಇದರ ಸ್ಪಷ್ಟಫಲ ಜನತೆಗೆ ದೊರೆಯುವಂತಾಗಬೇಕಾದರೆ ಇದು ಒಬ್ಬ ಮಂತ್ರಿಗಳಿಂದಾಗತಕ್ಕ ಕಾರ್ಯವಲ್ಲ. ಈ ಸಹಕಾರ ಸಂಸ್ಥೆಗಳ ರಂಗದಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ಅಧಿಕಾರಿಗಳ ಎಲ್ಲಾ ನೌಕರಷಾಹಿಗಳ ಹೃದಯ ಸಂಪೂರ್ಣವಾಗಿ ಮಾರ್ಪಾಡಾದರೆ, ಇದು ಒಂದು ಆಂದೋಳನ ರೀತಿಯಲ್ಲಿ ನಡೆದರೆ ಆಗ ಶ್ರೀಸಾಮಾನ್ಯನಿಗೆ ಫಲ ದೊರೆಯುತ್ತದೆಂದು ನಂಬಿರತಕ್ಕ ಜನರಲ್ಲಿ ನಾನೊಬ್ಬ. ಈ ವಿಚಾರದಲ್ಲಿ ಆ ಪಕ್ಷದವರು ಈ ಪಕ್ಷದವರನ್ನು ದೂರುವುದು, ಈ ಪಕ್ಷದವರು ಆ ಪಕ್ಷದವರನ್ನು ದೂರುವುದನ್ನು ನೋಡಿದರೆ ನಾವೇನು ಪರಕೀಯರೇ? ನಾವೆಲ್ಲಾ ಒಂದೇ ಕುಟುಂಬಕ್ಕೆ ಸೇರಿದವರಾಗಿದ್ದೆವು. ಆಗ ನಮ್ಮ ಆಚಾರ ವ್ಯವಹಾರಗಳೆಲ್ಲಾ ಒಂದೇ ಆಗಿದ್ದವು. ಆದರೆ ಈಗ ಇಬ್ಭಾಗವಾಗಿದೆ.

ಆದರೆ ನಾನು ಈ ಸಂದರ್ಭದಲ್ಲಿ ಅಧಿಕಾರಿಗಳಿಗೆ ಒಂದು ಸೂಚನೆಯನ್ನು ಕೊಡಬಯಸುತ್ತೇನೆ. ಈ ದಿವಸ ಈ ಇಲಾಖೆಯ ಮೇಲಧಿಕಾರಿಗಳಾಗಿ ಒಬ್ಬ ಒಳ್ಳೆಯ ದಕ್ಷ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆಂದು ನಾನು ಕೇಳುತ್ತಿದ್ದೇನೆ. ಅವರ ಹೆಸರು ಮಹಾರುದ್ರಯ್ಯನವರು ಎಂದು. ಅವರನ್ನು ವೈಯಕ್ತಿವಾಗಿ ನಾನು ನೋಡಿಲ್ಲ. ನಾನು ಅವರ ಸಚ್ಚಾರಿತ್ರ್ಯವನ್ನು ಕೇಳಿ ತಿಳಿದುಕೊಂಡಿದ್ದೇನೆ. ಆದರೆ ಈಗ ಹೊಸದಾಗಿ ಬಂದಿರುವ ಮಂತ್ರಿಗಳು ತಮ್ಮ ಹೊಸ ಆವೇಶದಲ್ಲಿ ಆ ಇಲಾಖೆಯಲ್ಲಿ ಇರತಕ್ಕ ಹಳೇ ಹೆಗ್ಗಣಗಳನ್ನು ವರ್ಗಾವರ್ಗಿ ಮಾಡತಕ್ಕ ರಭಸದಲ್ಲಿ ಇವರನ್ನು ಬಯಲಿಗೆ ಎಳೆದು ಸ್ಥಳಪಲ್ಲಟ ಮಾಡುವುದಕ್ಕೆ ಯಾರೂ ಪ್ರಯತ್ನ ಮಾಡಬಾರದು ಎಂದು ನಾನು ಮೈಸೂರು ಜನತೆಯ ಬಗ್ಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಆ ಇಲಾಖೆಯಲ್ಲಿ ಏನು-ಏನು ಫಿಲ್ಟರಾಗಬೇಕೋ ಅದನ್ನು ಮಾಡಿಕೊಳ್ಳಲು ಆ ಜವಾಬ್ದಾರಿಯನ್ನು ಆ ಇಲಾಖೆಯ ಮೇಲಧಿಕಾರಿಗಳಿಗೆ ಬಿಟ್ಟು ಬಿಡಿ. ಇನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ಪ್ರಾರ್ಥನೆಯನ್ನು ಮಾನ್ಯ ಅಧ್ಯಕರ ಮೂಲಕ ತರಲಿಚ್ಛಿಸುವುದೇನೆಂದರೆ ಮಾನ್ಯ ಸಚಿವರದು ಬಹಳ ಮೃದು ಹೃದಯ, ತಾವು ಬಹಳ ಒಳ್ಳೆಯವರು, ಸಮಾಜದಲ್ಲಿ ಬಹಳ ಒಳ್ಳೆಯವರಾಗಿರುವುದೂ ಕೂಡ ತಪ್ಪೇ. ಅಂಥವರು ಇಲ್ಲಿ ಮಂತ್ರಿಗಳಾಗಿ ಇರುವುದಕ್ಕೆ ಲಾಯಕಿಲ್ಲ. ಮಂತ್ರಿಗಳಲ್ಲಿ 'ಒಳ್ಳೇತನ' ಇರಬೇಕೇ ವಿನಾ 'ಬಹಳ ಒಳ್ಳೇತನ' ಇರಬಾರದು ಎಂದು ಹೇಳುತ್ತೇನೆ. ತಾವು ಬಹಳ ಸಹೃದಯರು ನಿಮ್ಮ ಒಳ್ಳೇತನ ತಮ್ಮನ್ನು ಕೆಟ್ಟ ಹಾದಿಗೆ ಎಳೆಯಬಹುದು. ತಮ್ಮ ಪಕ್ಷ ವಿವೇಚನೆ ಇಲ್ಲದೆ ಹೇಳುವುದನ್ನೆಲ್ಲಾ ತಾವು ಕೇಳಬಾರದು. ನಮ್ಮಲ್ಲಿ ಈ ಸಂಸ್ಥೆಗಳ ಮೂಲಕ ಲೇಣಿ ದೇಣಿ ಬಹಳ ಕಾಲದಿಂದಲೂ ನಡೆದುಕೊಂಡುಬಂದಿದೆ. ನಾನು ಈ ದಿವಸ ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ. ಈ ಬ್ಯಾಂಕುಗಳಿಂದ ಯಾರು ಯಾರು ಸಾಲ ಪಡೆದಿದ್ದಾರೋ ಅವರಿಗೆಲ್ಲಾ ಆ ಸಾಲದ ಹಣ ಪೂರ್ತಿಯಾಗಿ ಮುಟ್ಟಿಲ್ಲ. ಅಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಅಲ್ಲಿ ಇರತಕ್ಕ ನೌಕರರ ಮೊದಲುಗೊಂಡು ಎಲ್ಲರೂ ಸೇರಿ ಒಂದು ಲೆಕ್ಕಾಚಾರದಂತೆ ಸಾಲದ ಹಣದಲ್ಲಿ ಕಸಿದುಕೊಂಡು ತಾವೇ ತಿಂದು ಹಾಕಿದ್ದಾರೆ. ರೈತನಿಗೆ ಸಿಕ್ಕಿರತಕ್ಕದ್ದು ಬಹಳ ಕಡಿಮೆ ಮೊತ್ತದ ಹಣ. ಈ ಅಂಶವನ್ನು ತಾವು ದಯವಿಟ್ಟು ಮರೆಯಬಾರದು. ಸಹಕಾರ ಸಂಘಗಳನ್ನು ಶುದ್ಧೀಕರಣಮಾಡಬೇಕು. ಸಹಕಾರ ಸಂಘಗಳಲ್ಲಿ ಹಣ ದುರುಪಯೋಗ ಮಾಡಿದರೆ ಮಾಡಿದವರು ಯಾರೇ ಆಗಲಿ ಅವರಿಗೆ ತಕ್ಕ ಶಿಕ್ಷೆ ವಿಧಿಸಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಬಿ. ಪುಟ್ಟಸ್ವಾಮಯ್ಯ)

5-30 P.M.

ಸಿಲ್ಕ್ ಕೋಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿ ಎಂದು ಬೆಂಗಳೂರಿನಲ್ಲಿದೆ. ಆವರೆ ರೇಷ್ಮೆ ಬಿತ್ತನೆ ಮಾಡುವವರಿಗೆ ಸರಿಯಾದ ಬಿತ್ತನೆ ದೊರೆಯುತ್ತಿಲ್ಲ, ಆವರು ಎಲ್ಲಿ ಅದು ದೊರೆಯುವುದೋ ಅಲ್ಲಿಹೋಗಿ ತರಬೇಕಾಗುವುದು. ಈಸೊಸೈಟಿಯು ಒಂದು ವರ್ಷದಿಂದ ಪಟ್ಟಭದ್ರ ಹಿತಗಳ ಕೈಲಿದೆ. ಸ್ಪೆಷಲ್ ಆಡಿಟ ಸೆಲ್ ಹಾಕಿ ಕಡ್ಡಾಯವಾಗಿ ಅಡಿಟ್ ಮಾಡಿ ಎಷ್ಟು ಲಕ್ಷರೂಪಾಯಿ ದುರುಪಯೋಗವಾಗಿದೆ ಎಂದು ಕಂಡುಹಿಡಿದು ಶುದ್ಧವಾದ ಬಿತ್ತನೆಯನ್ನು ವ್ಯವಸಾಯ ಮಾಡುವವರಿಗೆ ಒದಗಿಸಬೇಕು. ಇದಕ್ಕೆ ಮೇಲ್ವಿಚಾರಣೆ ನಡೆಸಲು ವ್ಯವಸ್ಥೆಮಾಡಬೇಕು. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎ. ಶಂಕರ ಆಳ್ವ (ಸಹಕಾರ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಅನೇಕ ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ. ಇದರ ವಿಚಾರದಲ್ಲಿ ಕೆಲವು ಮುಖ್ಯ ವಿಷಯಗಳನ್ನು ಹೇಳಲು ಬಯಸುತ್ತೇನೆ. ಈಗತಾನೆ ಮಾತನಾಡಿದ ಶ್ರೀ ಪುಟ್ಟಸ್ವಾಮಯ್ಯನವರು ರಿಜಿಸ್ಟ್ರಾರರ ವಿಷಯದಲ್ಲಿ ಬಹಳ ಶಿಫಾರಸು ಮಾಡಿದರು ಮತ್ತು ನ್ಯೂನತೆಗಳನ್ನು ತಿಳಿಸಿದರು. ಆಫೀಸರುಗಳನ್ನು ವರ್ಗಮಾಡುವಾಗ ಮಂತ್ರಿಗಳಾಗಲೀ ಅಥವ ಸದಸ್ಯರಾಗಲೀ ಅಥವಾ ಇತರರಾಗಲಿ ಮಧ್ಯೆ ಪ್ರವೇಶ ಮಾಡಬಾರದು ಮಧ್ಯೆ ಯಾರೂ ಕೈಹಾಕಬಾರದು ಎಂದು ಸಹ ಸೂಚನೆ ಮಾಡಿದರು. ಇದು ಒಪ್ಪತಕ್ಕದ್ದೇ ಅಗಿದೆ. ಈ ವಿಷಯದಲ್ಲಿ ನಾನಾಗಲೀ ಇತರ ಮಂತ್ರಿಗಳಾಗಲೀ ಯಾರೂ ಒತ್ತಾಯ ಹೇರುವುದಿಲ್ಲ ಒಂದೇ ಕಡೆಯಲ್ಲಿ ಅನೇಕ ವರ್ಷ ಇದ್ದ ವ್ಯಕ್ತಿಯನ್ನು ಬೇರೆ ಕಡೆಗೆ ವರ್ಗ ಮಾಡಬೇಕು, ಮತ್ತು ಸ್ವಲ್ಪ ಅವಧಿಯವರೆಗೆ ಇರುವವರನ್ನು ವರ್ಗ ಮಾಡಬಾರದು ಎಂದು ಸಲಹೆ ನಾವು ಮಾಡಿದ್ದೇವೆ. ಒಂದು ವೇಳೆ ಜಾಗ್ರತೆ ವರ್ಗ ಮಾಡಬೇಕಾದರೆ ಅದಕ್ಕೆ ಕಾರಣವಿರಬೇಕು, ಕಾರಣವಿಲ್ಲದೆ ಬೇಗ ವರ್ಗ ಮಾಡಬಾರದು ಎಂದು ತಿಳಿಸಿದ್ದೇವೆ. ಯಾವಾಗಲಾದರೂ ಸಂದರ್ಭ ಬಂದಾಗ ತೊಂದರೆ ಇದ್ದರೆ ಅಧಿಕಾರಿಗಳು ತಿಳಿಸುವರು, ನಾವು ಯಾವಾಗಲೂ ಒತ್ತಾಯ ಮಾಡುವುದಿಲ್ಲ ಎಂದು ಹೇಳುತ್ತೇನೆ.

ನನ್ನ ಮಿತ್ರರಾದ ಶ್ರೀ ಬಂಗಾರಪ್ಪನವರು ಕೆಲವು ಸಲಹೆಗಳನ್ನು ಕೊಟ್ಟರು. ಹೇಗೆ ಮಾಡಬೇಕೆಂದು ಹೇಳಲಿಲ್ಲ. ಅಧಿಕಾರಿಗಳನ್ನು ಹೆದರಿಸಬೇಕೆಂದು ಹೇಳಿದರು. ಯಾವರೀತಿಯಲ್ಲಿ ಹೆದರಿಸಬೇಕು ಮತ್ತು ಯಾವ ರೀತಿಯಲ್ಲಿ ಇಲಾಖೆಯಲ್ಲಿ ಸುಧಾರಣೆ ಮಾಡಬಹುದು ಎಂಬುವನ್ನು ಹೇಳಲಿಲ್ಲ. ಸಹಕಾರ ಇಲಾಖೆಯನ್ನು ರದ್ದುಮಾಡುವುದು ಒಳ್ಳೆಯದು ಎಂಬ ಸಲಹೆ ಬಂತು ಈ ಎರಡನ್ನು ಬಿಟ್ಟರೆ ಉಳಿದಂತೆ ಅನೇಕ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಕೆಲವು ಟೀಕೆ ಎಂದು ಹೇಳುವುದಿಲ್ಲ, ಕ್ರಿಟಿಸಿಸಂ ಎಂದು ಹೇಳುತ್ತೇನೆ, ಟೀಕೆ ಮಾಡಿದರು. ಅದರಲ್ಲಿ ಸತ್ಯವುಂಟೇ ಎಂಬುದನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಕೊಳ್ಳಲಾಗುವುದು. ಇರುವ ಲೋಪದೋಷಗಳ ವಿಚಾರದಲ್ಲಿ ಸರಕಾರಕ್ಕೆ ಸಹ ಅವುಗಳ ಅರಿವಿದೆ. ಕೆಲವು ಕಡೆ ಲಂಚ ತೆಗೆದುಕೊಳ್ಳುವುದಿದೆ, ಇಲ್ಲವೆಂದು ಹೇಳುವುದಿಲ್ಲ. ಎಲ್ಲಾ ಕಡೆ ಇದು ಉಂಟು. ಸರಕಾರಿ ಅಫೀಸರು ಎಂದರೆ ಜನರ ಒಂದು ಕ್ರಾಸ್ ಸೆಕ್ಷನ್. ಜನರು ಹೇಗಿದ್ದಾರೋ ಅದರ ರಿಫ್ಲೆಕ್ಷನ್ ಅದರಲ್ಲಿ ಕಂಡುಬರುವುದು. ಸಮಾಜದಲ್ಲಿ ಎಷ್ಟು ಲಕ್ಷ ಜನರಿದ್ದಾರೋ ಅವರಗುಣ ಯಾವುದಿದ್ದರೆ ಅದು ಇವರಲ್ಲೂ ಇರುವುದು, ಒಳ್ಳೆಯ ಗುಣವಿದ್ದರೂ ಇರುವುದು. ಆದರೂ ಇಲಾಖೆಯಲ್ಲಿ ಲಂಚಕೋರರು, ತಪ್ಪು ಮಾಡುವವರು ಇರುವುದು ಕಂಡುಬಂದರೆ ಅವರು ಆಫೀಸರುಗಳಾಗಲಿ ಯಾರೇ ಆಗಲಿ ಯಾರ ಒತ್ತಡಕ್ಕೂ ಮಣಿಯದೆ ಅವರಿಗೆ ತಕ್ಕ ಶಿಕ್ಷೆ ವಿಧಿಸುತ್ತೇವೆ, ಇದರಲ್ಲಿ ಅನುಮಾನವಿಲ್ಲ, ಖಂಡಿತವಾಗಿಯೂ ಈ ಕೆಲಸ ಮಾಡುತ್ತೇವೆ.

ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಬಹಳ ಸೊಸೈಟಿಗಳು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳಿದರು. ಕೋ-ಆಪರೇಷನ್ ಎಂಬುದು ಬಹಳ ವಿಸ್ತಾರವಾಗಿದೆ. ಅನೇಕ ವಿಧದಲ್ಲಿ ಸಂಘಸಂಸ್ಥೆಗಳು ಬೆಳೆಯುತ್ತಿವೆ ಹೊಸದಾಗಿ ಕೆಲವು ಸಹಕಾರ ಸಂಘಗಳು ಸ್ಥಾಪನೆಯಾಗುತ್ತಿವೆ. ಈಗ ಎರಡು ಸ್ಪೇಟ್ ಸ್ಕೀಮುಗಳು ನಮ್ಮ ರಾಜ್ಯಕ್ಕೆ ಅನ್ವಯಿಸುವುದು ಇವೆ. ವರ್ಲ್ಡ್ ಬ್ಯಾಂಕ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ ಅಸೋಸಿಯೇಷನ್ ಎಂಬುದಿದೆ. ಅದರಲ್ಲಿ ನಮ್ಮ ರಾಜ್ಯದ ಕೆಲವೊಂದು ಸ್ಕೀಂ ಮಾಡಿದ್ದಾರೆ. ಅದು ಸಹಾಯ ನೀಡುವುದು. ಲ್ಯಾಂಡ್ ಡೆವಲಪ್‌ಮೆಂಟಿಗಾಗಿ 53 ಕೋಟಿ ರೂಪಾಯಿಗಳನ್ನು 3 ವರ್ಷಗಳಲ್ಲಿ ಖರ್ಚುಮಾಡುವ ಯೋಜನೆ ಇದೆ. ವರ್ಲ್ಡ್ ಬ್ಯಾಂಕಿನವರು 40 ಮಿಲಿಯನ್ ಡಾಲರ್ಸ್ ಅಂದರೆ 30 ಕೋಟಿ ರೂಪಾಯಿ ಕೊಡುವರು 17 ಸಾವಿರ ಬಾವಿ, 2 ಸಾವಿರ ಟ್ರಾಕ್ಟರ್ಸ್, 20 ಲಕ್ಷ ಇರಿಗೇಷನ್ ಪ್ರಾಜೆಕ್ಟ್ಸ್ ಮತ್ತು ಲ್ಯಾಂಡ್

ರಿಕ್ಲಮೇಷನ್ ಸ್ಕೀಮ್ಸ್ ತೆಗೆದುಕೊಳ್ಳುವುದಿದೆ. ಈ ಸಂದರ್ಭದಲ್ಲಿ ಒಂದು ಷರತ್ತಿದೆ. ಶೇಕಡ 75 ರಷ್ಟು ರಿಕವರಿಯಾಗಬೇಕು ಎಂಬುದು ಆ ಷರತ್ತು. ಅದಕ್ಕಾಗಿ ಬಹಳ ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ಇಲಾಖೆಯ ಆಫೀಸರುಗಳು ಮಾತ್ರವಲ್ಲದೆ ಡೆಪ್ಯುಟಿ ಕಮಿಷನರುಗಳ ಒಂದು ಸಮ್ಮೇಳನ ವನ್ನು ಮುಖ್ಯಮಂತ್ರಿಗಳು ಕರೆದಿದ್ದರು. ಅವರಿಗೆ ರಿಕವರಿಗೆ ಗಮನಕೊಡಬೇಕೆಂದು ಹೇಳಿದೆ. ಅನೇಕ ಜಿಲ್ಲೆಗಳಲ್ಲಿ ಆದಷ್ಟು ಪ್ರಮಾಣದಲ್ಲಿ ವಸೂಲುಮಾಡುತ್ತಿದ್ದಾರೆ.

ಮಾನ್ಯ ಮಿತ್ರರು ಶ್ರೀ ತಿಮ್ಮಪ್ಪನವರು ಸಾಧಾರಣ 160 ಕೋಟಿ ರೂಪಾಯಿ ಬಾಕಿ ಉಂಟು ಎಂದು ಹೇಳಿದ್ದಾರೆ. ಆ ಲೆಕ್ಕ ಸರಿಯಿಲ್ಲ. ಅದರಲ್ಲಿ ಷಾರ್ಟ್ ಟರ್ಮ್ ಲೋನು 17 ಕೋಟಿ ರೂಪಾಯಿ ಬಾಕಿ ಉಂಟು, ಮೀಡಿಯಂ ಟರ್ಮ್ ಲೋನು 3 ಕೋಟಿ ರೂಪಾಯಿ ಮತ್ತು ಲಾಂಗ್ ಟರ್ಮ್ ಲೋನು 4 ಕೋಟಿ ರೂಪಾಯಿ ಈ ರೀತಿ ಒಟ್ಟಿಗೆ 29 ಕೋಟಿ ರೂಪಾಯಿ ಚಿಲ್ಲರೆ ಬರಲಿಕ್ಕೆ ಉಂಟು. ಆದಷ್ಟೂ ಪ್ರಯತ್ನ ಮಾಡುತ್ತಾ ಇದ್ದಾರೆ, ಅದರ ಅನೇಕ ಕಡೆಗಳಲ್ಲಿ ಬೆಳೆ ಆಗಲಿಲ್ಲ ಮತ್ತು ಬಡ ಜನರು ಅವರಿಗೆ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ ಅಂತ ಹೇಳಿ ಅನೇಕ ಅರ್ಜಿಗಳು ಬರುತ್ತಾ ಇವೆ. ನಾವು ಸಹಾನುಭೂತಿಯಿಂದ ಅಂತಹ ಬಡ ಜನರ ಮಟ್ಟಿಗೆ ವಸೂಲು ಮಾಡುವಾಗ ಆದಷ್ಟು ರಿಯಾಯಿತಿಯಿಂದ ವಸೂಲು ಮಾಡಬೇಕೆಂದು ಆದೇಶ ಸಹ ಕೊಟ್ಟಿದ್ದೇವೆ. ಇದರಲ್ಲಿ ಅನೇಕರು ಕೊಡಲಿಕ್ಕೆ ಸಾಧ್ಯವಿದ್ದವರೂ ಸಹ ಕೊಡದೆ, ಆ ಬಡ ಜನರನ್ನು ಮುಂದುವರಿಸಿ ಎಲ್ಲಿ ಬೆಳೆ ಆಗಿಲ್ಲ, ಕೊಡಲಿಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ ಅವರ ಮಟ್ಟಿಗೆ ಆದಷ್ಟು ಜಾಗರೂಕತೆಯಿಂದ ನೋಡುತ್ತಾ ಇದ್ದೇವೆ ಯಾರು ನಿಜವಾಗಿಯೂ ಕೊಡಲಿಕ್ಕೆ ಸಾಧ್ಯವಿಲ್ಲದೆ ಕಷ್ಟದಲ್ಲೇ ಇದ್ದಾರೆ ಅವರ ಮಟ್ಟಿಗೆ ಆದಷ್ಟು ರಿಯಾಯಿತಿ ಕೊಡಬೇಕೆಂದು ನೋಡುತ್ತಾ ಇದ್ದೇವೆ. ಎಲ್ಲಾ ರಿಯಾಯಿತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಅದಷ್ಟು ಮಟ್ಟಿಗೆ ವಸೂಲು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಕೋ-ಆಪರೇಟೀವ್ ಸೊಸೈಟೀಸ್ ನಮ್ಮ ರಾಜ್ಯದಲ್ಲಿ 19,763 ಇವೆ. ಅದರಲ್ಲಿ ಮೆಂಬರ್‌ಷಿಪ್ 42 ಲಕ್ಷ ಇದೆ. ಅವರಲ್ಲಿ ರೂರಲ್ ಪಾಪ್ಯುಲೇಷನ್ 48 ಪರ್ಸೆಂಟು. ಪಿ.ಎಲ್.ಡಿ. ಬ್ಯಾಂಕುಗಳು 170 ಇವೆ. ಕೋ-ಆಪರೇಟೀವ್ ಸ್ಪಿನ್ನಿಂಗ್ ಮಿಲ್ಸ್ 4 ಯೂನಿಟ್ಸ್ ಇವೆ, ಗೋಡೌನ್ಸ್ 3040 ಅವರಲ್ಲಿ ಕಂಪ್ಲೀಟ್ ಆದದ್ದು 2286. ಷೆಡ್ಯೂಲ್ ಕ್ಯಾಸ್ಟ್, ಷೆಡ್ಯೂಲ್ ಟ್ರೈಬ್ಸ್‌ಗೆ 4 ಕೋಟಿ 88 ಲಕ್ಷ ರೂಪಾಯಿ ಹಣ ಮಂಜೂರಾಗಿದೆ, ಅದರಲ್ಲಿ ಮೂರು ಕೋಟಿ 79 ಲಕ್ಷ ಚಿಲ್ಲರೆ ಅವರಿಗೆ ಕೊಟ್ಟಿದೆ. 23792 ಮನೆಗಳ ಪೈಕಿ 14236 ಮನೆಗಳು ಕಂಪ್ಲೀಟ್ ಆಗಿವೆ. ಈಗ ಎಲ್.ಐ.ಸಿ. ಅವರು ಹಣ ಕೊಡಲಿಕ್ಕೆ ಕಮ್ಮಿ ಮಾಡಿದ್ದಾರೆ. ಇದರಲ್ಲಿ 1500 ರೂಪಾಯಿನಿಂದ 3000 ರೂಪಾಯಿಗಳವರೆಗೂ ಸಾಲ ಕೊಡುತ್ತೇವೆ. ಕೆಲವು ಸಂದರ್ಭದಲ್ಲಿ 3 ಗುಂಟೆ ಸ್ಥಳ ಹಾಗೂ 200 ರೂಪಾಯಿ ಟಿಂಬರ್ ಸಹ ಕೊಡಲಿಕ್ಕೆ ಪ್ರೊವಿಜನ್ ಮಾಡಿದೆ. ಲಾಂಗ್ ಟರ್ಮ್ ಲೋನ್ ಅಂತ 1970-71 ಕ್ಕೆ 9 ಕೋಟಿ 35 ಲಕ್ಷ ರೂಪಾಯಿ, 71-72ಕ್ಕೆ 10 ಕೋಟಿ ರೂಪಾಯಿ, 72—73ಕ್ಕೆ 15 ಕೋಟಿ ರೂಪಾಯಿ ಖರ್ಚಾಗುತ್ತದೆ ಎಂದು ಅಂದಾಜು ಮಾಡಿದೆ. ಷಾರ್ಟ್ ಟರ್ಮ್ ಲೋನು 70-71ಕ್ಕೆ 35 ಕೋಟಿ 24 ಲಕ್ಷ ರೂಪಾಯಿ 71-72ಕ್ಕೆ 40 ಕೋಟಿ ರೂಪಾಯಿ ಮೊನ್ನೆ ಜೂನ್ ಆಖೈರುವರೆಗೆ, 72-73ಕ್ಕೆ 43 ಕೋಟಿ ರೂಪಾಯಿ, ಖರ್ಚಾಗಲಿಕ್ಕೆ ಇದೆ. ಖರ್ಚು ಕಮ್ಮಿಯಾಗುತ್ತಾ ಇದೆ ಅಂತ ಅಲ್ಲ ಜಾಸ್ತಿ ಯಾಗುತ್ತಾ ಇದೆ. ಮತ್ತು ಬಡ್ಡಿ ವಿಷಯದಲ್ಲಿ ಸಹ ಮಾನ್ಯ ಸದಸ್ಯರು ಹೇಳಿದರು. ಒಂದು ವಿಷಯ ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು, ಏನೆಂದರೆ ಅಪೆಕ್ಸ್ ಬ್ಯಾಂಕ್ ಸಾಲ ಕೊಡು ವುದಾದರೂ ಎಲ್ಲಾ ಹಳ್ಳಿಗಳಿಗೂ ಅದೇ ಕೊಡಲಿಕ್ಕೆ ಆಗಲಿಕ್ಕಿಲ್ಲ ಅದ್ದರಿಂದ ಷಾರ್ಟ್‌ಟರ್ಮ್ ಲೋನು ಅಲ್ಲಿ 4 ಪರ್ಸೆಂಟಿನಂತೆ ಸಿಕ್ಕಿದರೆ ಅದು ರೈತರಿಗೆ ಸಿಕ್ಕುವಾಗ 8 ರಿಂದ 9 ಪರ್ಸೆಂಟ್ ಆಗುತ್ತದೆ. ಮೀಡಿಯಂ ಟರ್ಮ್ ಲೋನು ನಾಲ್ಕೂವರ ಪರ್ಸೆಂಟ್ ಅಲ್ಲಿ ಆದರೆ ಅವರಿಗೆ ಎಂಟೂವರೆಯಿಂದ ಒಂಭತ್ತು ಪರ್ಸೆಂಟ್ ಆಗುತ್ತದೆ. ಅದ್ದರಿಂದ ಇದೂ ಸಹ ಹೆಚ್ಚು ಅಂತ ಹೇಳುವುದಕ್ಕೆ ಸಾಧ್ಯ ವಾಗುವುದಿಲ್ಲ ಏಕೆಂದರೆ ಪ್ರತಿಯೊಬ್ಬನಿಗೂ ಇದು ಸಿಕ್ಕಬೇಕಾಗಿದೆ.

ಇನ್ನು ಶ್ರೀಮಾನ್ ತಿಮ್ಮಪ್ಪನವರು ಪ್ರತ್ಯೇಕವಾಗಿ ಒಂದು ವಿಷಯ ಹೇಳಿದರು ಏನೆಂದರೆ ಸೊಸೈಟಿಗಳು ಸರಿಯಾಗಿ ಕೆಲಸ ಮಾಡದಿದ್ದರೆ ಜನರಿಗೆ ಇದರಲ್ಲಿ ನಂಬಿಕೆ ಬರುವುದಿಲ್ಲ ಕೆಲವು ಜಿಲ್ಲೆಗಳಲ್ಲಿ ಬಹಳ ಹೆಚ್ಚು ಹಣ ಈ ಸೊಸೈಟಿಗಳಿಂದ ವಾಪಸು ಬಂದಿಲ್ಲ ಎಂದು ಹೇಳಿದರು. ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ಈ ಬೇಸಿಕ್ ಬ್ಯಾಂಕ್ಸ್ ಸರಿಯಾಗಿ ಕೆಲಸಮಾಡುತ್ತಾ ಇಲ್ಲ. ಬಾಕಿ ಎಲ್ಲಾ ಜಿಲ್ಲೆಗಳಲ್ಲೂ ಸರಿಯಾಗಿ ಕೆಲಸ ಮಾಡುತ್ತಾ ಇವೆ.

ಶ್ರೀಮಾನ್ ಲಿಂಗಾರೆಡ್ಡಿಯವರು ಒಂದು ಮಾತು ಹೇಳಿದರು ಆ ವಿಷಯದಲ್ಲಿ ಈಗಾಗಲೇ ತನಿಖೆ ನಡೆಯುತ್ತಾ ಇದೆ. ಎರಡು ಸೊಸೈಟಿಗಳನ್ನು ಲಿಕ್ವಿಡೇಟ್ ಮಾಡಿದೆ. ಇನ್ನು ಬಾಕಿ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ವಿಷಯದಲ್ಲಿ ರಿಪೋರ್ಟ್ ಬಂದ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

ಇನ್ನು ಶ್ರೀಮಾನ್ ಕಕ್ಕಿಲಾಯರವರು ನನ್ನ ಜಿಲ್ಲೆಗೆ ಸಂಬಂಧಪಟ್ಟ ಜನತಾ ಬಜಾರ್ ವಿಷಯ ಹೇಳಿದರು, ಈ ವಿಷಯದಲ್ಲಿ ಈಗಾಗಲೇ ಒಂದು ಸ್ಟ್ಯಾಚ್ಯುಟರಿ ಇನ್ ಕ್ವೈರಿ ಆಗಲಿಕ್ಕೆ ಉಂಟು, ಅದು ಆದ ಕೂಡಲೇ ಸೂಕ್ತ ಕ್ರಮ ಕೈಕೊಳ್ಳುತ್ತೇವೆ ಎಂದು ಹೇಳಬಯಸುತ್ತೇನೆ. ಇಂಡಸ್ಟ್ರಿಯಲ್ ಸೊಸೈಟಿ ವಿಷಯ ಹೇಳಿದರು. ನಾಲ್ಕು ಸೊಸೈಟಿಗಳು ಇವೆ. ಅವುಗಳ ವಿಷಯದಲ್ಲೂ ಸಹ ವಿಚಾರ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನೊಂದು ವಿಷಯ ಮಾನ್ಯ ಸದಸ್ಯರು ಹೇಳಿದ್ದೇನೆಂದರೆ ಸರಿಯಾಗಿ ಆಡಿಟ್ ಆಗುವುದಿಲ್ಲ, ಅನೇಕ ಸಂದರ್ಭಗಳಲ್ಲಿ ಆಡಿಟ್ ಆಗದೇ ಮಿಸ್ ಅಪ್ರೋಪ್ರಿಯೇಷನ್ ಆಗಿ ಅದು ತನಿಖೆಗೆ ಬರುವಾಗ ಸಾಧಾರಣ 5–6 ವರ್ಷ ಆಗಿಹೋಗುತ್ತದೆ ಅದರಲ್ಲಿ ಹಣ ವಸೂಲು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ, ಅನೇಕ ಜನರು ತಪ್ಪಿಸಿಕೊಂಡು ಹೋಗುತ್ತಾರೆ ಎಂದು ಹೇಳಿದ್ದಾರೆ. ಸ್ವಲ್ಪಮಟ್ಟಿಗೆ ಇದು ಸರಿಕಾಣುತ್ತದೆ. 31-5-72ರ ವರೆಗೆ 19,796 ಸೊಸೈಟಿಗಳ ಪೈಕಿ 16,213 ಸೊಸೈಟಿಗಳ ಆಡಿಟ್ ಆಗಿದೆ, ಪರ್ಸೆಂಟ್ 81.9.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಅನೇಕ ಸೊಸೈಟಿಗಳು 5-6 ಲಕ್ಷ ರೂಪಾಯಿಗಳನ್ನು ಡೀಲ್ ಮಾಡುತ್ತಾ ಇವೆ. ಅವುಗಳಲ್ಲಿ ಇವತ್ತಿಗೂ ಸ್ಟಾಕ್ ವೆರಿಫಿಕೇಷನ್ ಆಗಿಲ್ಲ, ನಿಮ್ಮ ಡಿಪಾರ್ಟ್‌ಮೆಂಟಿನವರು ಏನಾದರೂ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಂಡಿದ್ದಾರೆಯೇ ಎಂದು ಕೇಳುತ್ತೇನೆ.

ಶ್ರೀ ಎ. ಶಂಕರ ಆಳ್ವ.—ಕೆಲವು ಆ ರೀತಿ ಇರಲಿಕ್ಕೂ ಸಾಕು, ಹಾಗಿದ್ದರೆ ನಾವು ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಹಾಸನ ಜಿಲ್ಲೆಯಲ್ಲಿ ಬೆಳಗೋಡು ಸೊಸೈಟಿಯಲ್ಲಿ ಪ್ರೆಸಿಡೆಂಟ್ ಮತ್ತು ಸೆಕ್ರೆಟರಿ 2 ಲಕ್ಷ ರೂಪಾಯಿಗಳನ್ನು ರೈತರಿಗೆ ಕೊಡಿಸಿಬಿಟ್ಟರು. ಅವರಿಲ್ಲಿ ಡೂಪ್ಲಿಕೇಟ್ ರಸೀತಿ ಕೊಟ್ಟಿದ್ದಾರೆ. ಹಣ ವಸೂಲಿ ಮಾಡಿಕೊಂಡರು. ಇಬ್ಬರೂ ಸೇರಿ ಕಾಫಿ ತೋಟ ತೆಗೆದುಕೊಂಡು ಕಾರ್‌ನಲ್ಲಿ ಓಡಾಡುತ್ತಿದ್ದಾರೆ. ಕೆಲವರು ರಸೀಟ್ ತೆಗೆದುಕೊಂಡಿಲ್ಲ. ಡಿಪಾರ್ಟ್‌ಮೆಂಟ್ ಸ್ಟಾಫ್ ಕೂಡ ಹೋಗಿದ್ದಾರೆ. ರೈತರೆಲ್ಲಾ ಬೀದಿಭಿಕಾರಿಗಳಾಗಿದ್ದಾರೆ. ಈ ರೀತಿ ಅನ್ಯಾಯ ನಡೆಸುವುದಾದರೆ ಈ ಸಹಕಾರ ಏತಕ್ಕೆ ಇರಬೇಕು ? ಈ ತರಹ ಸಾವಿರಾರು ಕೇಸುಗಳು ಇರಬಹುದು ಎಂದು ಹೇಳುತ್ತೇನೆ.

ಶ್ರೀ ಎ. ಶಂಕರ ಆಳ್ವ.—ಕೆಲವು ವಿಷಯ ನನ್ನ ಗಮನಕ್ಕೂ ಬಂದಿವೆ. ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಏನೆಂದರೆ ಕೆಲವು ಸಂದರ್ಭಗಳಲ್ಲಿ ದೂರು ಈ ರೀತಿ ಬಂದಿದೆ. ಕೆಲವರು ನಾವು ಹಣ ವಾಪಸ್ಸು ಕೊಟ್ಟಿದ್ದೇವೆ ಎಂದು ; ಕೆಲವರು ನಾವು ಹಣ ಕೊಟ್ಟಿದ್ದೇವೆ ರಸೀಟ್ ಕೊಟ್ಟಿಲ್ಲ ನಮ್ಮನ್ನು ಆರೋಪ ಮಾಡಿದ್ದಾರೆ ಎಂದು ; ಕೆಲವರು ರಸೀಟ್ಸ್ ಕೊಟ್ಟಿದ್ದಾರೆ ಅವನ್ನು ಹಾಜರು ಮಾಡಿಕೊಟ್ಟಿದ್ದೇವೆ ಎಂದು. ಇದನ್ನು ತನಿಖೆ ಮಾಡಲು ಕಳುಹಿಸಿ ಕೊಟ್ಟಿದ್ದೇವೆ. ಇದು ನ್ಯಾಯವಾದ ರಸೀಟ್ಸ್ ಉಂಟೋ ಅಲ್ಲವೋ, ಅಧಿಕಾರದಲ್ಲಿದ್ದವರು ಕೊಟ್ಟಿದ್ದಾರೋ ಇಲ್ಲವೋ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಅವರ ರುಜು ಇದೆ. ಅವರ ರುಜುವಿಗೂ ಬೇರೆಯವರ ರುಜುವಿಗೂ ಹೋಲಿಸಬಹುದು.

ಶ್ರೀ ಎ. ಶಂಕರ ಆಳ್ವ.—ಯಾವುದೇ ಕಾರಣದಿಂದ ಆಗಲಿ ಅಂತಹವರಿಂದ ಎಷ್ಟು ವಸೂಲ್ ಮಾಡಿದ್ದಾರೆ ಅಷ್ಟನ್ನು ವಸೂಲ್ಮಾಡುವುದಕ್ಕೆ ಆ ಸೊಸೈಟಿಯವರ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಲೆಕ್ಕಕ್ಕೆ ಬರದಿದ್ದರೆ ಮಿಸ್ ಅಪ್ರೋಪ್ರಿಯೇಷನ್ ಆಗಿದ್ದರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರು ಈ ವಿಷಯದಲ್ಲಿ ಏನಾದರೂ ಹೆಚ್ಚು ವಿವರಣೆ ಕೊಟ್ಟರೆ ಅದರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಏನೂ ತೊಂದರೆ ಇಲ್ಲ. ಮತ್ತು ಕೆಲವು ಸದಸ್ಯರು ಇಲಾಖೆಯ ಬಗ್ಗೆ ಕೆಲವು ಸೂಚನೆಗಳನ್ನು ಕೊಟ್ಟರು. ಆ ವಿಷಯದಲ್ಲಿ ಕೆಲವೊಂದು ಅಂಶಗಳನ್ನು ಹೇಳಬಯಸುತ್ತೇನೆ. ಕೋಆಪರೇಷನ್ ಇಲಾಖೆಯಲ್ಲಿ ಯಾವ ಸೊಸೈಟಿಯೇ ಆಗಲೀ ಡಿಸ್ಟ್ರಿಕ್ಟ್ ಬ್ಯಾಂಕೇ ಆಗಲಿ, ಯಾವುದೇ ಆಗಲಿ ಅದರಲ್ಲಿ ಯಾವ ಪಕ್ಷದವರೇ ಆಗಲಿ ಅವುಗಳ ಪೈಕಿ ಸರ್ಕಾರ ತಾರತಮ್ಯ ಮಾಡುವುದಿಲ್ಲ. ಒಂದು ಪಕ್ಷದವರು ಅದರಲ್ಲಿ ಅಧ್ಯಕ್ಷರಾಗಿ ಬರಲಿ. ಅಥವಾ ಇನ್ನೊಂದು ಪಕ್ಷದವರು ಅಧ್ಯಕ್ಷರಾಗಿ ಬರಲಿ ಸರ್ಕಾರದವರು ಇದಕ್ಕೆ ಕೈಹಾಕುವುದಿಲ್ಲ. ಬ್ಯಾಂಕ್‌ನವರಾಗಲಿ,

ಸಹಕಾರ ಸಂಘಗಳವರೇ ಆಗಲಿ ತಪ್ಪು ಮಾಡಿದರೆ ಅದರಲ್ಲಿ ಹಿಂದು ಮುಂದು ನೋಡದೆ ತನಿಖೆ ಮಾಡಲಿಕ್ಕೆ ತಯಾರಿದ್ದೇವೆ. ಆದುದರಿಂದ ಈ ವಿಷಯದಲ್ಲಿ ರಾಜಕೀಯ ಮಾಡುವುದು ಸರ್ಕಾರಕ್ಕೇ ಆಗಲಿ, ಯಾರಿಗೇ ಆಗಲಿ ಸರಿಯಲ್ಲ ಎಂದು ನನ್ನ ಅಭಿಪ್ರಾಯ.

ನಾನು ಮೊದಲೇ ಹೇಳಿದಂತೆ ಆಡಿಟ್ ವಿಚಾರದಲ್ಲಿ ನಾವು ನೋಡುತ್ತಾ ಇದ್ದೇವೆ. ಕೆಲವು ಸದಸ್ಯರು ಕೂಡ ಹೇಳಿದ್ದಾರೆ. ಅದೇ ಬ್ಯಾಂಕ್‌ನಲ್ಲಿ ಕ್ಲರ್ಕ್, ಸೂಪರ್‌ವೈಸರ್, ಸೆಕ್ರೆಟರಿಯಾರು ಇರುತ್ತಾರೋ ಅವರೇ ಆಡಿಟ್ ಮಾಡುವುದರಿಂದ ಹೆಚ್ಚು ಕಡಿಮೆ ಆಗುತ್ತದೆ ಎಂದು. ಅದನ್ನು ಒಪ್ಪುತ್ತೇನೆ. ಆದುದರಿಂದ ಇದನ್ನು ರೀಆರ್ಗನೈಸೇಷನ್ ಮಾಡಿ ಆಡಿಟ್ ಡಿಪಾರ್ಟ್‌ಮೆಂಟ್ ಅಂತ ಬೇರೆ ಒಂದು ವ್ಯವಸ್ಥೆ ಮಾಡಿ ಅದಕ್ಕೆ ಐ. ಎ. ಎಸ್. ಕೇಡರ್ ಒಬ್ಬರನ್ನು ಮುಖ್ಯಾಧಿಕಾರಿಗಳಾಗಿ ಮಾಡಿ ಅವರದೇ ಒಂದು ಸಪರೇಟ್ ಆಡಿಟ ಕೇಡರ್ ಮಾಡಬೇಕು ಎನ್ನುವ ವಿಷಯದಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ. ಮತ್ತು ಕೆಲವು ವಿಷಯದಲ್ಲಿ ಕೋ ಆಪರೇಟೀವ್ ಸೊಸೈಟಿ ಆಕ್ಟ್‌ನಲ್ಲಿ ಮತ್ತು ರೂಲ್ಸ್‌ನಲ್ಲಿ ಕೆಲವು ಸಲಹೆಗಳು ಬಂದಿವೆ. ಏನೆಂದರೆ ಎರಡು ವರ್ಷ ಬಾರ್ ಆ ನಂತರ ಸಿವಿಲ್ ಕೋರ್ಟ್‌ಗೆ ಹೋಗಕೂಡದು ಎಂದು ಒಂದು ಕಾನೂನು ಇದೆ. ಕೆಲವು ಸಂದರ್ಭದಲ್ಲಿ ಏನಾಗುತ್ತದೆ ಎಂದರೆ ಆಡಿಟ್ ಮಾಡುವಾಗ ಎರಡು ವರ್ಷ ತಡೆ ಹಾಕಿದರೆ ಹೈಕೋರ್ಟಿನ ತೀರ್ಪು ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆತನು ದುರುಪಯೋಗ ಮಾಡಿದ್ದರೆ ಆತನಿಂದ ಎರಡು ವರ್ಷದೊಳಗೆ ಆ ಹಣವನ್ನು ವಸೂಲ್ಮಾಡಬೇಕೆಂದು ತೀರ್ಪು ಇದೆ. ಆದುದರಿಂದ ಈ ಟೈಂ ಲಿಮಿಟ್ ಏನು ಇದೆ ಅದನ್ನು ತೆಗೆದುಹಾಕಬೇಕು ಎನ್ನುವುದು ಪರಿಶೀಲನೆಯಲ್ಲಿದೆ. ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಇನ್ನೊಂದು ವಿಷಯ ಏನೆಂದರೆ ಸದಸ್ಯರು ಒಂದು ಸಲಹೆ ಕೊಟ್ಟರು. ಅದು ನ್ಯಾಯವಾದ ಸಲಹೆ. ಕೆಲವು ಸೊಸೈಟಿಗಳು ಲಿಕ್ವಿಡೇಟ್ ಆದಾಗ ಇನ್ನೊಂದು ಸೊಸೈಟಿಗೆ ಎಮಾಲ್ಗಮೇಟ್ ಮಾಡಿಕೊಂಡು ಅದನ್ನು ದೊಡ್ಡದಾಗಿ ಹೋಗಲಿಕ್ಕೆ ಸಾಧ್ಯವೇ ಎಂದು ಸಲಹೆ ಕೊಟ್ಟರು. ಈಗಿರುವ ಕಾನೂನಿನ ಪ್ರಕಾರ ಒಟ್ಟಿಗೆ ಸೇರಬೇಕು ಎಂದು ಹೇಳಲಿಕ್ಕೆ ಆಗುವುದಿಲ್ಲ. ಯಾವುದಾದರೂ ಒಂದು ಸೊಸೈಟಿ ಸರಿಯಾಗಿ ಕೆಲಸ ಮಾಡದೇ ಹೋದರೆ ಅವರೇ ಒಟ್ಟಿಗೆ ಸೇರಿಕೊಂಡು ಚೆನ್ನಾಗಿ ನಡೆಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ನಾನು ಮೊದಲೇ ಅರಿಕೆ ಮಾಡಿಕೊಂಡ ಹಾಗೆ ಶ್ರೀ ಬಂಗಾರಪ್ಪನವರು ಇದರ ಬಗ್ಗೆ ಏನಾಗಬೇಕು ಎಂದು ಸೂಚನೆ ಕೊಡಲಿಲ್ಲ. ಆದರೆ ಅವರು ಮಂತ್ರಿಗಳಿಗೆ ಆಫೀಸರ್ಸ್ ಮೇಲೆ ಹತೋಟಿ ಇಲ್ಲ ಎಂದು ಹೇಳಿದರು. ಆರೀತಿ ಏನೂ ಇಲ್ಲ. ತಪ್ಪು ಕಂಡಾಗ ಯಾವರೀತಿ ಕ್ರಮ ತೆಗೆದುಕೊಳ್ಳಬೇಕೋ ಆರೀತಿ ತೆಗೆದುಕೊಳ್ಳುತ್ತೇವೆ.

ಇನ್ನು ರೆಗ್ಯುಲೇಟೆಡ್ ಮಾರ್ಕೆಟ್ ವಿಷಯ. ವರ್ಲ್ಡ್ ಬ್ಯಾಂಕ್‌ನಿಂದ ದೊಡ್ಡ ಮೊತ್ತದಲ್ಲಿ ಸಾಲ ಸಿಕ್ಕಲಿಕ್ಕೆ ಹತ್ತಿದೆ. ಅದು ಸಾಧಾರಣ 42 ಕೋಟಿ ರೂಪಾಯಿ. ಅದರಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಏಳಿಗೆಗಾಗಿ ಅವುಗಳನ್ನೆಲ್ಲಾ ಸರಿಪಡಿಸಲಿಕ್ಕೆ ದೊಡ್ಡ ಮೊತ್ತದಲ್ಲಿ ಸಾಲ ಕೊಡಲಿಕ್ಕೆ ಹತ್ತಿದ್ದಾರೆ. ಸಾಮಾನ್ಯವಾಗಿ ಐ. ಡಿ. ಐ. ನವರು 85 ಪರ್ಸೆಂಟ್ ಕೊಡಲಿಕ್ಕೆ ತಯಾರಾಗಿದ್ದಾರೆ. ಈ ವಿಷಯದಲ್ಲಿ ಕಳೆದ ತಿಂಗಳು ಒಂದು ಅಪ್ರೈಸರ್ ಟೀಮ್ ಬಂದಿತ್ತು. ಅವರು ನಮ್ಮ ರಾಜ್ಯದಲ್ಲಿ ಸಂಚರಿಸಿ ನಿರ್ಣಯ ಕೊಟ್ಟು ಹೋಗಿದ್ದಾರೆ. ಆದುದರಿಂದ ಅದೂ ಸಹ ಬೇಗನೆ ಬರಲಿಕ್ಕೆ ಹತ್ತಿದೆ. ಅದು ಸಹಕಾರ ಸಂಘಗಳಿಗೆ ಹಾಗೂ ರಾಜ್ಯದ ಮಟ್ಟಕ್ಕೆ ಅನೇಕ ಸವಲತ್ತುಗಳಿಗೆ ಸಿಕ್ಕುತ್ತದೆ. ಅವರು ಸಂಸ್ಥಾನಾವಳಿ ಸಂಚರಿಸಿ ಪರಿಶೀಲನೆ ಮಾಡಿ ರಿಪೋರ್ಟ್ ಕೊಡುತ್ತಾರೆ. ಆ ರಿಪೋರ್ಟ್ ಬಂದಮೇಲೆ ನಮಗೆ ಅನೇಕ ಇಂಪೋರ್ಟ್ಸ್, ಸಾಲ ಇವು ಸಿಕ್ಕುವ ಸಂಭವ ಇದೆ. ಮಾನ್ಯ ಸದಸ್ಯರು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಒಂದು ವಿಷಯ ಮಾತ್ರ ಹೇಳುತ್ತೇನೆ. ಶ್ರೀ ಬಂಗಾರಪ್ಪನವರು ಇನ್ನು ಸ್ವಲ್ಪ ಮುಂದೆ ಹೋದರೆ ನನ್ನನ್ನು ಸಾಬೀತು ಮಾಡಬಹುದು ಎನ್ನುವ ನಂಬಿಕೆ ಇದೆ. ಅಧ್ಯಕ್ಷರೇ, ಮಾನ್ಯ ಸದಸ್ಯರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ, ಸದಸ್ಯರು ಯಾರಾದರೂ ಒಂದು ಸಂಘದಲ್ಲಿ ತಪ್ಪಾಗಿದೆ ಎಂದು ಹೇಳಲಿ, ಒಬ್ಬರಿಗೆ ಅನ್ಯಾಯವಾಗಿದೆ ಎಂದು ಹೇಳಲಿ, ಸೊಸೈಟಿಯಲ್ಲಿ ಹಣ ತಿಂದು ಹಾಕಿದ್ದಾರೆ ಎಂದು ಹೇಳಲಿ ಅಥವಾ ಅವರೇ ಖುದ್ದಾಗಿ ಬಂದು ಸರ್ಕಾರಕ್ಕೆ ತಿಳಿಸಿದರೆ ನಿಜವಾಗಿಯೂ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇನೆ ಮತ್ತು ಅವರು ಯಾವ ಪಕ್ಷಕ್ಕೇ ಸೇರಿರಲಿ ಅದನ್ನು ಗಮನಕ್ಕೆ ತೆಗೆದುಕೊಳ್ಳದೆ ಅದಕ್ಕೆ ತಕ್ಕ ಕ್ರಮ ಕೈಗೊಳ್ಳುತ್ತೇನೆ. ಇಷ್ಟು ಹೇಳಿದ ಮೇಲೆ ಶ್ರೀ ಬಂಗಾರಪ್ಪನವರಿಗೆ ಕೋಪ ಇನ್ನು ಬರುವುದಿಲ್ಲ ಎಂದು ತಿಳಿಯುತ್ತೇನೆ.

(ಶ್ರೀ ಎ. ಶಂಕರ ಆಳ್ವ)

ಸಹಕಾರ ಸಂಸ್ಥೆಗಳ ನೌಕರರಿಗೆ ಸಂಬಂಧಪಟ್ಟಂತೆ ಪೇ ಕಮಿಟಿ ಮಾಡುವ ವಿಚಾರದಲ್ಲಿ ಸ್ವಲ್ಪ ಆಲೋಚನೆ ಮಾಡಬೇಕಾಗಿದೆ. ಪ್ರತಿಯೊಂದು ಸೊಸೈಟಿಯಲ್ಲಿಯೂ ಒಂದೇ ರೀತಿ ಇರುವುದಿಲ್ಲ. ಕೆಲವೊಂದು ಸೊಸೈಟಿಯು ನೌಕರರಿಗೆ ಜಾಸ್ತಿ ಸಂಬಳ ಕೊಡುವುದಕ್ಕೆ ಸಾಧ್ಯವಾಗುತ್ತದೆ, ಕೆಲವು ಸೊಸೈಟಿಗಳಿಗೆ ಅಷ್ಟು ಕೊಡುವುದಕ್ಕೆ ಅಗುವುದಿಲ್ಲ. ಇಷ್ಟು ಮಾತ್ರ ಹೇಳಿ ಮಾನ್ಯ ಸದಸ್ಯರು ಈ ಬೇಡಿಕೆಗಳಿಗೆ ಒಪ್ಪಿಗೆಯನ್ನು ಕೊಡಬೇಕೆಂದು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

6-00 P.M.

MADAM SPEAKER.—Now I will put the Demand to the vote of the House. The question is:

"That a sum not exceeding Rs. 3,20,22,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 23 'Co-operation'."

The motion was adopted.

MADAM SPEAKER.—Now, next item, calling attention to matters of urgent public importance.

Calling Attention to a Matter of Urgent Public Importance

re: Selection of Candidates for Post of Sub-Inspectors of Police.

Sri B. PUTTASWAMAIAH (Ramanagaram).—I call the attention of the Hon. Chief Minister to the selection of candidates for the posts of Sub-Inspector of Police.

† Sri R. D. KITTUR (Minister of State for Home).—Sir, the recruitment of candidates for the posts of Police Sub-Inspectors was conducted in accordance with the Recruitment Rules. Physical test, written test, speaking test and *viva-voce* have been held. The final interviews were conducted by a Committee consisting of the Home Secretary, Inspector General of Police, Commissioner of Police and Director of Social Welfare. The list of successful candidates has now been finalised and has been published. The alleged apprehension in the mind of the public that the list may undergo a change has no foundation.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇದು ಒಂದು ಸ್ಟೇಟ್‌ಮೆಂಟೇ ಅಥವಾ ಏನು ಎಂದು ನಾವು ಅರ್ಥ ಮಾಡಿಕೊಳ್ಳಬೇಕು?

Sri C. M. ARUMUGAM.—Sir, the statement is very brief and does not give the full details like number of candidates applied for the posts, and number of them interviewed and selected etc.